ಶಂಕರ ನಾರಾಯಣ, ಅಮ್ಮೆಂಬಳ.

ಹರಿಜನ ಸೇವೆ

ಅಥವಾ ಹರಿಸೇವೆ

ಮಹಾತ್ಮಾ ಗಾಂಧಿಯವರು
ಯೆರವಾಡಾ ಜೈಲಿನಿಂದ
ಬರೆದ ಲೇಖನಗಳು.

ಹಿ. ರಾ. ಮಲ್ಯ
(ಪ್ರಕಾಶಕ.)

ಕ್ಕಣೆಮಾಲೆ-ನಂಬ್ರ ೧

ಶಂಕರ ನಾರಾಯಣ, ಅಮ್ಮೆಂಬಳ

ಹರಿಜನ ಸೇವೆ

ವಿ.ವಿ. ೬೯

ಅಥವಾ ಹರಿಸೇವೆ

ಮಹಾತ್ಮಾ ಗಾಂಧಿಯುವರು
ಯೆರವಾಡಾ ಜ್ಯೈಲಿನಿಂದ
ಬರೆದ ಲೇಖನಗಳು.

ಹಿ. ರಾ. ಮಲ್ಯ
(ಪ್ರಕಾಶಕ.)

ನಾಲ್ಕಾಣೆಮಾಲೆ-ನಂಬ್ರ ೧

ಮುನ್ನುಡಿ.

ಅಸ್ಪೃಶ್ಯತಾ ನಿವಾರಣೆಯ ಕುರಿತು ಪ್ರಚಾರಕಾರ್ಯ ಮಾಡಲು ಸರಕಾರದವರು ಮಹಾತ್ಮಾಜಿಯವರಿಗೆ ಸ್ವಾತಂತ್ರ್ಯ ಕೊಟ್ಟಾಗಲಿಂದ ಅವರು ಈ ಲೇಖಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವರು. ಮೊದಲನೆಯ ಹತ್ತು ಲೇಖಗಳನ್ನು ಇದ್ದಕ್ಕಿದ್ದಂತೆ ಕನ್ನಡಿಸಿ ಈ ಚಿಕ್ಕ ಸಂಗ್ರಹದಲ್ಲಿ ಕೊಡಲಾಗಿದೆ.

ಭಾಷಾದೃಷ್ಟಿಯಿಂದ ಹಲವು ದೋಷಗಳಿರಬಹುದಾದರೂ ಜಾಗರೂಕತೆಯಿಂದ ಓದಿದರೆ ಮಹಾತ್ಮಾಜಿಯವರ ಅಭಿಪ್ರಾಯಗಳನ್ನು ಈ ಬರವಣಿಗೆಯಿಂದ ತಿಳಿಯಬಹುದಾಗಿ ನಂಬುತ್ತೇನೆ.

ಇಲ್ಲಿ ಕೊಟ್ಟಿರುವುದನ್ನು ವಾಚಕರು ಆದರದಿಂದ ಸ್ವೀಕರಿಸಿದರೆ ಮುಂದೆ ಇದೇ ರೀತಿ ದೇಶದ ಮುಂದಿರುವ ಜೀವಂತ ಪ್ರಶ್ನೆಗಳ ಕುರಿತು ಪ್ರತಿಯೊಬ್ಬರೂ ಓದಲೇ ಬೇಕಾದ ಬರವಣಿಗೆಗಳನ್ನು ನಾಲ್ಕಾಣೆ ಮಾಲೆಯ ರೂಪದಿಂದ ಕನ್ನಡಿಗರ ಮುಂದಿರಿಸಲು ಬಯಸುತ್ತೇನೆ.

ಮಂಗಳೂರು,
15—2—1933.

ಹಿ. ರಾ.

ಲೇಖಾಂಕ ೧.

ಉಪವಾಸದ ನಂತರ 'ಅಸ್ಪೃಶ್ಯತೆ'ಯ ಕುರಿತು ಸರಿಯಾಗಿ ವಿವರಿಸಬೇಕೆಂದು ನಾನು ಎಣಿಸಿದ್ದರೂ ನನ್ನ ವಶವಿಲ್ಲದ ಕಾರಣಗಳ ದೆಸೆಯಿಂದ ಇದುವರೆಗೆ ಸಾಧ್ಯವಾಗಲಿಲ್ಲ. ಆದರೆ ಈಗ ಈ ವಿಚಾರದಲ್ಲಿ ಪ್ರಚಾರಕಾರ್ಯವನ್ನು ಕೈಕೊಳ್ಳಲಿಕ್ಕೆ ಸರಕಾರದವರು ನನಗೆ ಅನುಮತಿ ಕೊಟ್ಟಿರುವುದರಿಂದ ಯೆರವಾಡ ಒಪ್ಪಂದವನ್ನು ಖಂಡಿಸಿಯಾಗಲೀ ಈ ಚಳವಳದ ಸಮಯದಲ್ಲಿ ಬರುವ ವಿವಿಧ ಪ್ರಶ್ನೆಗಳ ಕುರಿತಾಗಲೀ ನನಗೆ ಅನೇಕ ಜನರು ಬರೆದಿರುವ ಪತ್ರಗಳಿಗೆ ಈ ಲೇಖಾಂಕಗಳ ಮೂಲಕ ಉತ್ತರ ಕೊಡಲಿಕ್ಕೆ ಸಾಧ್ಯವಾಗಿದೆ.

ಈ ಪ್ರಥಮ ಲೇಖದಲ್ಲಿ ಮೊದಲಾಗಿ ಉತ್ತರ ಕೊಡಬೇಕಾದ ಕೆಲವು ಪ್ರಶ್ನೆಗಳನ್ನು ಮಾತ್ರ ಚರ್ಚಿಸಿ ಉಳಿದವುಗಳನ್ನು ಮುಂದಿನ ಲೇಖನಗಳಿಗೆ ಬಾಕಿ ಇಡುತ್ತೇನೆ.

ಉಪವಾಸವನ್ನು ಪುನಃ ಕೈಕೊಳ್ಳುವ ಸಂಭವವು ಎಷ್ಟರ ಮಟ್ಟಿಗಿದೆ ಎಂಬುದು ಮೊದಲ ಪ್ರಶ್ನೆ. ಉಪವಾಸದಲ್ಲಿ ಒಂದು ಬಗೆಯ ಬಲಾತ್ಕಾರವಿರುವುದರಿಂದ ಅದನ್ನು ಕೈಕೊಳ್ಳಬಾರದಿತ್ತೆಂದೂ ಅದನ್ನು ಸರ್ವಥಾ ಪುನಃ ಕೈಕೊಳ್ಳಬಾರದೆಂದೂ ಕೆಲವರು ಬರೆದಿದ್ದಾರೆ. ಹಿಂದೂ ಧರ್ಮದಲ್ಲಾಗಲಿ ಇನ್ನಾವ ಧರ್ಮದಲ್ಲಾಗಲಿ ನಾನು ಕೈಕೊಂಡಂಥ ಉಪವಾಸಕ್ಕೆ ಆಧಾರವಿಲ್ಲವೆಂದು ಇನ್ನು ಕೆಲವು ಲೇಖಕರು ವಾದಿಸುತ್ತಾರೆ. ಇದರ ಧಾರ್ಮಿಕ ಸ್ವರೂಪವನ್ನು ಈಗ ಚರ್ಚಿಸಲಿಚ್ಛಿಸುವುದಿಲ್ಲ. ದೇವರ ಪ್ರೇರಣೆಯಿಂದಲೇ ನನ್ನ ಕಳೆದ ಉಪವಾಸವನ್ನು ಕೈಕೊಂಡೆನೆಂದೂ ಇನ್ನೊಮ್ಮೆ ಅದನ್ನು ಕೈಕೊಳ್ಳುವುದಾದರೂ ಆತನ ಪ್ರೇರಣೆ ಇದ್ದಾಗ ಮಾತ್ರವೆಂದೂ ನಾನು ಹೇಳಿದರೆ ಸಾಕು. ಆದರೆ ನಾನು ಉಪವಾಸವನ್ನು ಕೈಕೊಂಡಾಗ ನನ್ನ ಉದ್ದೇಶವು ಅಸ್ಪೃಶ್ಯತೆಯ ಸಮೂಲ ನಾಶವಿತ್ತೆಂಬುದಕ್ಕೆ ಸಂಶಯವಿಲ್ಲ. ಅದು ತಾಳಿದ

ಸ್ವರೂಪಕ್ಕೆ ನಾನು ಜವಾಬ್ದಾರನಲ್ಲ. ಬ್ರಿಟಿಷ ಮಂತ್ರಿಮಂಡಲದ ಇತ್ಯರ್ಥವು ನನ್ನ ಜೀವನದಲ್ಲಿ ಈ ವಿಶೇಷ ಪರಿಸ್ಥಿತಿಯನ್ನು ತಂದೊಡ್ಡಿತು. ಆ ಇತ್ಯರ್ಥದ ಬದಲಾವಣೆಯು ನನ್ನ ಕಾರ್ಯಸಾಧನೆಯ ಆರಂಭ ಮಾತ್ರವೆಂದು ನನಗೆ ಗೊತ್ತಿದೆ. ಒಂದು ಪ್ರಬಲವಾದ ಶಕ್ತಿಯನ್ನು ಸೃಷ್ಟಿಸುವಾಗ ಅದರ ಉದ್ದೇಶವು ಬರೇ ಒಂದು ರಾಜಕೀಯ ಇತ್ಯರ್ಥದ ಬದಲಾವಣೆ ಮಾತ್ರವಿರುವುದು ಸಾಧ್ಯವಿಲ್ಲ. ಅದರ ಹಿಂದೆ ಆರಂಭಿಸಿದವರಿಗೆ ಗೊತ್ತಿರುವುದಕ್ಕಿಂತಲೂ ಹೆಚ್ಚಿನ ಅರ್ಥವಿರುತ್ತದೆ. ಯಾರ ಮೇಲೆ ಇದರ ಪರಿಣಾಮವಾಯಿತೋ ಅವರಿಗೆ ಇದರ ಸರಿಯಾದ ಅರ್ಥವಾಗಿ ತಕ್ಕ ಕೆಲಸಕ್ಕೆ ಅವರು ಕೈ ಹಚ್ಚಿರುವರು.

ನಮ್ಮ ಸ್ಮರಣೆಯಲ್ಲಿರುವ ಈಗಿನ ಸಮಯದಲ್ಲಿ ಹಿಂದುಸ್ಥಾನದ ಒಂದು ಬದಿಯಿಂದ ಇನ್ನೊಂದು ಬದಿಗೆ ನಾನು ಪ್ರಯಾಣ ಬೆಳೆಸಿದಷ್ಟು ಬಾರಿ ಪ್ರಯಾಣ ಮಾಡಿದವರು ಅಥವಾ ಅಷ್ಟೊಂದು ಹಳ್ಳಿಹಳ್ಳಿಗಳಿಗೆ ಕೂಡ ಹೋಗಿ ಅಷ್ಟೊಂದು ಮಿಲಿಯಗಟ್ಟಲೆ ಜನರ ಸಂಬಂಧ ಬೆಳೆಸಿದವರು ಮತ್ತೆ ಯಾರೂ ಪ್ರಾಯಶಃ ಇಲ್ಲವೆನ್ನಬಹುದು. ಅವರೆಲ್ಲರಿಗೆ ನನ್ನ ಜೀವನವು ಗೊತ್ತಿದೆ ಮತ್ತು ನಾನು ಸ್ಪೃಶ್ಯಾಸ್ಪೃಶ್ಯಭೇದ ಅಥವಾ ಜಾತಿ—ಜಾತಿಗಳೊಳಗೆ ಭೇದ ಮಾಡುವುದಿಲ್ಲವೆಂದು ಅವರು ಕೇಳಿರುವರು. ಅಸ್ಪೃಶ್ಯತೆಯು ಹಿಂದೂ ಧರ್ಮದ ಮೇಲಿನ ಕಲಂಕವೆಂದೂ ಇದೊಂದು ಶಾಪವೆಂದೂ ನಾನು ಖಂಡಿತ ಶಬ್ದಗಳಲ್ಲಿ ಅದನ್ನು ವರ್ಣಿಸುತ್ತ ಹೆಚ್ಚಾಗಿ ಅವರ ಸ್ವಭಾಷೆಯಲ್ಲೇ ಹೇಳಿದ್ದನ್ನು ಅವರು ಕೇಳಿರುವರು. ದೇಶದ ಎಲ್ಲಾ ಭಾಗಗಳಲ್ಲಿ ನೂರಾರು ಮಹಾಜನ ಸಭೆಗಳಲ್ಲಿ ಅಥವಾ ಖಾಸಗಿ ಸಭೆಗಳಲ್ಲಿ ಅಪರೂಪದ ಆಕ್ಷೇಪಗಳನ್ನುಳಿದು ಸಾಮಾನ್ಯವಾಗಿ ಜನರು ನನ್ನ ಅಸ್ಪೃಶ್ಯತಾವಿರುದ್ಧ ಮಾತುಗಳಿಗೆ ಆಕ್ಷೇಪವೆತ್ತಿದ್ದಿಲ್ಲ. ಅಸ್ಪೃಶ್ಯತೆಯನ್ನು ಖಂಡಿಸಿ ದೊಡ್ಡ ಜನಸಮುದಾಯಗಳು ನಿರ್ಣಯಗಳನ್ನು ಮಂಜೂರು ಮಾಡಿರುವವು. ಅವರ ನಡುವಿನಿಂದ ಇದನ್ನು ತೆಗೆದು ಹಾಕುವೆವೆಂದು ಪ್ರತಿಜ್ಞೆ ಕೈಕೊಂಡಿರುವರು. ಎಷ್ಟೋ ಬಾರಿ ಇಂಥ ಪ್ರತಿಜ್ಞೆಗಳಿಗೆ ದೇವರನ್ನು ಸಾಕ್ಷಿಯಾಗಿಟ್ಟು ಅದನ್ನು ಪಾಲಿಸುವುದಕ್ಕೆ ಶಕ್ತಿ ಕೊಡ

ಬೇಕೆಂದು ಆತನೊಡನೆ ಪ್ರಾರ್ಥಿಸಿರುವರು. ಈ ಮಿಲಿಯಗಟ್ಟಲೆ ಜನರ ಮೇಲೆ ಪರಿಣಾಮವಾಗಬೇಕೆಂಬುದೇ ನನ್ನ ಉಪವಾಸದ ಉದ್ದೇಶವು. ಅವರಿಗೆ ನನ್ನ ಮೇಲಿರುವ ಸಹಜ ಪ್ರೇಮದ ದೆಸೆಯಿಂದಲೇ ಐದು ದಿನಗಳ ಒಳಗೆ ಪರಿಸ್ಥಿತಿಯು ಬದಲಾಯಿಸುವಂತಾಯಿತು ಮತ್ತು ಯೆರವಾಡ ಒಪ್ಪಂದದ ಜನನವಾಯಿತು. ಈ ಒಪ್ಪಂದವನ್ನವರು ಸಂಪೂರ್ಣ ಜಾರಿಗೆ ತಾರದಿದ್ದರೆ ಅವರ ಮೇಲೆ ಪರಿಣಾಮವಾಗುವುದಕ್ಕಾಗಿಯೇ ಉಪವಾಸವು ಪುನಃ ಆರಂಭಿಸಲ್ಪಡುವುದು.

ಸರಕಾರದವರು ಈಗ ಈ ಪ್ರಶ್ನೆಯು ಹೊರಗಾದರು. ಈ ಭಾಗದಲ್ಲಿ ಅವರ ಕರ್ತವ್ಯವನ್ನು ಅವರು ಕೂಡಲೆ ಮಾಡಿರುವರು. ಯೆರವಾಡಾ ಒಪ್ಪಂದದ ಮುಖ್ಯ ಭಾಗವನ್ನು ನನ್ನ ಸಭೆಗಳಿಗೆ ಬರುತ್ತಿದ್ದ ಸವರ್ಣ ಹಿಂದುಗಳೆನ್ನಿಸುವ ಈ ಮಿಲಿಯಗಟ್ಟಲೆ ಜನರು ಪಾಲಿಸ ತಕ್ಕದ್ದಾಗಿದೆ. ಅಡಿಗೊತ್ತಲ್ಪಟ್ಟ ಈ ಸಹೋದರ ಸಹೋದರಿಯರನ್ನು ತಮ್ಮವರನ್ನಾಗಿ ಭಾವಿಸಿ ತಮ್ಮ ದೇವಸ್ಥಾನಗಳಿಗೆ, ತಮ್ಮ ಮನೆಗಳಿಗೆ, ತಮ್ಮ ಶಾಲೆಗಳಿಗೆ ಇವರು ಆಮಂತ್ರಿಸಬೇಕಾಗಿಯದೆ.

ಗ್ರಾಮಗ್ರಾಮಗಳಲ್ಲಿರುವ ಈ 'ಅಸ್ಪೃಶ್ಯ'ರಲ್ಲಿ ತಮ್ಮ ಬಂಧನವು ಕಡಿದುಹೋಯಿತೆಂದೂ ತಾವು ಇತರ ಗ್ರಾಮಸ್ಥರಿಗೆ ಕೀಳಾದವರಲ್ಲವೆಂದೂ ಇತರರಂತೆ ಅದೇ ದೇವರನ್ನು ತಾವೂ ಪೂಜಿಸುವವರೆಂದೂ ತಮಗೂ ಇತರರೊಡನೆ ಸಮಾನ ಹಕ್ಕುಗಳಿವೆಯೆಂದೂ ಭಾವನೆಯನ್ನು ಹುಟ್ಟಿಸಬೇಕು.

ಒಪ್ಪಂದದ ಈ ಮುಖ್ಯ ಶರ್ತಗಳು ಸವರ್ಣ ಹಿಂದುಗಳಿಂದ ಪಾಲಿಸಲ್ಪಡದಿದ್ದರೆ ನಾನು ದೇವರನ್ನಾಗಲಿ ಮನುಷ್ಯನನ್ನಾಗಲಿ ಮುಖವೆತ್ತಿ ನೋಡಿ ಬದುಕಲಿಕ್ಕೆ ಸಾಧ್ಯವಿದೆಯೆ? ಒಪ್ಪಂದದ ಈ ಭಾಗವನ್ನು ಸವರ್ಣ ಹಿಂದುಗಳು ಪಾಲಿಸುವಂತೆ ನಾನು ಜವಾಬ್ದಾರನಿರುವೆನೆಂದು ಡಾಕ್ಟರ ಅಂಬೇಡಕರ ಹಾಗೂ ರಾವ್‌ಬಹದ್ದೂರ ಎಮ್. ಸಿ. ರಾಜ ಮೊದಲಾದವರಿಗೆ ಹೇಳುವ ಸಾಹಸವನ್ನು ಕೂಡ ಮಾಡಿದ್ದೇನೆ. ಉಪವಾಸವು ಪುನಃ ಬರುವುದಾದರೆ ಅದು ಸುಧಾರಣೆಗೆ ವಿರೋಧವಿರುವವರ

ಮೇಲೆ ಬಲಾತ್ಕಾರ ನಡೆಸುವುದಕ್ಕಲ್ಲ, ಆದರೆ ನನ್ನ ಜೊತೆ ಕೆಲಸಗಾರರು ಮತ್ತು ಅಸ್ಪೃಶ್ಯತೆಯನ್ನು ಕಿತ್ತೊಗೆಯಲು ಪ್ರತಿಜ್ಞೆಯನ್ನು ಕೈಕೊಂಡವರು ಸರಿಯಾಗಿ ಕೆಲಸಮಾಡುವಂತೆ ಪ್ರೇರೇಪಿಸುವುದೇ ಅದರ ಉದ್ದೇಶವಾಗುವುದು. ಅವರು ತಮ್ಮ ಪ್ರತಿಜ್ಞೆಯನ್ನು ಮುರಿದು ಅದರಂತೆ ನಡೆಯುವುದಿಲ್ಲವೆಂದಾದರೆ ಅವರ ಹಿಂದೂಧರ್ಮವು ಒಂದು ದೇಖಾವೆ ಮಾತ್ರವೆಂದಾದರೆ ನನಗೆ ಜೀವನದಲ್ಲಿ ಮತ್ತೆ ಆಶೆ ಉಳಿಯುವಂತಿಲ್ಲ. ಆದುದರಿಂದ ನನ್ನ ಉಪವಾಸದಿಂದ ಸುಧಾರಣೆಯ ವಿರುದ್ಧಪಕ್ಷದ ಮೇಲೆ ಪರಿಣಾಮವಾಗಬೇಕಾಗಿಲ್ಲ ಮಾತ್ರವಲ್ಲ ನನ್ನ ಮತ್ತು ಕಾಂಗ್ರೆಸಿನ ಅಸ್ಪೃಶ್ಯತಾನಿವಾರಣೆಯ ಈ ಚಳವಳಕ್ಕೆ ಅನುಕೂಲಮತವುಳ್ಳವರೆಂದು ನನ್ನನ್ನು ನಂಬಿಸಿದ ಈ ಮಿಲಿಯಗಟ್ಟಲೆ ಜನರು ಹಾಗೂ ಜೊತೆ ಕೆಲಸಗಾರರು ಈ ವಿಷಯವನ್ನು ಪುನರಾಲೋಚಿಸಿ ಈ ಅಸ್ಪೃಶ್ಯತೆಯು ದೇವರ ಹಾಗೂ ಮನುಷ್ಯತ್ವದ ಸಮ್ಮುಖದಲ್ಲಿ ಅಪರಾಧವಲ್ಲವೆಂದು ನಿರ್ಧರಿಸಿರುವರಾದರೆ ಅವರಿಗೂ ಇದರಿಂದ ಪರಿಣಾಮವಾಗಬೇಕಾಗಿಲ್ಲ. ತನ್ನ ಮತ್ತು ಇತರರ ಆತ್ಮಶುದ್ಧಿಗಾಗಿ ಉಪವಾಸಮಾಡುವುದು ಬಹುಕಾಲದಿಂದ ಬಂದ ಕ್ರಮವೆಂದೂ ಮನುಷ್ಯನಿಗೆ ದೇವರಲ್ಲಿ ವಿಶ್ವಾಸವಿರುವ ತನಕ ಅದು ಉಳಿಯುವುದೆಂದೂ ನನ್ನ ಅಭಿಪ್ರಾಯವಿರುತ್ತದೆ. ನನ್ನ ತರ್ಕವು ಸರಿಯಾಗಲಿ ಹುಚ್ಚಾಗಲಿ ಅದರಲ್ಲಿಯ ತಪ್ಪು ಅಥವಾ ಹುಚ್ಚುತನವು ನನಗೆ ಕಂಡುಬರುವಲ್ಲಿ ತನಕ ನಾನದನ್ನು ಬಿಡಲಾರೆನು. ಯೆರವಾಡ ಒಪ್ಪಂದದ ಶರ್ತಗಳನ್ನು ಅನ್ಯಾಯದ ಅಸಡ್ಡೆಯಿಂದ ಸವರ್ಣ ಹಿಂದುಗಳು ಪಾಲಿಸದೆ ಒಪ್ಪಂದವು ವ್ಯಕ್ತರೀತಿಯಲ್ಲಿ ಮುರಿದಾಗ ಮಾತ್ರ ಮತ್ತು ಅಂತರಾತ್ಮನ ಪ್ರೇರೇಪಣೆ ಇದ್ದಾಗ ಮಾತ್ರ ಉಪವಾಸವು ಪುನಃ ಕೈಕೊಳ್ಳಲಾಗುವುದು. ಈ ಬಗೆಯ ಅಸಡ್ಡೆಯು ಹಿಂದೂ ಧರ್ಮದ ದ್ರೋಹವಿರುವುದರಿಂದ ನಾನು ಅದರ ಜೀವಂತ ಸಾಕ್ಷಿಯಾಗಿರಲು ಇಚ್ಛಿಸುವುದಿಲ್ಲ.

ಕೇರಳದ ಗುರುವಾಯೂರು ದೇವಸ್ಥಾನವನ್ನು ತೆರೆಯುವ ವಿಷಯದಲ್ಲಾದರೊ ಇನ್ನೊಂದು ಉಪವಾಸವನ್ನು ಕೈಕೊಳ್ಳುವುದು ಹತ್ತಿರದಲ್ಲಿರುವ ಸಂಭವವಿರುತ್ತದೆ. ಯಾವ ಉಪವಾಸದಿಂದ ಅವರು

ಮರಣದ ಬಾಗಿಲ ತನಕ ಹೋಗಿದ್ದರೋ ಅಂಥ ಉಪವಾಸವನ್ನು ಶ್ರೀ ಕೇಳಪ್ಪನವರು ನನ್ನ ಒತ್ತಾಯದಿಂದ ಮೂರು ತಿಂಗಳ ತನಕ ನಿಲ್ಲಿಸಿರುವರು. ತಾ. 1—1—'33ರ ಒಳಗೆ ಆ ದೇವಸ್ಥಾನಕ್ಕೆ ಇತರ ಹಿಂದುಗಳಿಗೆ ಪ್ರವೇಶವಿರುವ ಶರ್ತಗಳಲ್ಲಿ 'ಅಸ್ಪೃಶ್ಯ'ರಿಗೂ ಪ್ರವೇಶ ದೊರೆಯದಿದ್ದರೆ ಮತ್ತು ಅದಕ್ಕಾಗಿ ಶ್ರೀ ಕೇಳಪ್ಪನವರು ಉಪವಾಸವನ್ನು ಕೈಕೊಳ್ಳುವಂತಾದರೆ ನಾನು ಅವರೊಡನೆ ಉಪವಾಸವನ್ನು ಕೈಕೊಳ್ಳುವುದು ನನ್ನ ಧರ್ಮವಾಗುತ್ತದೆ. ಎರಡುಮೂರು ಕಡೆಗಳಿಂದ ಕ್ರೋಧಯುಕ್ತ ಪತ್ರಗಳು ನನಗೆ ಬರುತ್ತಿರುವುದರಿಂದ ಈ ಉಪವಾಸಗಳ ಕುರಿತು ನಾನು ಇಷ್ಟು ಬರೆಯಬೇಕಾಯಿತು. ಈ ಸಂಭವವನ್ನು ಹಿಡಿದು ಜೊತೆ ಕೆಲಸಗಾರರು ಕಳವಳ ಪಡಬೇಕಾಗಿಲ್ಲ. ನಾವು ಎದುರುಗೊಳ್ಳಲು ಇಚ್ಛಿಸದ ಒಂದು ಸಂಭವದ ಕುರಿತು ಧೈರ್ಯ ಕುಂದಿದರೆ ಆ ಸಂಭವವು ನಿಜವಾಗಿಯೂ ಮೂರ್ತಿಮಂತವಾಗಿಯೇ ಪರಿಣಮಿಸುವುದು. ಈ ಸಂಭವವನ್ನು ತಿರುಗಿಸಲಿಕ್ಕೆ ಯಾರಿಗೆ ಅದರ ಪರಿಣಾಮವಿರುವುದೋ ಅವರು ಅದು ಬಾರದಂತೆ ಮಾಡಲು ಬೇಕಾದ ಕಾರ್ಯದಲ್ಲಿ ತಮ್ಮ ಪೂರ್ಣಶಕ್ತಿಯನ್ನು ಉಪಯೋಗಿಸುವುದೇ ಅತ್ಯುತ್ತಮ ದಾರಿಯಾಗಿರುತ್ತದೆ.

ಸಹಭೋಜನ ಹಾಗೂ ಅಂತರ್ವಿವಾಹಗಳು ಅಸ್ಪೃಶ್ಯತಾ ನಿವಾರಣೆಯ ಈ ಕಾರ್ಯಕ್ರಮದ ಭಾಗವಾಗಿರುವವೋ ಎಂದು ಪತ್ರ ಲೇಖಕರು ಕೇಳಿರುವರು. ನನ್ನ ಅಭಿಪ್ರಾಯದಲ್ಲಿ ಅವು ಈ ಕಾರ್ಯಕ್ರಮದ ಭಾಗವಲ್ಲ. ಆ ಪ್ರಶ್ನೆಯು ಅವರ್ಣೀಯರಂತೆ ಸವರ್ಣರೊಳಗೂ ಇರುವ ಪ್ರಶ್ನೆ ಇರುತ್ತದೆ. ಆದುದರಿಂದ ಅಸ್ಪೃಶ್ಯತಾ ನಿವಾರಣೆಯ ಕೆಲಸಗಾರರು ಸಹಭೋಜನ ಹಾಗೂ ಅಂತರ್ವಿವಾಹ ಸುಧಾರಣೆಗಳಲ್ಲಿ ಕೈಹಾಕುವುದು ತಮ್ಮ ಕರ್ತವ್ಯದ ಭಾಗವೆಂದು ತಿಳಿಯಬೇಕಾಗಿಲ್ಲ. ನಾವು ಎಣಿಸಿದ್ದಕ್ಕಿಂತ ಬೇಗನೆ ಈ ಸುಧಾರಣೆಯೂ ಬರುತ್ತದೆಂದು ನನಗೆ ತೋರುತ್ತದೆ. ಸಹಭೋಜನ ಹಾಗೂ ಮದುವೆಗಳ ಮೇಲಿನ ಈ ಬಂಧನವು ಹಿಂದೂಧರ್ಮದ ಒಂದು ಭಾಗವಿರದೆ ಹಿಂದೂಧರ್ಮವು ಅವನತಿಯ ಮಾರ್ಗಕ್ಕೆ ಬರುವಾಗ ಹಿಂದೂಸಮಾ

ಜದ ರಕ್ಷಣೆಗಾಗಿ ಮಾಡಿದ ತಾತ್ಕಾಲಿಕ ಸಾಮಾಜಿಕ ನಿಯಮವಿರುತ್ತದೆ. ಈ ಬಂಧನಗಳು ಈಗ ಸಡಿಲಾಗುತ್ತಿವೆ. ಅವುಗಳಿಗೆ ಅಷ್ಟು ವಿಪರೀತ ಪ್ರಾಮುಖ್ಯತೆಯನ್ನು ಕೊಟ್ಟುದರಿಂದ ಜನಸಾಮಾನ್ಯರ ಮನಸ್ಸು ಜೀವನದ ಬೆಳವಣಿಗೆಗೆ ಅತ್ಯಾವಶ್ಯಕವೆನ್ನಿಸುವ ಮುಖ್ಯ ತತ್ವಗಳಿಂದ ತಿರುಗಿಸಿದಂತಾಗಿದೆ. 'ಸ್ಪೃಶ್ಯ'ರು, 'ಅಸ್ಪೃಶ್ಯರು', ಹಿಂದುಗಳು, ಹಿಂದುಗಳಲ್ಲದವರು ಕೂಡಿ ಸಹಭೋಜನಾದಿಗಳನ್ನು ಜರಗಿಸುವಲ್ಲಿ ಜನರು ತಾವಾಗಿ ಇದರಲ್ಲಿ ಸಹಭಾಗಿಗಳಾದರೆ ಅದೊಂದು ಆರೋಗ್ಯಕರ ಚಿಹ್ನೆಯೆಂದು ನಾನು ಸ್ವಾಗತೀಕರಿಸುತ್ತೇನೆ. ಆದರೆ ಬಹಳಕಾಲದ ಹಿಂದೆಯೇ ಆಗ ಬೇಕಾಗಿದ್ದ ಈ ಅಖಿಲಭಾರತದಲ್ಲಿ ಜರಗಬೇಕಾದ ಅಸ್ಪೃಶ್ಯತಾ ನಿವಾರಣೆಯ ಚಳವಳದಲ್ಲಿ ಬೇರೆ ಸುಧಾರಣೆಯು ಎಷ್ಟು ಆವಶ್ಯಕವೆಂದು ಕಂಡರೂ ಅದನ್ನು ಈ ಕಾರ್ಯಕ್ರಮದಲ್ಲಿ ಸೇರಿಸುವುದನ್ನು ನಾನು ಸ್ವಪ್ನದಲ್ಲಿಯೂ ಯೋಚಿಸಲಾರೆನು. ಈಗ ಕಾಣಸಿಕ್ಕುವಂತೆ ಇರುವ ಅಸ್ಪೃಶ್ಯತೆಯು ಹಿಂದೂಧರ್ಮದ ಜೀವಾಳವನ್ನೆ ಕೊರೆಯುತ್ತದೆ. ಭೋಜನ ವಿವಾಹಬಂಧನಗಳು ಹಿಂದೂ ಸಮಾಜದ ಸರಿಯಾದ ಬೆಳೆವಣಿಗೆಯನ್ನು ತಡೆಯುತ್ತವೆ. ಇವೆರಡರೊಳಗಿನ ಭೇದವು ಮುಖ್ಯವಿರುತ್ತದೆ. ಆದುದರಿಂದ ಈಗ ನಡೆಯುತ್ತಿರುವ ತೀಕ್ಷ್ಣಗತಿಯ ಚಳವಳದಲ್ಲಿ ಹೆಚ್ಚಿನ ಸಂಗತಿಗಳನ್ನು ಸೇರಿಸಿ ಮುಖ್ಯ ವಿಷಯದ ಕುರಿತು ತೊಂದರೆಯನ್ನು ತಂದುಕೊಳ್ಳುವುದು ಜಾಣತನವಲ್ಲ. ಮಾತ್ರವಲ್ಲ ಜನಸಾಮಾನ್ಯರಿಗೆ ಇದುವರೆಗೆ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಯಾವ ಅಭಿಪ್ರಾಯವು ಕಲಿಸಲಾಗಿತ್ತೊ ಅದನ್ನು ಒಮ್ಮೆಗೇನೇ ಬದಲಾಯಿಸಿ ತೋರಿಸುವುದೆಂದರೆ ಅವರ ನಂಬಿಗೆಯನ್ನು ವಂಚಿಸಿದಂತೆ ಕೂಡ ಇದರಿಂದಾಗಬಹುದು. ಆದುದರಿಂದ ಮಹಾಜನರು ತಾವಾಗಿ ಸಿದ್ಧರಿರುವಲ್ಲಿ ಸಹಭೋಜನಗಳನ್ನು ಮಾಡಬಹುದಾದರೂ ಅಖಿಲ ಭಾರತೀಯ ಚಳವಳದ ಭಾಗವಾಗಿ ಅದನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ.

ಸನಾತನಿಗಳೆಂದು ಹೆಸರಿಟ್ಟುಕೊಂಡ ಮಹನೀಯರಿಂದ ಅನೇಕ ಪತ್ರಗಳು, ಅವುಗಳಲ್ಲಿ ಕೆಲವು ಕ್ರೋಧಯುಕ್ತ ಪತ್ರಗಳು ಸಹಾ ನನಗೆ

ಬಂದಿವೆ. ಅವರಿಗೆ ಅಸ್ಪೃಶ್ಯತೆಯು ಹಿಂದೂಧರ್ಮದ ಮುಖ್ಯಸಾರ ವಿರುತ್ತದೆ. ಕೆಲವರು ನಾನು ಧರ್ಮಬಾಹಿರನೆಂದು ತಿಳಿಯುತ್ತಾರೆ. ಕೆಲವರು ಅಸ್ಪೃಶ್ಯತಾನಿವಾರಣೆ ಮೊದಲಾದ ವಿಷಯಗಳನ್ನು ನಾನು ಕ್ರೈಸ್ತ ಹಾಗೂ ಇಸ್ಲಾಮಧರ್ಮದಿಂದ ತೆಗೆದುಕೊಂಡಿದ್ದೇನೆಂದು ಭಾವಿಸುತ್ತಾರೆ. ಇನ್ನೂ ಕೆಲವರು ಅಸ್ಪೃಶ್ಯತೆಯನ್ನು ಸಮರ್ಥಿಸಿ ಶಾಸ್ತ್ರಗಳ ಮಾತುಗಳನ್ನು ನನಗೆ ತೋರಿಸುತ್ತಿದ್ದಾರೆ. ಇವರೆಲ್ಲರಿಗೆ ಈ ಲೇಖಾಂಕಗಳಲ್ಲಿ ನಾನು ಉತ್ತರಕೊಡುವುದಾಗಿ ಮಾತು ಕೊಟ್ಟಿದ್ದೇನೆ. ನಾನು ಸನಾತನಿಯೆಂದು ಏಕೆ ಕರೆದುಕೊಳ್ಳುತ್ತಿದ್ದೇನೊ ಈ ಲೇಖಕರಿಗೆ ಹೇಳುವ ಸಾಹಸಮಾಡುತ್ತೇನೆ. ಸನಾತನಿಯೆಂದರೆ ಯಾರೆಂದು ಅವರ ಅಭಿಪ್ರಾಯಕ್ಕೂ ನನ್ನ ಅಭಿಪ್ರಾಯಕ್ಕೂ ಭೇದವಿದೆ ಎಂಬುದು ಸ್ಪಷ್ಟ ವಿರುತ್ತದೆ. ಇತಿಹಾಸಕ್ಕೆ ನಿಲುಕದ ಕಾಲದಿಂದ ಬಂದ ವೇದಗಳು ಹಾಗೂ ಅನಂತರದ ಬರವಣಿಗೆಗಳ ಆಧಾರದ ಮೇಲೆ ಹೊಂದಿರುವ, ಅನೇಕ ತಲಾಂತರಗಳಿಂದ ಬಂದಿರುವ ಜೀವಂತ ವಿಶ್ವಾಸಕ್ಕೆ ಸನಾತನ ಧರ್ಮವೆಂದು ನಾನು ಕರೆಯುತ್ತಿದ್ದೇನೆ. ದೇವರು ಹಾಗೂ ಹಿಂದೂ ಧರ್ಮಗಳಂತೆ ವೇದಗಳೆಂದರೂ ವ್ಯಾಖ್ಯೆಗೆ ನಿಲುಕದ ವಿಷಯಗಳೆಂದು ನನ್ನ ಅಭಿಪ್ರಾಯವಿದೆ. ಅಚ್ಚುಹಾಕಿರುವ ನಾಲ್ಕು ಗ್ರಂಥಗಳಿಗೆ ವೇದ ವೆಂದರೆ ಅದು ಅಂಶತಃ ಮಾತ್ರ ನಿಜವಿರುತ್ತದೆ. ಯಾರ ವಿಷಯವು ನಮಗೆ ಗೊತ್ತಿಲ್ಲವೋ ಅಂಥ ಋಷಿಗಳು ಮಾಡಿದ ಉಪದೇಶಗಳ ಅಂಶ ಗಳು ಮಾತ್ರ ಈ ಗ್ರಂಥಗಳಲ್ಲಿವೆ. ಅನಂತರದ ತಲಾಂತರಗಳವರು ತಮಗೆ ಸಿಕ್ಕಿದ ಪ್ರಕಾಶದಿಂದ ಈ ಮೂಲಭಂಡಾರವನ್ನು ಬೆಳೆಸಿರುವರು. ಆಗ ಉನ್ನತಬುದ್ಧಿಯ ಮಹತ್ಪುರುಷನೊಬ್ಬನು ಜನ್ಮವೆತ್ತಿ ಗೀತೆಯನ್ನು ರಚಿಸಿದನು. ಹಿಂದೂ ಜಗತ್ತಿಗೆ ಅವನು ಹಿಂದೂಧರ್ಮವನ್ನು ಸಂಗ್ರ ಹಿಸಿಕೊಟ್ಟನು. ಈ ಸಂಗ್ರಹವು ಗಂಭೀರತತ್ವಗಳಿಂದ ಕೂಡಿದ್ದರೂ ಸರಳ ರೀತಿಯು ಅಭ್ಯಾಸಿಗೆ ಅತೀ ಸುಲಭವಾಗಿ ತಿಳಿಯುವಂತಿರುತ್ತದೆ.

ಕಲಿಯಬೇಕೆಂಬ ಅಪೇಕ್ಷೆ ಮಾತ್ರವಿರುವ ಪ್ರತಿಯೊಬ್ಬ ಹಿಂದು ವಿಗೂ ಅದೊಂದು ಸ್ಪಷ್ಟವಾದ ಗ್ರಂಥವಿರುತ್ತದೆ. ನಮ್ಮ ಸಂಪೂರ್ಣ ಶಾಸ್ತ್ರಗಳು ನಾಶವಾದರೂ ಇದೊಂದು ಚಿಕ್ಕ ಪುಸ್ತಕದ ಎಂದೂ ನಾಶ

ವಿಲ್ಲದ ಆ ಏಳನೂರು ಶ್ಲೋಕಗಳು ಹಿಂದೂಧರ್ಮವೇನೆಂದೂ ಅದನ್ನು ಹೇಗೆ ಆಚರಿಸಬೇಕೆಂದೂ ಹೇಳಲು ಸಮರ್ಥವಾಗಿವೆ. ಆ ಗ್ರಂಥದ ಉಪದೇಶಗಳನ್ನು ಅಕ್ಷರಶಃ ಪಾಲಿಸಲಿಕ್ಕೆ ಕಳೆದ ನಲ್ವತ್ತು ವರ್ಷಗಳಿಂದ ಪ್ರಯತ್ನಿಸಿರುವುದರಿಂದ ನಾನು ಸನಾತನಿ ಎಂದು ಅಧಿಕಾರದಿಂದ ಹೇಳಿ ಕೊಳ್ಳುತ್ತಿದ್ದೇನೆ. ಆ ಗ್ರಂಥದ ಮುಖ್ಯ ಉಪದೇಶಕ್ಕೆ ವಿರುದ್ಧವಿರುವು ದೆಲ್ಲ ಹಿಂದೂಧರ್ಮವಲ್ಲವೆಂದು ನಾನು ತಿರಸ್ಕರಿಸುತ್ತೇನೆ. ಯಾವ ಶ್ರದ್ಧೆ ಹಾಗೂ ಗುರುಗಳನ್ನು ಅದು ಹೊರದೂಡುವುದಿಲ್ಲ.

ನಾನು ಗೀತೆಯನ್ನು ಯಾವ ಭಕ್ತಿಯಿಂದ ಕಲಿತಿರುವೆನೋ ಅದೇ ಭಕ್ತಿಯಿಂದ ಬ್ಯಾಬಲ್, ಕುರಾನ, ಜೆಂಡಾವೆಸ್ತ ಮೊದಲಾದ ಜಗತ್ತಿನ ಧರ್ಮಗ್ರಂಥಗಳನ್ನು ಕಲಿಯಲು ಯತ್ನಿಸಿರುವೆನೆಂದು ಹೇಳಲು ನನಗೆ ಆನಂದವೆನ್ನಿಸುತ್ತದೆ. ಈ ಪ್ರಯತ್ನಗಳಿಂದ ನನ್ನ ದೃಷ್ಟಿಯೂ ನನ್ನ ಹಿಂದೂಮತವೂ ವಿಶಾಲವಾಗಿವೆ. ಜೊರಾಷ್ಟರ, ಯೇಸು ಹಾಗೂ ಮಹಮ್ಮದ ಇವರ ಜೀವನವನ್ನು ನಾನು ತಿಳಿದುಕೊಂಡಂತೆ ಅವುಗಳಿಂದ ಗೀತೆಯ ಎಷ್ಟೋ ವಾಕ್ಯಗಳ ಅರ್ಥವು ನನಗೆ ಸುಗಮವಾಗುವಂತಾಗಿದೆ. ಆದುದರಿಂದ ಸನಾತನೀ ಸ್ನೇಹಿತರು ನಿಂದೆಯೆಂದು ಹೇಳಿದ ವಿಷಯವು ನನಗೆ ಸಮಾಧಾನವನ್ನೇ ಕೊಡುತ್ತಿದೆ. ಜಗತ್ತಿನ ಚತುರ್ದಿಕ್ಕುಗಳ ಧರ್ಮೋಪದೇಶಕರ ಉಪದೇಶಗಳ ಕಡೆಗೆ ಸಹಿಷ್ಣುತಾಭಾವ ತಾಳಲಿಕ್ಕೆ ಮಾತ್ರವಲ್ಲ ಅವನ್ನು ಸ್ವೀಕರಿಸಿಕೊಳ್ಳಲಿಕ್ಕೆ ಆಸ್ಪದವಿರುವಷ್ಟು ವಿಶಾಲತೆ ಇರುವ ಧರ್ಮವೆಂಬುದರಿಂದಲೇ ನಾನು ಹಿಂದುವೆಂದು ಕರೆದುಕೊಳ್ಳ ಲಿಕ್ಕೆ ಗೌರವ ತಾಳುತ್ತೇನೆ.

ಜೀವನದ ಈ ಗ್ರಂಥದಲ್ಲಿ ಅಸ್ಪೃಶ್ಯತೆಗೆ ಆಧಾರವು ನನಗೆ ಕಾಣುವು ದಿಲ್ಲ. ಅದಕ್ಕೆ ಬದಲಾಗಿ ಸಮಸ್ತ ಜೀವನದಲ್ಲಿ ಐಕ್ಯತೆಯಿದೆಯೆಂದೂ ಇದು ದೇವರಿಂದ ಬಂದು ಆತನಿಗೆ ಸೇರುವಂಥದ್ದೆಂದೂ ಆಕರ್ಷಕ ಭಾಷೆಯಲ್ಲಿ ನನ್ನ ಬುದ್ಧಿ ಹಾಗೂ ಹೃದಯದೊಳಗೆ ಹೊಕ್ಕು ಅದು ಹೇಳುವ ಸಂದೇಶದಿಂದ ಅದು ನನ್ನನ್ನು ನಂಬುವಂತೆ ಒತ್ತಾಯವಾಡು ತ್ತಿದೆ. ಆ ಪೂಜ್ಯ ಗ್ರಂಥಕಾರನ ಸನಾತನ ಧರ್ಮದಂತೆ ಜೀವನವು ಬಾಹ್ಯ ಆಚಾರವ್ರತಗಳಲ್ಲಿ ಮಾತ್ರ ವಿರದೆ ಅತ್ಯಂತ ಆಂತರಿಕಶುದ್ಧಿ ಹಾಗೂ

ತನ್ನ ದೇಹ ಮನಸ್ಸು ಆತ್ಮಗಳೆಲ್ಲವನ್ನು ದೈವೀಕ ಶಕ್ತಿಯಲ್ಲಿ ಲೀನಗೊಳಿಸುವುದರಲ್ಲೇ ಇರುತ್ತದೆ. ನನ್ನ ಜೀವನದೊಳಗೆ ಜ್ವಲಿಸುತ್ತಿರುವ ಈ ಗೀತೆಯು ಸಂದೇಶವನ್ನು ಕಟ್ಟಿಕೊಂಡು ನಾನು ಮಿಲಿಯಗಟ್ಟಲೆ ಜನರ ಬಳಿಗೆ ಹೋಗಿದ್ದೇನೆ. ಅವರು ನನ್ನನ್ನು ಲಕ್ಷ್ಯಪೂರ್ವಕ ಕೇಳಿದ್ದಾರೆ. ಹೀಗೆ ಕೇಳಲು ನನ್ನ ರಾಜಕೀಯ ಜಾಣತನ ಹಾಗೂ ವಾಕ್ಚಾತುರ್ಯಗಳು ಕಾರಣವಲ್ಲ. ನಾನು ಅವರವನೆಂದೂ ಅವರ ಧರ್ಮಕ್ಕೆ ಸೇರಿದವನೆಂದೂ ಅವರು ಸ್ವಾಭಾವಿಕವಾಗಿ ನನ್ನನ್ನು ಗುರುತಿಸಿರುವರು. ದಿನಗಳು ಹೋದಂತೆ ನಾನು ಸನಾತನ ಧರ್ಮಾವಲಂಬಿ ಎಂದು ಕರೆದುಕೊಳ್ಳುವುದು ತಪ್ಪಲ್ಲವೆಂಬ ನನ್ನ ವಿಶ್ವಾಸವು ಗಟ್ಟಿಯಾಗುತ್ತಿದೆ. ದೇವರ ಇಚ್ಛೆ ಇದ್ದರೆ ಆತನು ನನ್ನ ಈ ವಿಶ್ವಾಸವನ್ನು ನನ್ನ ಪ್ರಾಣದಾನದಿಂದ ಬೇಕಿದ್ದರೆ ರುಜುಪಡಿಸುವನು.

ಲೇಖಾಂಕ ೨.

ಸವರ್ಣ ಹಿಂದುಗಳು ಹರಿಜನರೊಡನೆ ಸಮಾನತೆಯಿಂದ ವರ್ತಿಸಬೇಕಾದರೆ ಅವರು ಅದಕ್ಕೆ ತಕ್ಕ ಯೋಗ್ಯತೆಯನ್ನು ಮೊದಲಾಗಿ ಪಡೆಯುವುದು ಅಗತ್ಯವೆಂದೂ ಅದಕ್ಕಾಗಿ ಅವರು ತಮ್ಮ ಕೊಳಕು ಅಭ್ಯಾಸಗಳನ್ನೂ ಸತ್ತ ಮೃಗಗಳ ಮಾಂಸ ತಿನ್ನುವುದನ್ನೂ ಬಿಡಬೇಕೆಂದೂ ವಿದ್ಯಾವಂತ ಪತ್ರಲೇಖಕನೊಬ್ಬನು ಬರಿಯುತ್ತಾನೆ. ಭಂಗಿಗಳ ಹಾಗೂ ಸಮಗಾರರ ವೃತ್ತಿಗಳು ಕೊಳಕೆಂದು ಭಾವಿಸಿ ಅವನ್ನು ಅವರು ಮೊದಲಾಗಿ ಬಿಡುವುದು ಅಗತ್ಯವೆನ್ನುವಷ್ಟರ ಮಟ್ಟಿಗೆ ಇನ್ನೊಬ್ಬ ಲೇಖಕನು ಬರೆಯುತ್ತಾನೆ. ಹರಿಜನರಲ್ಲಿ ಕಾಣಸಿಕ್ಕುವ ಕೆಟ್ಟ ಅಭ್ಯಾಸಗಳಿಗೆಲ್ಲ ಸವರ್ಣ ಹಿಂದುಗಳೇ ಜವಾಬ್ದಾರರೆಂಬುದನ್ನು ಈ ವಿಮರ್ಶಕರು ಮರೆಯುತ್ತಾರೆ. ಮೇಲ್ಜಾತಿಯವರೆನ್ನಿಸುವವರು ಅವರಿಗೆ ಸ್ವಚ್ಛವಾಗಿರಲಿಕ್ಕೆ ಬೇಕಾಗುವ ಸಲಕರಣೆಗಳು ಸಿಕ್ಕದಂತೆ ಮಾಡಿರುವರು. ಮಾತ್ರವಲ್ಲ, ಹಾಗೆ ಸುಧಾರಿಸಲು ಬೇಕಾದ ಉತ್ಸಾಹವು ಕೂಡ ಇಲ್ಲದಂತೆ ಮಾಡಿರುವರು.

ತೋಟಿಗಳ ಹಾಗೂ ಸಮಗಾರರ ಕೆಲಸಗಳು ನಾನು ತೋರಿಸ ಬಹುದಾದ ಇನ್ನೆಷ್ಟೋ ವೃತ್ತಿಗಳಿಗಿಂತ ಕೊಳಕು ವೃತ್ತಿಗಳೆಂದು ಹೇಳ ಲಿಕ್ಕೆ ಸಾಧ್ಯವಿಲ್ಲ. ಇನ್ನು ಹಲವು ವೃತ್ತಿಗಳಂತೆ ಈ ಕಾರ್ಯಗಳು ಸದ್ಯಕ್ಕೆ ಕೊಳಕು ರೀತಿಯಲ್ಲಿ ಮಾಡಲ್ಪಡುತ್ತಿವೆ ಎಂಬುದನ್ನು ಒಪ್ಪ ಬಹುದು. ಇದು ಕೂಡಾ ಮೇಲ್ಜಾತಿಯೆನ್ನಿಸುವವರ ಅನ್ಯಾಯದ ಅಸಡ್ಡೆಯ ಪರಿಣಾಮವೆನ್ನಲು ಸಂಶಯವಿಲ್ಲ.

ತೋಟಿ ಕೆಲಸ ಮತ್ತು ಚರ್ಮದ ಕೆಲಸಗಳನ್ನು ಪೂರ್ಣ ಆರೋಗ್ಯಕರ ಮತ್ತು ಸ್ವಚ್ಛ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವಿದೆಯೆಂದು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆನು. ತನ್ನ ಸ್ವಂತ ಮಕ್ಕಳ ಮಟ್ಟಿಗೆ ಪ್ರತಿಯೊಬ್ಬ ತಾಯಿಯೂ ತೋಟಿ ಕೆಲಸವನ್ನು ಮಾಡುತ್ತಾಳೆ ಮತ್ತು ಪ್ರತಿಯೊಬ್ಬ ಈಗಿನ ವೈದ್ಯಕೀಯ ವಿದ್ಯಾರ್ಥಿಯು ಶವಗಳನ್ನು ಕಡಿದು ಸುಲಿಯುವ ಕೆಲಸ ಮಾಡಬೇಕಾಗುವುದರಿಂದ ಅವರೂ ಚರ್ಮದ ಕೆಲಸ ಮಾಡುತ್ತಾರೆ. ಆದರೆ ಅವರ ವೃತ್ತಿಗಳನ್ನು ಪವಿತ್ರ ವೆಂದು ನಾವು ಭಾವಿಸುತ್ತೇವೆ. ಸಾಮಾನ್ಯ ತೋಟಿಗಳ ಹಾಗೂ ಸಮ ಗಾರರ ವೃತ್ತಿಗಳು ತಾಯಂದಿರ ಮತ್ತು ವೈದ್ಯಕೀಯ ಜನರ ವೃತ್ತಿಗಳಷ್ಟೇ ಪವಿತ್ರ ಹಾಗು ಪ್ರಯೋಜನವುಳ್ಳವುಗಳೆಂದು ನಾನು ಹೇಳಲಿಚ್ಛಿಸುತ್ತೇನೆ.

ಸವರ್ಣ ಹಿಂದುಗಳು ಆಶ್ರಯದಾತರಾಗಿ ಹರಿಜನರೊಳಗೆ ಉಪ ಕಾರಗಳನ್ನು ಹಂಚುವವರೆಂದು ಭಾವಿಸಿದರೆ ನಾವು ತಪ್ಪಿಬೀಳುತ್ತೇವೆ. ಈಗ ಸವರ್ಣ ಹಿಂದುಗಳು ಹರಿಜನರಿಗಾಗಿ ಮಾಡಬಹುದಾದ ಕೆಲಸವು ಅವರಿಗೆ ಅನೇಕ ತಲಾಂತರಗಳಿಂದ ಮಾಡಿರುವ ಅನ್ಯಾಯಕ್ಕೆ ಸ್ವಲ್ಪ ಮಟ್ಟಿನ ಪರಿಹಾರ ಮಾತ್ರವಿರುತ್ತದೆ. ಈಗ ನಾವು ಅವರು ಇದ್ದಂತೆ ಅವರನ್ನು ಸ್ವೀಕರಿಸಬೇಕು. ಇದರಿಂದ ನಮಗೆ ಸ್ವಲ್ಪ ತೊಂದರೆಯಾಗು ವುದಾದರೆ ನಾವು ಮಾಡಿರುವ ತಪ್ಪಿಗೆ ಇದು ತಕ್ಕ ಶಿಕ್ಷೆಯೆಂದು ತಿಳಿಯ ಬೇಕು. ತೆರೆದ ಹೃದಯದಿಂದ ನಾವು ಅವರನ್ನು ಸ್ವೀಕರಿಸುವ ಕೃತ್ಯ ದಿಂದಲೇ ಅವರು ಶುಚಿತ್ವವನ್ನು ಅಭ್ಯಾಸಿಸಲು ಉತ್ಸಾಹಗೊಳ್ಳುವ ರೆಂಬುದು ಸಮಾಧಾನಕರ ವಿಷಯವಿದೆ. ಮಾತ್ರವಲ್ಲ, ಸವರ್ಣ ಹಿಂದು

ಗಳು ತಮ್ಮ ಸುಖ ಹಾಗೂ ಅನುಕೂಲತೆಗಾಗಿಯೇ ಹರಿಜನರಿಗೆ ಸ್ವಚ್ಛ ವಾಗಿರಲಿಕ್ಕೆ ಬೇಕಾಗುವ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗುತ್ತದೆ.

ತಾಳ್ಮೆಯಿಂದ ಸಹಿಸುವ ಹರಿಜನರ ತಲೆಯ ಮೇಲೆ ನಾವು ಎಷ್ಟು ಅನ್ಯಾಯಗಳನ್ನು ಹೊರಿಸಿರುವೆವೆಂಬುದನ್ನು ಜ್ಞಾಪಿಸಿಕೊಳ್ಳುವುದು ಒಳ್ಳೆಯದು. ಸಾಮಾಜಿಕ ವ್ಯವಹಾರಗಳಲ್ಲಿ ಅವರನ್ನು ಕುಷ್ಠರೋಗಪೀಡಿತರಂತೆ ದೂರವಿರಿಸಿರುವೆವು. ಆರ್ಥಿಕ ವಿಚಾರಗಳಲ್ಲಿ ಅವರನ್ನು ಗುಲಾಮರಿಗಿಂತ ಕಡೆಯಾಗಿ ಇಟ್ಟಿರುವೆವು. ಧಾರ್ಮಿಕ ವಿಷಯಗಳಲ್ಲಿ ದೇವಾಲಯಗಳೆಂದು ನಾವು ತಪ್ಪಾಗಿ ಕರೆಯುವ ಸ್ಥಾನಗಳಿಗೆ ಅವರಿಗೆ ಪ್ರವೇಶ ಕೊಡುವುದಿಲ್ಲ. ಸಾರ್ವಜನಿಕ ರಸ್ತೆ, ಸಾರ್ವಜನಿಕ ಶಾಲೆಗಳು, ಸಾರ್ವಜನಿಕ ಔಷಧಾಲಯಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ವಿಹಾರಸ್ಥಳಗಳು ಮೊದಲಾದ ಇವೆಲ್ಲ ಸಾರ್ವಜನಿಕ ಸಂಸ್ಥೆಗಳನ್ನು ಸವರ್ಣ ಹಿಂದೂಗಳಂತೆಯೇ ಉಪಯೋಗಿಸಲಿಕ್ಕೆ ನಾವು ಅವರಿಗೆ ಬಿಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಲೆಕ್ಕ ಮಾಡಿಕೊಟ್ಟ ದೂರಕ್ಕಿಂತ ಸಮೀಪಕ್ಕೆ ಅವರು ಬಂದರೆ ಸಾಮಾಜಿಕ ದ್ರೋಹವೆಂದು ಭಾವಿಸಲಾಗುತ್ತದೆ. ಇನ್ನೂ ಕೆಲವು ಅಪರೂಪ ಸಂದರ್ಭಗಳಲ್ಲಿ ಅವರು ನಮ್ಮ ಕಣ್ಣಿಗೆ ಕಾಣಿಸುವುದು ಸಹಾ ಅನ್ಯಾಯವಾಗಿ ಎಣಿಸಲ್ಪಡುತ್ತದೆ. ಪಟ್ಟಣದ ಮತ್ತು ಗ್ರಾಮದ ಅತೀ ಕೆಟ್ಟ ಭಾಗಗಳಲ್ಲಿ ಅವರು ವಾಸಿಸಬೇಕು ಮತ್ತು ಅವರಿಗೆ ಅಲ್ಲಿ ಸಮಾಜದ ಯಾವ ಉಪಕಾರವೂ ಸಿಕ್ಕುವುದಿಲ್ಲ. ಸವರ್ಣ ಹಿಂದೂ ವಕೀಲರು ಹಾಗೂ ಡಾಕ್ಟರರು ಇತರರಿಗೆ ಕೆಲಸಮಾಡುವಂತೆ ಅವರ ಕೆಲಸವನ್ನು ಮಾಡಲೊಪ್ಪುವುದಿಲ್ಲ. ಧಾರ್ಮಿಕ ವಿಷಯಗಳಲ್ಲಿ ಬ್ರಾಹ್ಮಣರು ಅವರ ಪೌರೋಹಿತ್ಯವನ್ನು ವಹಿಸಲೊಪ್ಪುವುದಿಲ್ಲ. ಅವರು ಇನ್ನೂ ಜೀವನದ ಬಗೆಯನ್ನು ಪಡೆಯುತ್ತಿರುವುದೂ ಇನ್ನೂ ಹಿಂದೂಸಮಾಜಕ್ಕೆ ಒಳಗಾಗಿರುವುದೂ ನಿಜವಾಗಿ ಆಶ್ಚರ್ಯವಿರುತ್ತದೆ. ತಮ್ಮನ್ನು ಅಡಿಗೊತ್ತುವವರ ವಿರುದ್ಧ ಬಂಡೆಬ್ಬಿಸಲಿಕ್ಕೆ ಸಾಧ್ಯವಿಲ್ಲದಷ್ಟು ಅವರು ಅಧಃಪತನವನ್ನು ಹೊಂದಿರುವರು.

ಯೆರವಾಡ ಒಪ್ಪಂದದ ಸರಿಯಾದ ಅಭಿಪ್ರಾಯಗಳನ್ನು ಸ್ಪಷ್ಟ
ವಾಗಿ ಕೆಲಸಗಾರರು ತಿಳಿದುಕೊಳ್ಳುವಂತೆ ಈ ವಿಷಾದಕರ ಮತ್ತು
ನಾಚಿಕೆಯನ್ನುಂಟುಮಾಡುವ ಸಂಗತಿಗಳನ್ನು ವಿವರಿಸಿದ್ದೇನೆ. ಬಿಡು
ವಿಲ್ಲದ ಯತ್ನಗಳಿಂದ ಮಾತ್ರ ಈ ಪತಿತಬಾಂಧವರನ್ನು ಉದ್ಧರಿಸಲಿಕ್ಕೆ
ಸಾಧ್ಯವಿದೆ. ಆದರಿಂದ ಹಿಂದೂಧರ್ಮವು ಪರಿಶುದ್ಧವಾಗಿ ಇಡೀ
ಹಿಂದೂಸಮಾಜದ ಹಾಗೂ ಅದರೊಡನೆ ಇಡೀ ಹಿಂದೂದೇಶದ
ಉದ್ಧಾರವಾಗುತ್ತದೆ. ಈ ಅನ್ಯಾಯಗಳ ಪಟ್ಟಿಯನ್ನು ನೋಡಿ ಯೋಚನೆಗೆ
ಈಡಾಗಬೇಕಾದ್ದಿಲ್ಲ. ಉಪವಾಸದ ವಾರದಲ್ಲಿ ವ್ಯಕ್ತವಾದ ಸವರ್ಣ
ಹಿಂದೂ ಪಶ್ಚಾತ್ತಾಪವು ನಿಜವೆಂದಾದರೆ ಎಲ್ಲವೂ ಸರಿಯಾಗಿ ಕ್ಷಿಪ್ರದಲ್ಲೆ
ಪ್ರತಿಯೊಬ್ಬ ಹರಿಜನರೂ ಸ್ವಾತಂತ್ರ್ಯದ ಸುಖವನ್ನು ಅನುಭವಿಸುವಂ
ತಾಗುವದು. ಆದರೆ ಇಷ್ಟು ಸಾಧ್ಯವಾಗಬೇಕಾದರೆ ಈ ಸ್ವಾತಂತ್ರ್ಯ
ಸಂದೇಶವು ದೇಶದ ಅತೀ ದೂರದ ಹಳ್ಳಿಗಳಿಗೂ ತಲಪಬೇಕಾಗಿದೆ.
ಪಟ್ಟಣಗಳಲ್ಲಿ ಮಹಾಜನರ ಅಭಿಪ್ರಾಯವನ್ನು ವ್ಯಕ್ತಗೊಳಿಸುವದು
ಸುಲಭವಿದೆ. ಆದರೆ ಹಳ್ಳಿಗಳಲ್ಲಿ ಈ ಕಾರ್ಯವು ಸ್ವಲ್ಪ ಕಷ್ಟವಿರುತ್ತದೆ.
ಈಗ ಅಖಿಲಭಾರತ ಅಸ್ಪೃಶ್ಯತಾ ನಿವಾರಣಾ ಸಂಘವು ಸ್ಥಾಪಿಸಲ್ಪಟ್ಟಿರು
ವದರಿಂದ ಕೆಲಸಗಾರರು ಅದಕ್ಕೆ ಸೇರಿ ಕೆಲಸಮಾಡಬೇಕು. ಡಾಕ್ಟರ
ಅಂಬೇಡಕರರು ಹೇಳಿದ ಮಾತುಗಳನ್ನು ಇಲ್ಲಿ ಪುನಃ ಹೇಳಲಿಚ್ಛಿಸುತ್ತೇನೆ.
ಅವರು ಈ ರೀತಿ ಹೇಳಿದರು: "ಯಾರ ಬಗ್ಗೆ ನಾವು ಕೆಲಸಮಾಡು
ತ್ತೇವೋ ಅವರ ಅವಶ್ಯಕತೆಗಳು ಅವರಿಗಿಂತ ನಮಗೆ ಚೆನ್ನಾಗಿ ಗೊತ್ತಿವೆ
ಎಂಬ ಹಳೆದಾರಿಯು ಫಲವಿಲ್ಲ. ಹರಿಜನ ಪ್ರತಿನಿಧಿಗಳಿಂದ ಅವರ
ಅವಶ್ಯಕತೆಗಳನ್ನು ತಿಳಿದು ಅವು ಹೇಗೆ ನೆರವೇರಿಸಲ್ಪಡಬೇಕೆಂಬುದನ್ನು
ಅವರಿಂದಲೇ ಕೇಳಿ ತಿಳಿಯುವಂತೆ ನಿಮ್ಮ ಕೆಲಸಗಾರರಿಗೆ ಹೇಳಿರಿ.
ಒಟ್ಟು ಫಲಾಹಾರಗಳು ಪ್ರಚಾರಕಾರ್ಯದ ದೇಖಾವೆಗಳಾಗಿ ಉಪ
ಯುಕ್ತವಿರಬಹುದು. ಆದರೆ, ಅವುಗಳಿಗೆ ವಿಪರೀತ ಪ್ರಾಮುಖ್ಯತೆಯನ್ನು
ಕೊಡಬಾರದು. ಅದರಲ್ಲಿ ತಾವು ಆಶ್ರಯದಾತರೆಂಬ ಭಾವನೆಯು
ಸ್ವಲ್ಪ ಮಟ್ಟಿಗೆ ಇದೆ. ನಾನು ಅವುಗಳಿಗೆ ಹೋಗುವಂತಿಲ್ಲ. ಸಾಮಾನ್ಯ
ಸಾಮಾಜಿಕ ಸಂದರ್ಭಗಳಲ್ಲಿ ನನಗೆ ಆಮಂತ್ರಣ ಕೊಡುವದು ಎಷ್ಟೋ

ಮೇಲು. ದೇವಸ್ಥಾನ ಪ್ರವೇಶವು ಅಗತ್ಯವಾದರೂ ಅದನ್ನು ಬಾಕಿ ಇಟ್ಟರೂ ದೋಷವಿಲ್ಲ. ಅತ್ಯಾವಶ್ಯಕ ವಿಷಯವೆಂದರೆ ಆರ್ಥಿಕ ಸ್ಥಿತಿಯ ಸುಧಾರಣೆ ಹಾಗೂ ನಿತ್ಯ ವ್ಯವಹಾರಗಳಲ್ಲಿ ಯೋಗ್ಯವರ್ತನ." ಅವರು ಸ್ವಂತ ಅನುಭವದಿಂದ ಹೇಳಿದ ಕೆಲವು ಕಹಿಯಾದ ಸಂಗತಿಗಳ ದುಃಖದಾಯಕ ವಿವರಗಳನ್ನು ನಾನು ಇಲ್ಲಿ ಹೇಳಬೇಕಾಗಿಲ್ಲ. ಅವರ ಹೇಳಿಕೆಯ ಭಾವನೆಯು ನನ್ನ ಹೃದಯಕ್ಕೆ ತಾಗಿತು. ಪ್ರತಿಯೊಬ್ಬ ಕೆಲಸಗಾರನಿಗೂ ಅದರ ಪರಿಣಾಮವಾಗುವುದೆಂದು ಆಶಿಸುತ್ತೇನೆ.

ಸುಧಾರಕರು ಕೈಕೊಳ್ಳುವ ಬಗ್ಗೆ ಹಲವು ಸೂಚನೆಗಳು ನನ್ನೆಡೆಗೆ ಕಳುಹಿಸಲಾಗಿವೆ. ಸ್ವಾಮಿ ಶ್ರದ್ಧಾನಂದರು ಎಷ್ಟೋ ಬಾರಿ ಹೇಳುತ್ತಿದ್ದ ಒಂದು ಸೂಚನೆಯು ಪ್ರತಿಯೊಂದು ಹಿಂದೂ ಮನೆಯಲ್ಲಿ ಹರಿಜನರಲ್ಲೊಬ್ಬನನ್ನು ಸಾಮಾನ್ಯ ಮನೆಯವನಂತೆಯೇ ನಿಲ್ಲಿಸಿಕೊಳ್ಳಬೇಕೆಂಬುದು. ಹಿಂದುಸ್ಥಾನದ ಕಲ್ಯಾಣವನ್ನು ಹಾರೈಸುವ ಹಿಂದುವಲ್ಲದ ಇನ್ನೊಬ್ಬ ಸ್ನೇಹಿತರಿಂದ ಇನ್ನೊಂದು ಸೂಚನೆಯು ಬಂದಿದೆ. ಪ್ರತಿಯೊಬ್ಬ ಶ್ರೀಮಂತ ಹಿಂದೂ ಗೃಹಸ್ಥನು ಒಬ್ಬ ಹರಿಜನ ಬಾಲಕ ಅಥವಾ ಬಾಲಿಕೆಗೆ ಕೊನೆಯ ತನಕ ವಿದ್ಯಾಭ್ಯಾಸ ಮಾಡಿಸಿ ಅವರು ಮತ್ತೆ ತಮ್ಮ ಸಮಾಜದೇಳಿಗೆಗೆ ಕೆಲಸ ಮಾಡುವಂತೆ ಮಾಡಬೇಕಾಗಿ ಅವರು ಸೂಚಿಸುತ್ತಾರೆ. ಇವೆರಡು ಸೂಚನೆಗಳೂ ವಿಚಾರಕ್ಕೆ ಮತ್ತು ಆಚರಣೆಯಲ್ಲಿ ತರಲಿಕ್ಕೆ ಯೋಗ್ಯವಿರುತ್ತವೆ. ಒಳ್ಳೇ ಸೂಚನೆಗಳಿದ್ದುವರೆಲ್ಲ ಅವನ್ನು ಹೊಸತಾಗಿ ಸ್ಥಾಪಿಸಿದ ಸಂಘದವರಿಗೆ ಕಳುಹಿಸುವಂತೆ ನಾನು ಕೇಳಿಕೊಳ್ಳುತ್ತೇನೆ.

ನನ್ನ ಸ್ಥಿತಿಯ ಮಿತಿಗಳನ್ನು ಪತ್ರ ಲೇಖಕರು ತಿಳಿದುಕೊಳ್ಳಬೇಕು. ಜೈಲು ಸರಳುಗಳ ಹಿಂದಿನಿಂದ ಸಂಘದವರಿಗೂ ಜನರಿಗೂ ನಾನು ಬುದ್ಧಿವಾದವನ್ನು ಮಾತ್ರ ಕೊಡಬಲ್ಲೆನು. ಕಾರ್ಯಗಳನ್ನು ಮಾಡುವುದರಲ್ಲಿ ನನಗೆ ಭಾಗವಿರುವುದು ಸಾಧ್ಯವಿಲ್ಲ. ಮಾತ್ರವಲ್ಲ ನನಗೆ ಇಲ್ಲಿ ಸಿಕ್ಕುವಷ್ಟು ಅನುಭವದ ಮೇಲೆ ಹಾಗೂ ಇತರರ ಮಾತಿನ ಆಧಾರದ ಮೇಲೆ ನನ್ನ ಅಭಿಪ್ರಾಯಗಳನ್ನು ನಾನು ಹೇಳಬೇಕಾಗಿರುವುದರಿಂದಲೂ ಮುಂದೆ ಅವನ್ನು ಹೊಸ ಸಂಗತಿಗಳ ದೃಷ್ಟಿಯಿಂದ ಬದ

ಲಾಯಿಸಬಹುದೆಂಬುದರಿಂದಲೂ ನನ್ನ ಅಭಿಪ್ರಾಯಗಳನ್ನು ಜಾಗ್ರತೆಯಿಂದ ಸ್ವೀಕರಿಸಬೇಕು.

ಈಗ ಅದು ಭೂತಕಾಲದ ಇತಿಹಾಸವಾದರೂ ಪತ್ರಿಕೆಗಳಲ್ಲಿ ಅಸ್ಪಷ್ಟವಾಗಿ ವ್ಯಕ್ತವಾಗಿರುವ ಹಾಗೂ ಪತ್ರ ಲೇಖಕರು ಬರೆದಿರುವ ಕೆಲವು ಆಕ್ಷೇಪಗಳ ವಿವರಣೆಗಾಗಿ ಕೆಲವು ಮಾತುಗಳನ್ನು ಬರೆಯಲಿಚ್ಛಿಸುತ್ತೇನೆ. ಒಪ್ಪಂದದ ರಾಜಕೀಯ ಭಾಗವನ್ನು ಕುರಿತು ಅದರಿಂದ ನಿಮಗೇನು ಲಾಭವಾಯಿತೆಂದು ಕೇಳುತ್ತಾರೆ. ಮುಖ್ಯ ಮಂತ್ರಿಯವರು ಕೊಟ್ಟುದಕ್ಕಿಂತ ಹರಿಜನರಿಗೆ ನಿಜವಾಗಿಯೂ ಹೆಚ್ಚಿಗೆ ಸಿಕ್ಕಿಯದೆ. 'ಅದೇ ನಿಜವಾದ ಲಾಭವಿರುತ್ತದೆ. ಆ ಇತ್ಯರ್ಥವು ರೊಟ್ಟಿ ಕೇಳಿದ್ದಕ್ಕೆ ಕಲ್ಲು ಕೊಟ್ಟಿತೆಂಬುದಕ್ಕೇನೆ ಅದನ್ನು ನಾನು ಎದುರಿಸಬೇಕಾಯಿತು. ಈ ಒಪ್ಪಂದದಿಂದ ರೊಟ್ಟಿಯ ತುಂಡುಗಳು ಸಿಕ್ಕಿಯವೆ. ಹಿಂದೂಗಳಿಗೆ ಇಟ್ಟ ಎಲ್ಲಾ ಸ್ಥಾನಗಳು ಹರಿಜನರಿಗೆ ದೊರೆತರೆ ಡಾಕ್ಟರ್ ಮುಂಜಿಯವರೊಡನೆ ನಾನೂ ಆನಂದಪಡುತ್ತಿದ್ದೆ. ಅದು ಸವರ್ಣ ಹಿಂದೂಗಳಿಗೂ ಹಿಂದೂಧರ್ಮಕ್ಕೂ ದೊಡ್ಡ ಲಾಭವಾಗುತ್ತಿತ್ತು. ನಮಗೆ ಬೇಕಾದುದೆಂದರೆ ಸವರ್ಣ ಹಿಂದೂಗಳಲ್ಲೆ ಅವರು ಸೇರಿಹೋಗುವುದು ಅಗತ್ಯವಿರುತ್ತದೆ. ಯಾವ ಸಂಗತಿಗಳ ದೆಸೆಯಿಂದಲೂ ಬದಲಾಗದ ನನ್ನ ನಿಶ್ಚಯ ಅಭಿಪ್ರಾಯದಂತೆ ಅಡಿಗೊತ್ತುವವರು ಯಾರನ್ನು ಅಡಿಗೊತ್ತುತ್ತಾರೋ ಅವರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಷ್ಟು ಲಾಭವಾಗುತ್ತದೆ. ಸಲ್ಲಬೇಕಾದ ಸಾಲವನ್ನು ಇದರಿಂದ ತೀರಿಸಿದಂತಾಗುತ್ತದೆ. ಸವರ್ಣ ಹಿಂದುಗಳು ಪ್ರಶ್ನೆಯನ್ನು ನಮ್ರ, ಪಶ್ಚಾತ್ತಾಪಪೂರಿತ, ಧಾರ್ಮಿಕ ಹಾಗೂ ಸರಿಯಾದ ಭಾವದಿಂದ ತೆಗೆದುಕೊಳ್ಳದಿದ್ದರೆ ಉಪವಾಸದ ವಾರದಲ್ಲಿ ಹಿಂದೂಸಮಾಜದಲ್ಲಿದ್ದ ಭಾವದಿಂದ ಒಪ್ಪಂದವು ಪೂರ್ಣಮಾಡಲ್ಪಡುವಂತಿಲ್ಲ.

ತಮ್ಮ ಸಂಸ್ಥಾನದ ದೇವಸ್ಥಾನಗಳನ್ನು ಹರಿಜನರಿಗೆ ತೆರೆದುಕೊಟ್ಟ ಮತ್ತು ಇತರ ವಿಧಗಳಲ್ಲಿ ಅಸ್ಪೃಶ್ಯತೆಯನ್ನು ತಮ್ಮ ಸಂಸ್ಥಾನದಿಂದ ಹೊರದೂಡಿದ ರಾಜರುಗಳಿಗೆ ನನ್ನ ಅಭಿವಂದನೆಗಳನ್ನರ್ಪಿಸಲಿಚ್ಛಿಸುತ್ತೇನೆ. ನಾನು ನಿಜವಿದ್ದುದನ್ನು ಹೇಳಬಹುವಾದರೆ ಈ ಕೃತ್ಯದಿಂದ

ರಾಜರು ತಮ್ಮ ಹಾಗೂ ತಮ್ಮ ಜನರ ಅಪರಾಧಗಳ ಬಗ್ಗೆ ಇದರಿಂದ ಸ್ವಲ್ಪ ಪ್ರಾಯಶ್ಚಿತ್ತಮಾಡಿದಂತಾಗಿದೆ. ಈ ಸಂಸ್ಥಾನಗಳ ಹಿಂದೂಪ್ರಜೆಗಳು ಹರಿಜನರೊಡನೆ ಸಹೋದರಭಾವವನ್ನು ವ್ಯಕ್ತಗೊಳಿಸಿ ಅವರು ಇದುವರೆಗೆ ಬಹಿಷ್ಕೃತರಿದ್ದರೆಂಬುದನ್ನು ಮರೆಯುವಂತೆ ಮಾಡುವರಾಗಿ ಆಶಿಸುತ್ತೇನೆ.

ವಿಷಾದಕರವಾದ ಈ ವಿಷಯಕ್ಕೆ ನಾವು ಇಷ್ಟು ಹತ್ತಿರವಿರುವುದರಿಂದ ಈ ಅಸ್ಪೃಶ್ಯತೆಯು ಹಾಕಿಕೊಟ್ಟ ಗಡಿಗಳನ್ನು ದಾಟಿ ಇಡೀ ಜನಾಂಗದ ಮೂಲವನ್ನೆ ಕತ್ತರಿಸುತ್ತಿದೆಯೆಂಬುದು ನಮಗೆ ಗೊತ್ತಾಗುವುದಿಲ್ಲ. ಮುಟ್ಟಬೇಡವೆಂಬ ಭಾವನೆಯು ಇಡೀ ವಾತಾವರಣವನ್ನೇ ತುಂಬಿಕೊಂಡಿದೆ. ಆದುದರಿಂದ ಮೂಲದಲ್ಲಿರುವ ಈ ದೋಷವನ್ನು ನಿವಾರಿಸಿದರೆ ನಮ್ಮಲ್ಲಿ ಜಾತಿಜಾತಿಗಳಲ್ಲಿ ಮತಮತಗಳಲ್ಲಿ ಇರುವ ಭೇದಗಳನ್ನು ಬೇಗನೆ ಮರೆತು ಹಿಂದುಗಳೆಲ್ಲರೂ ಒಂದೇ ಅವಿಭಕ್ತ ಸಮಾಜವೆಂಬ ಭಾವನೆಯಂತೆಯೇ ಹಿಂದೂ, ಮುಸಲ್ಮಾನ, ಸಿಖ್ಖ, ಪಾರ್ಸೀ, ಯೆಹೂದ್ಯ, ಹಾಗೂ ಕ್ರೈಸ್ತ ಇವೆಲ್ಲ ಮತಗಳು ಒಂದೇ ವೃಕ್ಷದ ಬೇರೆ ಬೇರೆ ಶಾಖೆಗಳೆಂಬುದನ್ನು ನಾವು ತಿಳಿದುಕೊಳ್ಳುವೆವು. ಮತಗಳು ಹಲವಿದ್ದರೂ ಧರ್ಮವು ಒಂದೇ ಇರುತ್ತದೆ. ಅಸ್ಪೃಶ್ಯತಾ ನಿವಾರಣೆಯ ಚಳವಳದಿಂದ ಆ ಪಾಠವನ್ನು ನಾವು ಕಲಿಯಲಿಕ್ಕಿದೆ. ಧಾರ್ಮಿಕ ಭಾವನೆಯಿಂದ, ಎದುರಿಸಲಿಕ್ಕೆ ಸಾಧ್ಯವಿಲ್ಲದ ದೃಢತೆಯಿಂದ ಈ ಕಾರ್ಯವನ್ನು ಸಾಧಿಸಿದರೆ ಆ ಪಾಠವನ್ನು ನಾವು ನಿಶ್ಚಯವಾಗಿಯೂ ಕಲಿಯುತ್ತೇವೆ.

ಲೇಖಾಂಕ ೩.

ಸಂಪೂರ್ಣ ಕಾರ್ಯಕ್ರಮವನ್ನು ಒಪ್ಪಲಾರದಾದರೂ ಅಸ್ಪೃಶ್ಯತಾ ನಿವಾರಣಾ ಚಳವಳಕ್ಕೆ ಸಹಾನುಭೂತಿಯುಳ್ಳ ಹಾಗೂ ನನಗೆ ಚೆನ್ನಾಗಿ ಪರಿಚಿತರಾದ ಒಬ್ಬ ಲೇಖಕರು ಹಿಂದೀ ಭಾಷೆಯಲ್ಲಿ ಬರೆದ ಒಂದು ಉದ್ದಲೇಖದಿಂದ ವಿಷಯವನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ಕೊಡುತ್ತೇನೆ:-

'ದೇಶದ ಎಲ್ಲಾ ಭಾಗಗಳಲ್ಲಿ ಚಳವಳವು ಮೇರೆಯೊಳಗೆ ಇರಿಸಲ್ಪಡುತ್ತ ಇಲ್ಲವೆಂದು ನನಗೆ ಹೆದರಿಕೆಯಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಕೆಲಸಗಾರರೆನ್ನಿಸುವವರು ಸಂಪ್ರದಾಯವಾದಿಗಳನ್ನು ಬೈಯುವುದು, ನಿಮ್ಮ ಬರವಣಿಗೆಗಳನ್ನು ಟೀಕಿಸುವ ಸಾಹಸವನ್ನು ಕೈಕೊಂಡವರ ಹೆಸರೆತ್ತಿ ನಿಂದೆ ಮಾಡುವುದು ಇತ್ಯಾದಿ ಸಲ್ಲದ ದಾರಿಗಳನ್ನುಪಯೋಗಿಸುವರೆಂದು ತಿಳಿಯುತ್ತೇನೆ. ಚಳವಳವು ತಾಳುತ್ತಿರುವ ತೀಕ್ಷ್ಣ ಸ್ವರೂಪಗಳಿಗೆ ಒಪ್ಪದವರನ್ನು ಧರ್ಮದ್ರೋಹಿಗಳೆಂದು ಕರೆದು ಅವರಿಗೆ ಭಯಂಕರ ಪರಿಣಾಮಗಳು ದೊರೆಯುವವೆಂದು ಹೆದರಿಸುತ್ತಾರೆ. ಅವರು ಅವರ್ಣೀಯರ ಆರ್ಥಿಕ ಹಾಗೂ ನೈತಿಕ ಉನ್ನತಿಯನ್ನು ಬಯಸುವಂತೆ ತೋರುವುದಿಲ್ಲ. ಸಹಭೋಜನಗಳು ಮತ್ತು ಮೊಕ್ತೇಸರರ ಇಚ್ಛೆಗೆ ವಿರುದ್ಧವಾಗಿಯಾದರೂ ಹರಿಜನರ ತಂಡಗಳನ್ನು ದೇವಸ್ಥಾನಗಳಿಗೆ ಕೊಂಡುಹೋಗುವುದು, ಇದೇ ಅವರ ಪ್ರಯತ್ನದ ಆದಿ ಮತ್ತು ಅಂತ್ಯಗಳೆಂದು ತೋರುತ್ತದೆ. ಚಳವಳವು ಬರೇ ದೇಖಾವೆಯ ಪ್ರದರ್ಶನವಾಗಿ ಅದರಿಂದ ಸಂಪ್ರದಾಯವಾದಿಗಳ ಮನಸ್ಸು ನೋಯಿಸಿ ಹರಿಜನರಿಗೆ ಯಾವದೇ ಪ್ರಯೋಜನವಿಲ್ಲದಂತಾಗುವುದು ನಿಮಗೆ ಇಷ್ಟವಾಗಲಿಕ್ಕಿಲ್ಲವೆಂದು ಭಾವಿಸುತ್ತೇನೆ.

ಕಳೆದ ಒಂದು ತಿಂಗಳಲ್ಲಿ ಅಸ್ಪೃಶ್ಯತೆಯ ಕುರಿತು ನನಗೆ ಬಂದಿರುವ ಸುಮಾರು ಒಂದುನೂರು ಪತ್ರಗಳಲ್ಲಿ ಕೆಲಸಗಾರರ ನಡತೆಯು ಹಿಂಸೆಗೆ ಸಮೀಪಿಸುತ್ತಿದೆ ಎಂದು ದೂರಿ ಬಂದ ಪತ್ರವು ಇದೇ ಮೊದಲನೆಯದು. ಈ ಲೇಖಕರ ಮೇಲೆ ನನಗಿರುವ ಅಭಿಮಾನಕ್ಕಾಗಿಯಾದರೂ ಈ ದೂರನ್ನು ಪ್ರಕಟಿಸುವುದು ಅಗತ್ಯವೆಂದು ನನಗೆ ಕಂಡಿತು. ಅವರು ಬೇಕೆಂತಲೇ ಅತಿಶಯೋಕ್ತಿಯನ್ನುಪಯೋಗಿಸುವವರಲ್ಲವೆಂದು ನನಗೆ ಗೊತ್ತಿದೆ. ಧಾರ್ಮಿಕ ವಿಷಯಗಳಲ್ಲಿ, ನಾನು ಹೇಳುವುದಾದರೆ, ಯಾವ ವಿಷಯಗಳಲ್ಲಿಯೂ ಬಲಾತ್ಕಾರವಿರುವುದು ಸರಿಯಲ್ಲ. ಯಾವ ಜಾತಿ, ಮತ ಅಥವಾ ಜನಾಂಗದ ಯಾರೊಬ್ಬನ ವಿರುದ್ಧವಾಗಿಯಾಗಲಿ ಯಾವುದೇ ರೂಪದಿಂದಾಗಲಿ ಹಿಂಸೆಯನ್ನುಪಯೋಗಿಸುವುದಕ್ಕೆ ಬಲವಾಗಿ ವಿರುದ್ಧವಿರುವ ನನ್ನ ಅಭಿಪ್ರಾಯಗಳು

ಮಹಾಜನರಿಗೆ ಗೊತ್ತಿವೆ. ಆದುದರಿಂದ ಬರಬಹುದಾದ ಉಪವಾಸದಿಂದ ನನ್ನನ್ನು ಉಳಿಸುವ ಆತುರದ ಅಸಹನೆಯಿಂದ ಸಲ್ಲದ ದಾರಿಗಳನ್ನುಪಯೋಗಿಸಿ ತೀಕ್ಷ್ಣಗತಿಯನ್ನು ಸಾಧಿಸಲು ಚಳವಳವನ್ನು ನಡೆಸುವವರು ಪ್ರಯತ್ನಿಸದಿರಲೆಂದು ಹಾರೈಸುತ್ತೇನೆ. ಹಾಗೆ ಮಾಡಿದರೆ ಅವರು ನನ್ನ ಅಂತ್ಯವನ್ನು ಬೇಗನೇ ತಂದೊಡ್ಡಿದಂತಾಗುವುದು.

ಯಾವ ಚಳವಳಕ್ಕಾಗಿ ದೇವರು ನನ್ನ ಚಿಕ್ಕ ಉಪವಾಸವನ್ನು ಪ್ರೇರೇಪಿಸಿದನೆಂದು ನಾನು ನಂಬುತ್ತೇನೋ ಅಂಥ ಚಳವಳವು ಹೀನಾವಸ್ಥೆಯನ್ನು ಪಡೆಯುವುದನ್ನು ನೋಡುವುದೆಂದರೆ ನನಗೆ ಜೀವಂತ ಮರಣವೇ ಸರಿ. ಪುಂಡರ ದಾರಿಗಳಿಂದ ಹರಿಜನರ ಹಾಗೂ ಹಿಂದೂ ಧರ್ಮದ ಉದ್ದೇಶಕ್ಕೆ ಸಹಾಯವಾಗುವಂತಿಲ್ಲ. ಗುಲಾಮಗಿರಿಯಲ್ಲಿರುವ ಸುಮಾರು ಅರುವತ್ತು ಮಿಲಿಯ ಜನರ ಶ್ರೇಯಸ್ಸನ್ನೊಳಗೊಂಡಿರುವುದರಿಂದ ಇಡೀ ಜಗತ್ತಿನಲ್ಲಿ ಅಲ್ಲದಿದ್ದರೆ ಹಿಂದುಸ್ಥಾನದಲ್ಲಿ ಈ ಚಳವಳವು ಅತ್ಯಂತ ದೊಡ್ಡ ಧಾರ್ಮಿಕ ಸುಧಾರಣೆಯ ಚಳವಳವಿರುತ್ತದೆ. ಸಂಪ್ರದಾಯವಾದಿಗಳಿಗೆ ಅಂದರೆ ಈ ಚಳವಳವನ್ನು ಮೆಚ್ಚದವರಿಗೆ ಎಲ್ಲ ಬಗೆಯ ಗೌರವ ಮತ್ತು ಆದರಗಳನ್ನು ತೋರಿಸಬೇಕು. ಪ್ರೇಮದಿಂದ, ಸ್ವಾರ್ಥತ್ಯಾಗದಿಂದ ಮತ್ತು ಜೀವನದ ಪಾವಿತ್ರ್ಯದಿಂದ ಅವರ ಹೃದಯದ ಮೇಲೆ ಪರಿಣಾಮವಾಗುವಂತೆ ಮಾಡಿ ಅವರನ್ನು ನಾವು ಒಲಿಸಿಕೊಳ್ಳಬೇಕು. ನಮ್ಮ ಸತ್ಯದಲ್ಲಿ ನಮಗೆ ಶ್ರದ್ಧೆ ಇರಬೇಕು ಮತ್ತು ನಮ್ಮ ವಿರುದ್ಧ ಪಕ್ಷದವರನ್ನು ಒಲಿಸಿಕೊಳ್ಳಲು ಪ್ರೇಮವು ಇರಬೇಕು.

ಶತಮಾನಗಳಿಂದ ಅಡಿಗೊತ್ತಲ್ಪಟ್ಟ ಅರ್ವತ್ತು ಮಿಲಿಯ ಜನರ ಸ್ವಾತಂತ್ರ್ಯವನ್ನು ಬರೇ ದೇಖಾವೆಯ ಪ್ರದರ್ಶನಗಳಿಂದ ಸಂಪಾದಿಸುವುದು ಸಾಧ್ಯವಿಲ್ಲವೆಂಬುದು ನಿಸ್ಸಂದೇಹವಿರುತ್ತದೆ. ಸರ್ವತೋಮುಖವಾದ ಭದ್ರವಾದ ವಿಧಾಯಕ ಕಾರ್ಯಕ್ರಮವು ಅತ್ಯಾವಶ್ಯಕವಿರುತ್ತದೆ. ಉದಾತ್ತ ಧಾರ್ಮಿಕ ಭಾವನೆಯಿಂದ ಪ್ರೇರಿತರಾದ ಸಾವಿರಾರು ಸ್ತ್ರೀಪುರುಷರು ಬಾಲಬಾಲಿಕೆಯರು ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿ

ಈ ಕಾರ್ಯವನ್ನು ಸಾಧಿಸಬೇಕಾಗಿಯದೆ. ಯಾರಿಗೆ ಈ ಚಳವಳದ ಧಾರ್ಮಿಕ ಸ್ವರೂಪವು ತಿಳಿಯುವುದಿಲ್ಲವೋ ಅವರು ಅದನ್ನು ಬಿಟ್ಟು ಹೋಗಬೇಕಾಗಿ ನಾನು ಪ್ರಾರ್ಥಿಸುತ್ತೇನೆ. ಆ ಶ್ರದ್ಧೆ ಮತ್ತು ಉತ್ಸಾಹ ಗಳಿದ್ದವರು ಅಲ್ಪ ಮಂದಿಯಾಗಲಿ ಹೆಚ್ಚು ಮಂದಿಯಾಗಲಿ ಅವರೇ ಈ ಚಳವಳವನ್ನು ನಡೆಸಲಿ.

ಅಸ್ಪೃಶ್ಯತಾನಿವಾರಣೆಯು ಮಹತ್ತಾದ ರಾಜಕೀಯ ಪರಿಣಾಮ ಗಳನ್ನುಂಟುಮಾಡಬಹುದು ಮಾತ್ರವಲ್ಲ ಉಂಟುಮಾಡುವುದು. ಆದರೂ ಅದು ರಾಜಕೀಯ ಚಳವಳವಲ್ಲ. ಅದು ಹಿಂದೂಧರ್ಮವನ್ನು ಶುದ್ಧ ಗೊಳಿಸುವ ಚಳವಳ ಮಾತ್ರವಿರುತ್ತದೆ. ಆ ಪರಿಶುದ್ಧತೆಯು ಶುದ್ಧ ಸಾಧನಗಳಿಂದ ಮಾತ್ರ ಬರುವುದು ಸಾಧ್ಯವಿದೆ. ದೇಶದ ಎಲ್ಲಾ ಭಾಗ ಗಳಲ್ಲಿ ಕೆಲಸಮಾಡುವ ಇಂಥ ನೂರಾರು ಅಲ್ಲ ಸಾವಿರಾರು ಜನರು ಇದ್ದಾರೆಂಬುದಕ್ಕಾಗಿ ನಾನು ದೇವರಿಗೆ ಕೃತಜ್ಞನಿದ್ದೇನೆ. ತಾಳ್ಮೆ ಇಲ್ಲದ ಅವಿಶ್ವಾಸಿಗಳು ಕಾದುಕೊಂಡು ನೋಡುತ್ತ ಇರಲಿ. ಉತ್ತಮ ಭಾವ ಗಳಿಂದ ಪ್ರೇರಿತರಾದರೂ ಅವಸರದಿಂದ ಇದರಲ್ಲಿ ಕೈಹಾಕಿ ಚಳವಳ ವನ್ನು ಅವರು ಹಾಳುಮಾಡದಿರಲಿ.

ಲೇಖಾಂಕ ೪.

ಒಬ್ಬ ಪತ್ರಲೇಖಕರು ಈ ರೀತಿ ಬರೆಯುತ್ತಾರೆ: 'ನಿಮ್ಮ ಕಳೆದ ಬಾರಿಯ ಉಪವಾಸವು ಅತೀ ಕೆಟ್ಟ ರೀತಿಯ ಬಲಾತ್ಕಾರವೆಂದು ನಾನು ಭಾವಿಸುತ್ತೇನೆ. ಯೆರವಾಡ ಒಪ್ಪಂದದ ವಿಷಯದಲ್ಲಿ ನನ್ನ ಅಭಿ ಪ್ರಾಯವನ್ನು ನಿಮ್ಮಿಂದ ಮರೆಮಾಡಲು ಬಯಸುವುದಿಲ್ಲ. ನನ್ನ ಅಭಿ ಪ್ರಾಯವೇ ದೇಶಕಾರ್ಯದಲ್ಲಿ ನುರಿತ ಹಲವು ಮಂದಿಯ ಅಭಿಪ್ರಾಯ ವಾಗಿದ್ದರೂ ವ್ಯಕ್ತಿಶಃ ನಿಮ್ಮ ಮೇಲೆ ಅವರಿಗೆ ತುಂಬಾ ಗೌರವವಿರುವುದ ರಿಂದಲೂ ನೀವು ಈಗ ಯೆರವಾಡಾ ಜೈಲಿನಲ್ಲಿ ಕೈದಿಯಾಗಿದ್ದೀರಿ ಎಂಬು ದರಿಂದಲೂ ಆ ಒಪ್ಪಂದವಾಗುವಂತೆ ಮಾಡಿದ ನಿಮ್ಮ ಕೃತ್ಯದ ವಿಷಯ

ದಲ್ಲಿ ಬಹಿರಂಗವಾಗಿ ಅವರು ಟೀಕಿಸುವುದಿಲ್ಲ. ಈ ಒಪ್ಪಂದವು ಒಂದು ಸಾರ್ವಜನಿಕ ದೌರ್ಭಾಗ್ಯವೆಂದೂ ನಿಮ್ಮ ದುರಾದೃಷ್ಟದ ಆ ಉಪವಾಸ ವಲ್ಲದಿದ್ದರೆ ಇಂಥ ಒಪ್ಪಂದವು ಎಂದಿಗೂ ಆಗುತ್ತಿದ್ದಿಲ್ಲವೆಂದೂ ನನ್ನ ಖಂಡಿತ ಅಭಿಪ್ರಾಯವಿರುತ್ತದೆ. ನೀವು ಆದರಿಸುವ ನಿಮ್ಮ ಸ್ನೇಹಿತ ರೊಬ್ಬರು ಈ ಒಪ್ಪಂದಕ್ಕೆ ಒಪ್ಪಿಗೆಕೊಡದಿದ್ದರೆ ನೀವು ಸಾಯುವುದು ಖಂಡಿತವೆಂಬುದರಿಂದ ಮಾತ್ರ ಇದಕ್ಕೆ ಒಪ್ಪಿಗೆಕೊಡಬೇಕಾಯಿತೆಂದೂ ಇಲ್ಲದಿದ್ದರೆ ಅವರು ಎಷ್ಟಕ್ಕೂ ಒಪ್ಪುತ್ತಿದ್ದಿಲ್ಲವೆಂದೂ ಹೇಳಿದ್ದು ನನಗೆ ಗೊತ್ತಿದೆ. ಆಲೋಚನೆಮಾಡಬಲ್ಲ ಬಹಳ ಮಂದಿ ಹಿಂದುಗಳು ಈ ಒಪ್ಪಂದವನ್ನು ಒಪ್ಪಿಕೊಳ್ಳಬೇಕಾಗಿ ಬಂದುದಕ್ಕೆ ದುಃಖಿಸುತ್ತಾರೆ. ಈಗ ನೀವು ಮಾಡಿದ ಸೂಚನೆಗಳನ್ನು ಲಂಡನಿನಲ್ಲಿ ನೀವು ಒಪ್ಪಿಕೊಂಡಿದ್ದರೆ ಇಂಥ ಒಪ್ಪಂದದ ಆವಶ್ಯಕತೆಯೇ ಉಳಿಯುತ್ತಿದ್ದಿಲ್ಲವೆಂದು ಅವರ ಎಣಿಕೆ.'

ಅದೇ ಲೇಖಕರು ಇನ್ನೂ ಈ ರೀತಿ ಬರೆಯುತ್ತಾರೆ: 'ಈ ಮಿಲಿಯು ಗಟ್ಟಲೆ ಜನರ ಮೇಲೆ ಪರಿಣಾಮವಾಗುವಂತೆ ನಾನು ಉಪವಾಸವನ್ನು ಕೈಕೊಂಡೆನೆಂದು ನೀವು ಬರೆಯುತ್ತೀರಿ. ನಿಮ್ಮ ಉದ್ದೇಶವು ಅದಾಗಿ ಬಹುದು. ಆದರೆ ತಮ್ಮ ಬುದ್ಧಿಯ ಇತ್ಯರ್ಥ ಹಾಗೂ ಮನಸ್ಸಿನ ಭಾವನೆಗಳನ್ನು ಬದಿಗಿರಿಸಿ ನಿಮ್ಮ ಬೆಲೆಯುಳ್ಳ ಪ್ರಾಣವನ್ನು ರಕ್ಷಿಸ ಬೇಕೆಂಬುದಕ್ಕೆ ಮಾತ್ರ ಯಾರು ಈ ಒಪ್ಪಂದವನ್ನು ಸ್ವೀಕರಿಸಬೇಕಾ ಯಿತೊ ಅವರ ಮೇಲೆ ನಿಮ್ಮ ಉಪವಾಸದ ನಿಜವಾದ ಪರಿಣಾಮ ವಾಯಿತಲ್ಲದೆ ಮಿಲಿಯುಗಟ್ಟಲೆ ಜನರ ಮೇಲಲ್ಲ. ಆ ಜನರ ಪ್ರೇಮ ದಿಂದ ಐದು ದಿನಗಳೊಳಗೆ ಪರಿಸ್ಥಿತಿಯು ಬದಲಾಗಿ ಯೆರವಾಡಾ ಒಪ್ಪಂದವಾಯಿತೆಂದು ನೀವು ಬರೆಯುತ್ತೀರಿ. ಇದು ನಿಜವಾಗಿ ಯಥಾರ್ಥ ಮಾತೆನ್ನುವಿರಾ? ಉಪವಾಸದಿಂದ ನೀವು ಸಾಯುವಿರೆಂಬ ಹೆದರಿಕೆಯಿಂದ ಯೆರವಾಡಾ ಒಪ್ಪಂದವಾಯಿತೆಂದರೆ ಹೆಚ್ಚು ಸತ್ಯ ವಲ್ಲವೆ? ಯಾವ ಪರಿಸ್ಥಿತಿಗಳಿಂದ ಒಪ್ಪಂದವಾಯಿತೆಂದು ಜ್ಞಾಪಿಸಿ ಕೊಂಡರೆ ಅದನ್ನು ಮಹತ್ವದ ಸಂಗತಿಯೆಂದಿಟ್ಟುಕೊಳ್ಳಲಾರಿರಿ. ಒಪ್ಪಂ

ದವು ಸಂಪೂರ್ಣವಾಗಿ ಜಾರಿಗೆ ಬರುವುದಿಲ್ಲವೆಂದು ನೀವು ಪುನಃ ಉಪವಾಸ ಹಿಡಿದರೆ ಇನ್ನೂ ಹೆಚ್ಚಿನ ಅನ್ಯಾಯವಾಗುವುದು. ನಿಮ್ಮಂಥ ಶ್ರೇಷ್ಠತರಗತಿಯ ದೇಶದ ಧುರೀಣರ ಮೇಲೆ ಟೀಕೆಮಾಡುವುದು ನನಗೆ ಇಷ್ಟವಾದ ಸಂಗತಿಯಲ್ಲ. ಆದರೆ ಈಗಿನ ಸಂದರ್ಭವೆಂಥದೆಂದರೆ ನಾನು ಸುಮ್ಮನಿರುವುದೆಂದರೆ ವಂಚಿಸಿದಂತಾಗುತ್ತದೆ. ಮಿಲಿಯಗಟ್ಟಲೆ ಜನರೆದುರು ಅಸ್ಪೃಶ್ಯತಾ ನಿವಾರಣೆಯ ಕುರಿತು ನಿಮ್ಮ ಅಭಿಪ್ರಾಯಗಳನ್ನು ಹೇಳಿದಾಗ ಅವರು ಆಕ್ಷೇಪವೆತ್ತಲಿಲ್ಲವೆಂಬುದರಿಂದ ಇವರೆಲ್ಲ ಈ ಕುರಿತು ನಿಮ್ಮ ಅಭಿಪ್ರಾಯಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಂದು ನೀವು ಕಟ್ಟಿಕೊಳ್ಳುವುದು ಸರಿಯಲ್ಲ. ಮಹತ್ಪುರುಷರಾದ ನಿಮ್ಮ ಮೇಲಿನ ಗೌರವದಿಂದಲೂ ನಿಮ್ಮ ರಾಜಕೀಯ ಮುಖಂಡತ್ವದ ದೆಸೆಯಿಂದಲೂ ಅವರು ಮೌನದಿಂದ ನಿಮ್ಮ ಮಾತುಗಳನ್ನು ಕೇಳಿರುವರು. ಉತ್ತರ ಹಿಂದುಸ್ಥಾನದಲ್ಲಿ ನಿಮ್ಮ ಅಭಿಪ್ರಾಯವನ್ನು ಒಪ್ಪದವರು ಹಲವು ಮಂದಿ ಇರುವುದು ನನಗೆ ಗೊತ್ತಿದೆ. ಹೀಗೆ ವಿರುದ್ಧ ಅಭಿಪ್ರಾಯಗಳುಳ್ಳವರು ಕೂಡಾ ನಿಮ್ಮ ಮಾತುಗಳಿಗೆ ಮರ್ಯಾದೆಕೊಟ್ಟು ಮೌನದಿಂದ ಕೇಳುವುದು ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಮಾತ್ರವಲ್ಲ ಈ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತರೀತಿಯಲ್ಲಿ ಪ್ರದರ್ಶಿಸಲು ಬಹಳ ಮಟ್ಟಿಗೆ ಶಕ್ತರಲ್ಲವೆಂಬುದು ನಿಮಗೆ ಗೊತ್ತಿದೆ. ವಿರುದ್ಧಪಕ್ಷದ ಅದರಲ್ಲೂ ನಿಮ್ಮಂಥ ಶ್ರೇಷ್ಠರು ಒಂದು ವಿರುದ್ಧ ಅಭಿಪ್ರಾಯವನ್ನು ಹೇಳುವಾಗ ಅವರು ತಮ್ಮ ದಾರಿಯನ್ನು ಬಿಟ್ಟು ಅದನ್ನು ಖಂಡಿಸುವ ಕೆಲಸಕ್ಕೆ ಕೈಹಚ್ಚುವವರಲ್ಲ.'

ಈ ಪತ್ರದಿಂದ ಅಗತ್ಯವಿಲ್ಲದ ಭಾಗಗಳನ್ನು ಇಲ್ಲಿ ಕೊಟ್ಟಿಲ್ಲ ಮತ್ತು ಅವರು ಸೂಚಿಸಿದ ದೇಶಕಾರ್ಯ ಧುರೀಣರ ಹೆಸರುಗಳನ್ನು ನಾನು ಇಲ್ಲಿ ಪ್ರಕಟಿಸಲಿಲ್ಲ. ಈ ಧುರೀಣರು ನಾನು ಸಾಯುತ್ತೇನೆಂಬ ಹೆದರಿಕೆಯಲ್ಲದಿದ್ದರೆ ಯಾವ ಅಭಿಪ್ರಾಯಗಳಿಗೆ ಎಂದೂ ಒಪ್ಪಿಗೆಕೊಡುತ್ತಿದ್ದಿಲ್ಲವೊ ಅಂಥ ಅಭಿಪ್ರಾಯಗಳಿಗೆ ತಮ್ಮ ಅಭಿಪ್ರಾಯಗಳನ್ನು ಬದಿಗೊತ್ತಿ ಒಪ್ಪಿಕೊಂಡಿರುವರೆಂಬುದು ನಿಜವಾದರೆ ಅದು ನನಗೆ ಬಹಳ ನೋವನ್ನುಂಟು ಮಾಡುವ ವಿಷಯವು. ಪತ್ರಲೇಖಕರು ಬರೆದಂತೆ

ಅವರು ವರ್ತಿಸಿರುವರಾದರೆ ಅವರು ದೇಶಕ್ಕೆ ದೊಡ್ಡ ಅಪಕಾರವನ್ನು ಮಾಡಿರುವರು ಮಾತ್ರವಲ್ಲ ನನ್ನ ಉಪವಾಸದ ಧಾರ್ಮಿಕ ಸ್ವರೂಪ ವನ್ನು ಅವರು ತಿಳಿದುಕೊಂಡಿಲ್ಲವೆನ್ನಬೇಕಾಗುತ್ತದೆ.

ಸಾರ್ವಜನಿಕ ಜೀವನದಲ್ಲಿ ಸಾರ್ವಜನಿಕಹಿತ ಅಥವಾ ಸತ್ಯಕ್ಕಾಗಿ ತಮ್ಮ ಸ್ನೇಹಿತರನ್ನು ತ್ಯಜಿಸಬೇಕಾದ ಕಷ್ಟತರದ ಕರ್ತವ್ಯವನ್ನು ಅನೇಕ ಸಾರಿ ಮಾಡಬೇಕಾಗುತ್ತದೆ. ಒಪ್ಪಂದದಲ್ಲಿ ಅಷ್ಟೊಂದು ಆಕ್ಷೇಪಕರ ವೆಂದು ಈ ಸ್ನೇಹಿತರು ತಿಳಿಯುವಂಥ ವಿಷಯಗಳಾದರೂ ಏನಿವೆ? ಹರಿ ಜನರಿಗೆ ಸ್ಥಾನಗಳನ್ನು ಕಾದಿಡುವುದಕ್ಕೆ ಆಕ್ಷೇಪವಿರಲಾರದು. ಸಂ ಯುಕ್ತ ಮತದಾನಕ್ಕೆ ಆಕ್ಷೇಪವಿರಲಾರದು. ಪ್ರಾಥಮಿಕ ಚುನಾವಣೆ ಯಿಂದ ಉಮೇದ್ವಾರರನ್ನು ನೇಮಿಸುವ ಪದ್ಧತಿಗೂ ಆಕ್ಷೇಪವಿರಲಾರದು. ಇದುವರೆಗೆ ಅನ್ಯಾಯದಿಂದ ಅಪಹರಿಸಿದ ಸಾಮಾಜಿಕ ಹಾಗೂ ಧಾರ್ಮಿಕ ಹಕ್ಕುಗಳನ್ನು ಹರಿಜನರಿಗೆ ಕೊಡಬೇಕೆಂಬ ನಿರ್ಣಯಕ್ಕೆ ಇವರ ಆಕ್ಷೇಪವಿರಲಾರದು. ಉಳಿದ ಒಂದೇ ವಿಷಯವೆಂದರೆ ಹರಿ ಜನರಿಗೆ ಕೊಟ್ಟ ಸ್ಥಾನಗಳ ಸಂಖ್ಯೆ. ರಾಜಾಮುಂಜೀ ಒಪ್ಪಂದದಲ್ಲಿ ಈ ಸ್ಥಾನಗಳ ಸಂಖ್ಯೆಯು ಇನ್ನೂ ಅಧಿಕವಿರುತ್ತದೆ. ಮಾತ್ರವಲ್ಲ ಹಿಂದೆ ಒಂದು ಲೇಖಾಂಕದಲ್ಲಿ ಹೇಳಿದಂತೆ ಇದುವರೆಗೆ ತಮ್ಮ ಪದದಲಿತವಾ ಗಿರಿಸಲ್ಪಟ್ಟ ಈ ಜನರು ನಿಜವಾಗಿ ತಮ್ಮ ಬಂಧುಗಳೆಂದು ಸವರ್ಣ ಹಿಂದುಗಳು ನಂಬಿದರೆ ಹರಿಜನರಿಗೆ ಅವರು ಎಷ್ಟು ಹೆಚ್ಚಿನ ಸ್ಥಾನ ಗಳನ್ನು ಕೊಟ್ಟರೂ ಅದು ಹೆಚ್ಚೆನಿಸದು. ಮನಸ್ಸಿಲ್ಲದ ಸವರ್ಣ ಹಿಂದು ಗಳಿಂದ ನನ್ನ ಉಪವಾಸದಿಂದ ಸೆಳೆದುಕೊಳ್ಳಲ್ಪಟ್ಟ ಅಧಿಕಾರಗಳಲ್ಲದೆ ಒಪ್ಪಂದದಿಂದ ಹರಿಜನರಿಗೆ ಸಿಕ್ಕುವ ಅಧಿಕಾರಗಳು ನ್ಯಾಯವಾದವು ಗಳಲ್ಲವೆಂದೂ ಅರ್ಹತೆ ಇಲ್ಲದಿದ್ದರೂ ಕೊಟ್ಟಿರುವ ಉಪಕಾರಗಳೆಂದೂ ಮೊದಲಾಗಿ ಒಪ್ಪಂದವನ್ನು ಭಾವಿಸುವುದಾದರೆ ಪರಿಸ್ಥಿತಿಯು ನಿಜ ವಾಗಿಯೂ ದುಃಖಕರವಿರುತ್ತದೆ. ಆದ್ದರಿಂದ ನನ್ನ ಪತ್ರಲೇಖಕರು ಹೇಳಿರುವ ಸಂಗತಿಗಳು ನಿಜವೆಂದಾದರೆ ನನ್ನ ಉಪವಾಸವು ಎರಡು ಪಾಲು ನ್ಯಾಯವೆಂದು ನಾನು ಭಾವಿಸುತ್ತೇನೆ. ಯಾವ ಸಮಾಜವು ಅವರ ಅನ್ಯಾಯವಿಲ್ಲದೆ ಬಹಿಷ್ಕರಿಸಲ್ಪಟ್ಟ ಜನರಿಗೆ ಸ್ವಲ್ಪ ಮಟ್ಟಿನ

ನ್ಯಾಯವನ್ನು ಮಾಡುವುದಕ್ಕೆ ಕೂಡ ಇಷ್ಟಪಡುವುದಿಲ್ಲವೋ ಅಂಥ ಸಮಾಜಕ್ಕೆ ಸೇರಿದ ವ್ಯಕ್ತಿಯಾಗಿ ಜೀವಿಸಿಕೊಂಡಿರಲಿಕ್ಕೆ ನಾನು ಬಯಸ ಲಾರೆನು. ನಾನು ಹೇಳಿದ ಮಿಲಿಯಗಟ್ಟಲೆ ಜನರು ಅಸ್ಪೃಶ್ಯತೆಯನ್ನು ತೀಕ್ಷ್ಣ ಶಬ್ದಗಳಲ್ಲಿ ಖಂಡಿಸಿ ನಾನು ಆಡುತ್ತಿದ್ದ ಮಾತುಗಳಿಗೆ ಒಪ್ಪಿಗೆ ಕೊಟ್ಟಿಲ್ಲವೆಂದೂ ನಾನು ಮಹತ್ಪುರುಷನೆಂಬುದರಿಂದ ನನ್ನ ಮೇಲಿದ್ದ ಗೌರವದಿಂದ ಹಾಗೂ ನನ್ನ ರಾಜಕೀಯ ಮುಖಂಡತ್ವಕ್ಕಾಗಿ ಅವರು ಮೌನವಾಗಿ ಕೇಳಿದರಲ್ಲದೆ ಒಪ್ಪಿಕೊಂಡಂತೆ ತೋರಿಸಿರಬಹುದೆಂದೂ ಪತ್ರ ಲೇಖಕರು ಬರೆಯುವುದು ನಿಜವೆಂದಾದರೆ ನನ್ನ ಉಪವಾಸವು ಮೂರು ಪಾಲು ನ್ಯಾಯವೆಂದು ನಾನು ತಿಳಿಯುತ್ತೇನೆ. ಇಂಥ ಅಸತ್ಯದ ನಡುವೆ ಜೀವನವು ನನಗೆ ಭಾರವಾಗುವುದು. ಜನರೂ ಧುರೀಣರೂ ನನ್ನಂಥ ಮಹಾತ್ಮರೆನ್ನಿಸುವವರ ಅಭಿಪ್ರಾಯಗಳಿಗೆ ವಿರುದ್ಧವಿರುವ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಿ ಜಾರಿಗೆ ತರುವ ಆವಶ್ಯಕತೆಯನ್ನು ಎಷ್ಟು ಬೇಗನೇ ತಿಳಿದುಕೊಳ್ಳುತ್ತಾರೋ ಅಷ್ಟು ಬೇಗನೇ ಅವರಿಗೂ ದೇಶಕ್ಕೂ ನನ್ನಂಥವರಿಗೂ ಶ್ರೇಯಸ್ಸಾಗುವುದು. ವಾತಾವರಣವು ಈ ರೀತಿ ಪರಿಶುದ್ಧವಾಗುವ ಏಕಮಾತ್ರ ಉದ್ದೇಶದಿಂದಲೇ ನಾನು ಸಂತೋಷದಿಂದ ಉಪವಾಸವನ್ನು ಕೈಕೊಳ್ಳಬಲ್ಲೆನು.

ನನ್ನ ಪತ್ರಲೇಖಕರು ತಮ್ಮ ಲೇಖದಿಂದ ಚಳವಳಕ್ಕೆ ತಕ್ಕ ಸಮಯದಲ್ಲಿ ಉಪಕಾರ ಮಾಡಿರುವರು. ಚಳವಳದಲ್ಲಿದ್ದವರು ಚಳವಳದ ಹಾಗೂ ನನ್ನ ಬರಬಹುದಾದ ಉಪವಾಸದ ಸರಿಯಾದ ಅರ್ಥವನ್ನು ತಿಳಿದುಕೊಳ್ಳಬೇಕು. ಸಮಾಜದ ಹಾಗೂ ದೇಶದ ಅಭ್ಯುದಯಕ್ಕೆ ಬೇಕಾದ ಸಂಗತಿಗಳೆಂದು ತಮಗಿರುವ ಅಭಿಪ್ರಾಯಗಳನ್ನು ಯಾರೊಬ್ಬನಾದರೂ ಬಿಟ್ಟುಕೊಡುವಂತೆ ಒತ್ತಾಯ ಮಾಡುವುದು ನನ್ನ ಉಪವಾಸದ ಉದ್ದೇಶವಲ್ಲವೆಂದು ಎಷ್ಟು ಬಲವತ್ತರವಾಗಿ ನಾನು ಹೇಳಬಹುದೋ ಅಷ್ಟು ಬಲವಾಗಿ ನಾನು ಪುನಃ ಹೇಳುತ್ತೇನೆ. ನಾನು ಹೆಸರು ಹೇಳಬಲ್ಲ ಹಾಗೂ ಸಂಖ್ಯೆ ಹೇಳಬಲ್ಲ ಜನರ ಮೇಲಿನ ಪರಿಣಾಮಕ್ಕಾಗಿ ಉಪವಾಸವನ್ನು ಮಾಡುವುದಲ್ಲ. ನನ್ನ ಮನಸ್ಸಿನಲ್ಲಿ ಇರುವ

ಆ ಮಿಲಿಯಗಟ್ಟಲೆ ಜನರ ಮೇಲೆ, ಯಾರಿಗೂ ನನಗೂ ಕಡಿದು ಹೋಗಲು ಸಾಧ್ಯವಿಲ್ಲದ ಸಂಬಂಧವಿದೆಯೆಂದು ನನ್ನ ವಿಶ್ವಾಸವಿದೆಯೋ ಆ ಜನರ ಮೇಲೆ ತೋರಿಕೆಗೆ ಬಾರದ ಹಾಗೂ ಸ್ವಾಭಾವಿಕ ರೀತಿಯಲ್ಲಿ ಪರಿಣಾಮವಾಗಿ ಅವರಲ್ಲಿ ಕಳವಳವನ್ನುಂಟುಮಾಡುವುದೇ ನನ್ನ ಉಪ ವಾಸದ ಉದ್ದೇಶವು.

ಈಗ ನಾನು ಒಪ್ಪಿಕೊಂಡುದನ್ನು ಲಂಡನಿನಲ್ಲಿ ಒಪ್ಪಿದ್ದರೆ ಒಪ್ಪಂದದ ಆವಶ್ಯಕತೆ ಇದ್ದಿಲ್ಲವೆಂದು ಲೇಖಕರು ಸೂಚಿಸುತ್ತಾರೆ. ಹಿಂದು ಸ್ಥಾನದಲ್ಲಿ ಸಾಧ್ಯವಾದ ಸಂಗತಿಗಳು ಲಂಡನಿನಲ್ಲಿ ಸಾಧ್ಯವಿರಲಿಲ್ಲವೆಂದು ಹೇಳಬಲ್ಲೆನಲ್ಲದೆ ಅದಕ್ಕಿಂತ ಹೆಚ್ಚಿನ ಭೂತಕಾಲದ ಸಂಗತಿಗಳನ್ನು ಪುನಃ ಹೊರಗೆಡಹಲಿಚ್ಛಿಸುವುದಿಲ್ಲ. ಪತ್ರಲೇಖಕರು ಆ ಸಮಯದಲ್ಲಿ ಲಂಡನಿನಲ್ಲಿ ಇದ್ದರೆಂಬುದು ನಿಜ. ಆದರೆ ನನಗೆ ತಿಳಿದುಬಂದಿರುವ ಸಂಗತಿಗಳೆಲ್ಲ ಅವರಿಗೆ ಗೊತ್ತಿಲ್ಲ.

ಒಪ್ಪಂದವನ್ನು ಖಂಡಿಸುವ ಅನೇಕ ಪತ್ರಗಳು ನನಗೆ ಬರುತ್ತಿವೆ ಎಂದು ಮಹಾಜನರು ಭಾವಿಸಬೇಕಾಗಿಲ್ಲ. ನನಗೆ ಜ್ಞಾಪಕವಿರುವ ಮಟ್ಟಿಗೆ ಇದೊಂದೇ ಅಂಥ ಪತ್ರವಿರುತ್ತದೆ. ಎರಡು ಮೂರು ಪತ್ರಗಳು ನಾನು ಬಲಾತ್ಕಾರಮಾಡಿರುವೆನೆಂದು ಟೀಕಿಸುತ್ತವೆ. ಆದರೆ ಅದರಿಂದ ಹರಿಜನರಿಗೆ ಒಪ್ಪಂದದಲ್ಲಿ ಸಿಕ್ಕಿದ ಅಂಶವು ಅವರ ಅರ್ಹತೆಗೆ ಮಿಕ್ಕಿರುವುದೆಂದು ಇನ್ನಾರೂ ಸೂಚಿಸುವುದಿಲ್ಲ. ಇದೊಂದು ಲೇಖಕ್ಕೆ ಪ್ರತಿಯಾಗಿ ನನ್ನ ಉಪವಾಸ ಕೂಡಾ ಹಾಗೂ ಒಪ್ಪಂದವನ್ನು ಸಮರ್ಥಿಸಿ ಧನ್ಯವಾದಗಳನ್ನು ಕೊಡುವ ನೂರಾರು ಪತ್ರಗಳೂ ತಂತಿಗಳೂ ನನಗೆ ಬಂದಿವೆ. ಒಂದೆರಡು ಆಕ್ಷೇಪಗಳನ್ನುಳಿದು ಇಲ್ಲಿಯ ಮತ್ತು ಪಾಶ್ಚಾತ್ಯ ದೇಶದಲ್ಲಿಯ ನನ್ನ ಜತೆ ಕೆಲಸಗಾರರೆಲ್ಲರೂ ಅದಕ್ಕೆ ಒಪ್ಪಿಗೆ ಇತ್ತಿರುವರಲ್ಲದೆ ಅದರ ಧಾರ್ಮಿಕ ಪರಿಣಾಮಕ್ಕೆ ಒಳಗಾಗಿರುವರು. ಆದರೂ ನನ್ನ ಎಂದಿನ ಕ್ರಮದಂತೆ ಮತ್ತು ನಾನು ಸರಳಮಾರ್ಗದಲ್ಲಿರಲು ಸಹಾಯವಾಗುವಂತೆ ಮಾತ್ರವಲ್ಲ, ನನ್ನ ಧ್ಯೇಯಕ್ಕೆ ಯಾವ ಹಾನಿಯೂ ಬಾರದಂತೆ ಮಾಡಲು ವಿರುದ್ಧ ಟೀಕೆಯುಳ್ಳ ಪತ್ರಗಳನ್ನು ನಾನು ಪ್ರಕಟಿಸು

ತ್ತೇನೆ. ಅದರಲ್ಲೂ ಪತ್ರಲೇಖಕರ ಪರಿಚಯವಿದ್ದು ಈ ಪತ್ರಲೇಖಕರಂತೆ ಒಳ್ಳೆಯ ಭಾವದಿಂದ ಬರೆದ ಪತ್ರಗಳಾದಲ್ಲಿ ಅವನ್ನು ನಾನು ಪ್ರಕಟಿಸಲೇ ಬೇಕಾಗುತ್ತದೆ.

ನಾನು ಈ ಲೇಖಾಂಕವನ್ನು ಮುಗಿಸುವಾಗ ಅಖಿಲಭಾರತ ಹರಿಜನ ಸೇವಾಸಂಘದ ಜಾಗರೂಕ ಕಾರ್ಯದರ್ಶಿಯವರು ಹರಿಜನರ ಸಂಖ್ಯೆಯು ಆರ್ವತ್ತು ಮಿಲಿಯವಲ್ಲವೆಂದೂ ನಾಲ್ವತ್ತು ಮಿಲಿಯದೊಳಗಿದೆಯೆಂದೂ ತಿಳಿಸುವ ತಂತಿಯು ನನ್ನ ಕೈಸೇರಿತು. ಶ್ರೀ. ಥಕ್ಕರರು ನನ್ನ ಉಪವಾಸದ ಸಮಯದಲ್ಲಿ ನನ್ನ ಈ ತಪ್ಪನ್ನು ತಿದ್ದಿದರೂ ಪುನಃ ತಪ್ಪುಸಂಖ್ಯೆಯನ್ನು ಕೊಟ್ಟ ಬಗ್ಗೆ ನಾನು ಕ್ಷಮೆಯನ್ನು ಯಾಚಿಸುತ್ತೇನೆ.

ಲೇಖಾಂಕ ೫.

ಹರಿಜನೋದ್ಧಾರದ ಈ ಚಳವಳಕ್ಕೂ ನನ್ನ ಈ ಲೇಖಗಳಿಗೂ ಒಳ್ಳೇಯ ರೀತಿಯಿಂದ ಪ್ರಕಟಣೆಯನ್ನು ಕೊಡುತ್ತಿರುವ ದೇಶದ ಪತ್ರಿಕಾ ಪ್ರಪಂಚಕ್ಕೆ ನನ್ನ ಕೃತಜ್ಞತೆಯನ್ನು ವ್ಯಕ್ತಗೊಳಿಸುತ್ತೇನೆ ಮತ್ತು ಈ ಚಳವಳದ ಸಾಮಾನ್ಯ ಎಲ್ಲ ವಿಷಯಗಳನ್ನು ಕುರಿತು ಚರ್ಚಿಸುವುದಕ್ಕಾಗಿ ನನಗೆ ಸಂದರ್ಶನವಿತ್ತ ಶ್ರೀಯುತ ರಾಜ ಭೋಜ ಮತ್ತು ಅವರ ಸ್ನೇಹಿತರಿಗೆ ನಾನು ಕಳೆದ ವಾರ ಹೇಳಿರುವ ವಿಷಯಗಳ ಒಂದಂಶವನ್ನು ಸಂಕ್ಷೇಪರೀತಿಯಿಂದ ಈ ನನ್ನ ಐದನೇ ಲೇಖಾಂಕದಲ್ಲಿ ಕೊಡಲಿಚ್ಛಿಸುತ್ತೇನೆ.

ಈ ಚಳವಳಕ್ಕೆ ಹರಿಜನರು ಯಾವ ರೀತಿಯಿಂದ ಸಹಾಯ ಮಾಡಬಹುದೆಂಬುದು ಅವರ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಯಾಗಿತ್ತು. ಸವರ್ಣ ಹಿಂದುಗಳಲ್ಲಿ ಕೆಲವರು ಹರಿಜನರೊಡನೆ ಸಂಪೂರ್ಣ ಸಮಾನತೆಯಿಂದ ವರ್ತಿಸಲಿಕ್ಕೆ ಸಾಧ್ಯವಿಲ್ಲವೆಂಬುದಕ್ಕೆ ಮಾಡುವ ಆರೋಪಗಳನ್ನು ತಾವಾಗಿ ನಿವಾರಿಸಲಿಕ್ಕೆ ಹರಿಜನರು ಯತ್ನಿಸಬಹುದು. ವಿಸ್ತಾರವಾದ ಹರಿಜನ ಸಮುದಾಯದ ನಿಜವಾಗಿಯೂ ದುಃಖಕರವಾದ ಸ್ಥಿತಿ

ಗಳಿಗೆ ಸವರ್ಣ ಹಿಂದುಗಳೇ ಸಂಪೂರ್ಣ ಕಾರಣರೆಂದೂ ಅಸ್ಪೃಶ್ಯತೆಯನ್ನು ಹೋಗಲಾಡಿಸಿದ ಮಾತ್ರಕ್ಕೆ ಸಹಜವಾಗಿ ಹರಿಜನರ ಸ್ಥಿತಿಗಳಲ್ಲಿ ಸುಧಾರಣೆಯಾಗುವುದೆಂದೂ ನಾನು ಖಂಡಿತ ಶಬ್ದಗಳಲ್ಲಿ ಈ ಮೊದಲೇ ಹೇಳಿರುವೆನು. ಸುಧಾರಣೆಯಾಗದೆ ಅಸ್ಪೃಶ್ಯತೆಯನ್ನು ಹೋಗಲಾಡಿಸಲಾಗದೆಂಬ ಶರ್ತವನ್ನು ಹಾಕುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಆದರೂ ಈಗ ಇರುವ ಸ್ಥಿತಿಗತಿಗಳಲ್ಲಿ ಕೂಡ ಎಷ್ಟರಮಟ್ಟಿಗೆ ಸಾಧ್ಯವಿದೆಯೊ ಅಷ್ಟರ ಮಟ್ಟಿಗೆ ತಮ್ಮ ಸಮಾಜದ ಒಳಗಿನ ಸುಧಾರಣೆಗಳನ್ನು ಸಾಧಿಸುವುದು ಹರಿಜನ ಕೆಲಸಗಾರರ ಸ್ಪಷ್ಟವಾದ ಕರ್ತವ್ಯವಿರುತ್ತದೆ.

ಹರಿಜನ ಕೆಲಸಗಾರರು ತಮ್ಮ ಪೂರ್ಣ ಶಕ್ತಿಯನ್ನು ಈ ಕೆಳಗಿನ ಕೆಲಸಗಳಿಗಾಗಿ ಉಪಯೋಗಿಸಬೇಕು: 1. ಹರಿಜನರೊಳಗೆ ಶುಚಿತ್ವ ಮತ್ತು ಆರೋಗ್ಯ ನಿಯಮಗಳನ್ನು ಪ್ರಚಾರಪಡಿಸುವುದು. 2. ಅಶುಚಿಯಾದ ವೃತ್ತಿಗಳೆಂದು ತಿಳಿಯಲ್ಪಡುವ ತೋಟಿ ಕೆಲಸ ಮತ್ತು ಚರ್ಮದ ಕೆಲಸಗಳನ್ನು ಮಾಡುವ ಸುಧಾರಿತ ಕ್ರಮಗಳ ಪ್ರಚಾರ. 3. ಮಾಂಸಾಹಾರದ ತ್ಯಾಗ, ಪೂರ್ಣ ಸಾಧ್ಯವಲ್ಲದಿದ್ದರೆ ಕೊನೆಯ ಪಕ್ಷಕ್ಕೆ ಶವ ಮಾಂಸ ಮತ್ತು ಗೋಮಾಂಸಗಳ ತ್ಯಾಗ. 4. ಮಾದಕ ದ್ರವಗಳ ತ್ಯಾಗ. 5. ತಮ್ಮ ಮಕ್ಕಳನ್ನು ಹಗಲು ಶಾಲೆಗಳಿದ್ದಲ್ಲಿ ಅವುಗಳಿಗೆ ಕಳುಹಿಸುವಂತೆ ಹೆತ್ತವರಿಗೆ ಬೋಧಿಸುವುದು ಮತ್ತು ರಾತ್ರೆ ಶಾಲೆಗಳನ್ನು ತೆರೆದಲ್ಲಿ ಹೆತ್ತವರೂ ಆ ಶಾಲೆಗಳಿಗೆ ಹೋಗುವಂತೆ ಯತ್ನಿಸುವುದು. 6. ತಮ್ಮೊಳಗೆ ಪ್ರಚಾರದಲ್ಲಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು.

ಮೇಲಿನ ವಿಷಯಗಳ ಅಭಿಪ್ರಾಯಗಳನ್ನು ಸ್ಪಷ್ಟಗೊಳಿಸುವುದಕ್ಕಾಗಿ ಒಂದೊಂದನ್ನೇ ವಿಚಾರಿಸೋಣ. ನಮ್ಮಲ್ಲಿಯ ವಾಯುಗುಣದ ದೆಸೆಯಿಂದಾದರೂ ದಿನಕ್ಕೊಮ್ಮೆ ಸ್ನಾನಮಾಡುವುದು ಅತ್ಯಾವಶ್ಯಕ. ಮಾತ್ರವಲ್ಲ ಎಲ್ಲಾ ವಾಯುಗುಣಗಳಲ್ಲಿಯೂ ನಿರ್ಮಲವಾದ ಬಟ್ಟೆಗಳನ್ನು ಉಪಯೋಗಿಸುವುದು ಆವಶ್ಯಕ. ಹರಿಜನರ ವಾಸಸ್ಥಾನಗಳಲ್ಲಿ

ನೀರು ಸುಲಭವಾಗಿ ಸಿಕ್ಕುವುದಿಲ್ಲವೆಂದು ನನಗೆ ಗೊತ್ತಿದೆ. ಸಾಮಾನ್ಯ ವಾಗಿ ಸಾರ್ವಜನಿಕ ಬಾವಿ ಮತ್ತು ಕೆರೆಗಳಿಗೆ ಅವರಿಗೆ ಪ್ರವೇಶವಿಲ್ಲ. ಬಟ್ಟೆಗಳನ್ನು ಬದಲಾಯಿಸಲಿಕ್ಕೆ ಅವರು ಅತೀ ಬಡವರಾದುದರಿಂದ ಸಾಧ್ಯವಿಲ್ಲ. ಒಂದು ಲೋಟೆ ತುಂಬ ನೀರು ಇದ್ದರೂ ಶುಚಿಯಾದ ಸ್ನಾನವನ್ನು ಮಾಡಲಿಕ್ಕೆ ಸಾಧ್ಯವುಂಟು. ಶುಚಿಯಾದ ಒಂದು ಅಂಗ ವಸ್ತ್ರವನ್ನು ಪೂರ್ಣ ಒದ್ದೆ ಮಾಡಿ ಇಡೀ ದೇಹವನ್ನು ತಲೆಯನ್ನು ಕೂಡ ಚೆನ್ನಾಗಿ ಉಜ್ಜಬೇಕು. ಅನಂತರ ಒಣಗಿದ ಅಂಗವಸ್ತ್ರದಿಂದ ಮೈಯನ್ನು ಒರಸಿಕೊಳ್ಳಬೇಕು. ಈ ಸ್ನಾನವನ್ನು ದಿನನಿತ್ಯ ಮಾಡುವುದಿದ್ದರೆ ಒದ್ದೆ ಅಂಗವಸ್ತ್ರವನ್ನು ಚೆನ್ನಾಗಿ ಹಿಂಡಿ ನೀರು ತೆಗೆದರೆ ಈ ವಾಯುಗುಣ ದಲ್ಲಿ ಅದನ್ನೇ ಮೈಯನ್ನು ಒರಸಿಕೊಳ್ಳಲಿಕ್ಕೂ ಉಪಯೋಗಿಸಬಹುದು. ಮಾತ್ರವಲ್ಲ ಲಂಗೋಟಿಯನ್ನು ಮಾತ್ರ ಧರಿಸಿ ಅದೇ ಬಟ್ಟೆಗಳನ್ನು ಅಲ್ಲೇ ಸುಲಭವಾಗಿ ಒಗೆದು ಒಣಗಿಸುವುದು ಕಷ್ಟವಿಲ್ಲ. ನಾನು ಹೇಳಿ ರುವ ಈ ವಿಷಯುಗಳಲ್ಲಿ ಹೊಸತೇನೂ ಇಲ್ಲವೆಂದು ನನಗೆ ಗೊತ್ತಿದೆ. ಆದರೂ ಈ ಸುಲಭ ವಿಷಯುಗಳನ್ನು ನೂರಾರು ಕೆಲಸಗಾರರಿಗೆ ವಿವ ರಿಸುವ ಆವಶ್ಯಕತೆಯನ್ನು ನಾನು ಕಂಡಿದ್ದೇನೆ. ವಿದ್ಯಾವಂತ ಪದವೀ ಧರರಿಗೂ ಕೂಡ ಆರೋಗ್ಯದ ಈ ಪ್ರಾಥಮಿಕ ಸಂಗತಿಗಳು ಗೊತ್ತಿಲ್ಲ ದಿರುವುದನ್ನು ನಾನು ಕಂಡಿದ್ದೇನೆ.

ಸುಧಾರಿತ ರೀತಿಯಿಂದ ತೋಟಿ ಕೆಲಸವನ್ನು ಮಾಡುವ ವಿಚಾರ ದಲ್ಲಿ ಸ್ವಾರ್ಥಪರರಾದ ಮತ್ತು ತಿಳುವಳಿಕೆ ಇಲ್ಲದ ಸವರ್ಣ ಹಿಂದು ಗಳು ಮಲಮೂತ್ರಗಳನ್ನು ಅಸಹ್ಯವಾಗದ ರೀತಿಯಿಂದ ತೆಗೆಯುವುದು ಸಾಧ್ಯವಿಲ್ಲದಂತೆ ಮಾಡುವರೆನ್ನಬಹುದು. ಅಸ್ಪೃಶ್ಯತೆಯ ದೆಸೆಯಿಂದ ಪಾಯಖಾನೆಗಳು ವರ್ಣಿಸಲಿಕ್ಕೆ ಅಸಾಧ್ಯವಾದಷ್ಟು ಅಶುಚಿಯಾಗಿರು ತ್ತವೆ. ಅವುಗಳಲ್ಲಿ ಸಾಕಷ್ಟು ಬೆಳಕಿಲ್ಲ-ಸರಿಯಾದ ಗಾಳಿಸಂಚಾರ ವಿಲ್ಲ. ಅವುಗಳನ್ನು ಕಟ್ಟುವ ಕ್ರಮದಿಂದ ಅವುಗಳ ಏನಾದರೊಂದು ಭಾಗವನ್ನು ಮಾತ್ರ ಅದು ಕೂಡ ಬಹಳ ಅಶುಚಿಯಾದ ಕ್ರಮದಿಂದ ನಿರ್ಮಲಗೊಳಿಸುವುದು ಕಷ್ಟಸಾಧ್ಯವಾಗುತ್ತದೆ. ಈ ಪಾಯಖಾನೆ

ಗಳನ್ನು ಉಪಯೋಗಿಸುವುದೆಂದರೆ ದಿನಕ್ಕೊಮ್ಮೆ ನರಕಲೋಕಕ್ಕೆ ಹೋಗಿ ಬಂದಂತಾಗುವ್ರದು. ತಮ್ಮ ಸ್ವಂತ ಮಲವನ್ನು ನೋಡಲು ತಿರಸ್ಕರಿಸುವ ಮತ್ತು ಅಸ್ಪೃಶ್ಯರಾಗಲೀ ತಾವಾಗಲಿ ಪಾಯಖಾನೆಗಳ ಒಳಭಾಗಗಳನ್ನು ಸರಿಯಾಗಿ ನಿರ್ಮಲಗೊಳಿಸಲು ಒಪ್ಪದ ಈ ಮೂಢಬುದ್ಧಿಯ ದೆಸೆಯಿಂದ ಈಗ ನಮ್ಮ ದೇಶದಲ್ಲಿ ಅಪ್ರಾಯದಲ್ಲೆ ಸಾಯುವ ಸಾವಿರಾರು ಜನರ ಸಂಖ್ಯೆಯು ಇನ್ನಷ್ಟು ಸಾವಿರ ಹೆಚ್ಚುತ್ತಿತ್ತು. ನಮ್ಮಲ್ಲಿಯ ಒಳ್ಳೆಯ ವಾಯುಗುಣದ ಸಹಾಯದಿಂದ ಮಾತ್ರ ಇದರ ದುಷ್ಪರಿಣಾಮವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಈ ಕೆಟ್ಟಸ್ಥಿತಿಯಲ್ಲಿ ಕೂಡ ಸಮಾಜಕ್ಕೆ ಅತ್ಯಂತ ಆವಶ್ಯಕವಾದ ಈ ಸೇವೆಯನ್ನು ಮಾಡಲಿಕ್ಕಿರುವ ಹರಿಜನರು ತಮ್ಮ ಈ ಕೆಲಸವಾದ ಕೂಡಲೆ ಸ್ನಾನವನ್ನಾದರೂ ಮಾಡಬಹುದು ಮತ್ತು ಈಗ ಅವರು ಶುಚಿಮಾಡುವುದಕ್ಕೆ ಉಪಯೋಗಿಸುವ ಸ್ವಲ್ಪ ಹುಲ್ಲಿನ ಬದಲಿಗೆ ಅವರು ಒಣಗಿದ ಮಣ್ಣನ್ನು ತುಂಬಾ ಉಪಯೋಗಿಸ ಬಹುದು.

ತೋಟಿ ಕೆಲಸದಲ್ಲಿ ಪ್ರವೀಣನೆಂದು ಹೇಳಿಕೊಳ್ಳುವ ನಾನು ಅಗ್ಗ ವಾದ, ಉತ್ತಮವಾದ ಮತ್ತು ಸಂಪೂರ್ಣ ನಿರ್ಮಲವಾದ ರೀತಿಗಳಿಂದ ಈ ಸೇವೆಯನ್ನು ಮಾಡುವುದನ್ನು ತೋರಿಸಿಕೊಡಬಲ್ಲೆನು. ಅದರಲ್ಲೂ ಗ್ರಾಮಸ್ಥರೂ ಪಟ್ಟಣಸ್ಥರೂ ಸಹಾಯಮಾಡುವುದಿದ್ದರೆ ತುಂಬಾ ಸುಧಾ ರಣೆಗಳನ್ನು ಮಾಡಬಹುದು. ಸಂಕ್ಷೇಪವಾಗಿ ಬರೆಯುವ ಈ ಲೇಖ ದಲ್ಲಿ ಈ ಸ್ವಾರಸ್ಯವಾದ ವಿಷಯವನ್ನು ಕುರಿತು ಎಲ್ಲ ಸಂಗತಿಗಳನ್ನು ವಿವರಿಸುವುದು ಸಾಧ್ಯವಿಲ್ಲ. ಆತುರವುಳ್ಳವರು ಸಾಮಾನ್ಯ ಶುಚಿತ್ವ ನಿಯಮಗಳ ಅದರಲ್ಲೂ ಗ್ರಾಮಗಳಲ್ಲಿಯ ಶುಚಿತ್ವ ನಿಯಮಗಳ ಕುರಿತು ನಾನು ಬರೆದಿರುವ ಬರವಣಿಗೆಗಳನ್ನು ಓದಿನೋಡಬಹುದು. ಶುಚಿಮಾಡುವ ತಮ್ಮ ಕೆಲಸದಲ್ಲಿರುವಾಗ ತೋಟಿಗಳು ತಮ್ಮ ಉದ್ಯೋ ಗದ ಉಡುಪೊಂದನ್ನು ಪ್ರತ್ಯೇಕವಾಗಿ ಧರಿಸಬೇಕು. ತೋಟಿಗಳನ್ನು ಉಪಯೋಗಿಸಿಕೊಳ್ಳುವ ಯಜಮಾನರು ಒಟ್ಟು ಸೇರಿಯಾದರೂ ತಮ್ಮ ತಮ್ಮ ತೋಟಿಗಳಿಗೆ ಈ ರೀತಿಯ ಉಡುಪನ್ನು ಒದಗಿಸಿಕೊಡಬಹುದು.

ಶುಚಿಯಾದ ರೀತಿಯಿಂದ ಚರ್ಮದ ಕೆಲಸ ಮಾಡುವುದು ಇದಕ್ಕಿಂತ ಸ್ವಲ್ಪ ಕಷ್ಟವಾದ ವಿಷಯ. ಶವಗಳ ಚರ್ಮ ಸುಲಿಯುವ ಮತ್ತು ಚರ್ಮವನ್ನು ಹದಮಾಡುವ ಆಧುನಿಕ ಕ್ರಮಗಳು ನಮ್ಮ ಸಮಗಾರರಿಗೆ ಗೊತ್ತಿಲ್ಲ. ಹದಮಾಡುವುದೆಂಬುದನ್ನು ನಾನು ವಿಶಾಲವಾದ ಅರ್ಥದಲ್ಲಿ ಉಪಯೋಗಿಸಿದ್ದೇನೆ. ಈ ಉಪಯುಕ್ತ ಕೆಲಸ ಮಾಡುವ ಜನಸಮುದಾಯವನ್ನು ತಮ್ಮ ಧರ್ಮವನ್ನೇ ಅನುಸರಿಸುವ ಮತ್ತು ತಮ್ಮ ದೇಶಬಾಂಧವರಾದ ಈ ಜನರನ್ನು ಮೇಲ್ಜಾತಿಯವರೆನ್ನಿಸಿಕೊಳ್ಳುವವರು ಅನ್ಯಾಯವಾಗಿ ದುರ್ಲಕ್ಷಿಸಿರುವರು. ಶವಗಳನ್ನು ಸಾಗಿಸುವಲ್ಲಿಂದ ಚರ್ಮವನ್ನು ಹದಮಾಡುವ ತನಕ ಎಲ್ಲ ಕೆಲಸಗಳು ಬಹಳ ಹೀನರೀತಿಯಲ್ಲಿ ಮಾಡಲ್ಪಟ್ಟು ದೇಶಕ್ಕೆ ಅಪರಿಮಿತ ದ್ರವ್ಯವು ನಷ್ಟವಾಗುತ್ತಿದೆ ಮಾತ್ರವಲ್ಲ ಇಲ್ಲಿ ತಯಾರಾಗುವ ಚರ್ಮವು ಬಹಳ ಕೀಳು ತರಗತಿಯದಾಗುತ್ತದೆ. ಧರ್ಮದ ವೇಷದಲ್ಲಿ ಪ್ರಚಾರದಲ್ಲಿರುವ ಅಸ್ಪೃಶ್ಯತೆಯೆಂಬ ಮೂಢವಿಶ್ವಾಸದ ಕಾರಣದಿಂದ ದೇಶಕ್ಕೆ ವರ್ಷಾವಧಿ ಎಷ್ಟು ನಷ್ಟವಾಗುತ್ತಿದೆಯೆಂದು ಚರ್ಮದ ಕೆಲಸದ ಆಧುನಿಕ ರೀತಿಗಳನ್ನು ಜನೋಪಕಾರಕ್ಕಾಗಿ ಕಲಿತ ದಿವಂಗತ ಮಧುಸೂದನ ದಾಸರು ಲೆಕ್ಕ ಹಾಕಿ ತೋರಿಸಿರುವರು. ಹರಿಜನ ಕೆಲಸಗಾರರು ಈ ಆಧುನಿಕ ಕ್ರಮಗಳನ್ನು ಅಭ್ಯಾಸ ಮಾಡಿ ಸಾಧ್ಯವಿದ್ದಷ್ಟರ ಮಟ್ಟಿಗೆ ಅವನ್ನು ನಮ್ಮ ಚರ್ಮದ ಕೆಲಸಗಾರರಲ್ಲಿ ಪ್ರಚಾರಕ್ಕೆ ತರಬಹುದು.

ಅತ್ಯಂತ ಕ್ರೂರ ರೀತಿಯಿಂದ ಅವರ ಕಡೆಗೆ ಬಿಸಾಡಲ್ಪಡುತ್ತಿರುವ ಗೃಹಸ್ಥರ ಮನೆಗಳ ಊಟದ ಉಚ್ಛಿಷ್ಟವನ್ನು ಎಷ್ಟು ಮಾತ್ರಕ್ಕೂ ಸ್ವೀಕರಿಸದಂತೆ ತೋಟಿಗಳಿಗೆ ಬೋಧಿಸಬೇಕು. ಅನೇಕ ವರ್ಷಗಳ ಅಭ್ಯಾಸದಿಂದ ತೋಟಿಗಳ ಸೊಗಸಿನ ಅಭಿಪ್ರಾಯವು ಮುಂದವಾಗಿರುವುದರಿಂದ ಇನ್ನೊಬ್ಬರ ಉಚ್ಛಿಷ್ಟವನ್ನು ತಿನ್ನುವುದು ಸರಿಯಲ್ಲವೆಂದು ಅವರಿಗೆ ತಿಳಿಯುವುದಿಲ್ಲ. ಯಜಮಾನರ ಊಟದಲ್ಲಿಯ ಭಕ್ಷ್ಯಗಳೆಂದು ಅವರು ತಿಳಿಯುವ ವಸ್ತುಗಳಿಗಾಗಿ ಅವರು ಆತ್ಯಾಸೆಪಡುತ್ತಾರೆ. ಶಾಲೆಯಲ್ಲಿ ಮಕ್ಕಳಿಗೆ ಈ ಉಚ್ಛಿಷ್ಟ ತಿನ್ನದೆ ಮನೆಯಲ್ಲೆ ಬೇಯಿಸುವ ಜವಾರಿ

ಅಥವಾ ಬಜಾರಿ ರೊಟ್ಟಿಯಿಂದ ತೃಪ್ತರಾಗಿರುವಂತೆ ಬೋಧಿಸಿದ್ದಕ್ಕಾಗಿ ಇಂಥ ಶಾಲೆಗಳಿಂದ ಮಕ್ಕಳನ್ನು ಭಂಗಿಗಳು ಹಿಂತೆಗೆದದ್ದು ನನಗೆ ಗೊತ್ತಿದೆ.

ಚರ್ಮದ ಕೆಲಸಗಾರರು ಶವಮಾಂಸವನ್ನೂ ಗೋಮಾಂಸವನ್ನೂ ತ್ಯಜಿಸುವಂತೆ ಪ್ರಯತ್ನಿಸಬೇಕು. ಸಸ್ಯಾಹಾರಿಯಾದ ನಾನು ಹರಿಜನರು ಮಾಂಸಾಹಾರವನ್ನೇ ತ್ಯಜಿಸಬೇಕಾಗಿ ಬಯಸುತ್ತೇನೆ ಮಾತ್ರವಲ್ಲ ಹಲವರು ಈ ರೀತಿ ತ್ಯಜಿಸಿದವರು ಅವರಲ್ಲಿದ್ದಾರೆ. ಇಷ್ಟು ಸುಧಾರಣೆಗೆ ಅವರು ಸಿದ್ಧರಿಲ್ಲದಿದ್ದರೆ ಆರೋಗ್ಯಕ್ಕೆ ವಿರೋಧವಾದ ಮತ್ತು ಉಳಿದ ಮನುಷ್ಯಜಾತಿಯಿಂದ ತಿರಸ್ಕರಿಸಲ್ಪಡುವ ಶವಮಾಂಸವನ್ನು ಅವರು ಬಿಡಬೇಕು ಮಾತ್ರವಲ್ಲ ಹಿಂದೂಧರ್ಮಕ್ಕೆ ವಿರುದ್ಧವಾದ ಗೋಮಾಂಸವನ್ನು ಅವರು ಬಿಡಬೇಕು. ಶವಮಾಂಸವು ಶವಗಳನ್ನು ತೆಗೆದ ಬಗ್ಗೆ ಅವರಿಗೆ ಸಿಕ್ಕುವ ಮಜೂರಿಯೆಂದು ನನಗೆ ಗೊತ್ತಿದೆ. ಕೆಲವೆಡೆಗಳಲ್ಲಿ ಶವಮಾಂಸವನ್ನು ಬಿಟ್ಟ ಹರಿಜನರನ್ನು ಗ್ರಾಮಸ್ಥರು ಹೊಡೆದು ಅದನ್ನು ತಿನ್ನುವುದು ಅವರ ಧರ್ಮವೆಂದು ಹೇಳಿದರೆಂದೂ ಈ ಮಾಂಸ ತಿನ್ನುವುದನ್ನು ಬಿಟ್ಟರೆ ಬೇರೆ ಮಜೂರಿ ಕೊಡದೆ ಸತ್ತ ದನಕರುಗಳನ್ನು ಇವರು ತೆಗೆಯಲಿಕ್ಕೆ ತೊಂದರೆಕೊಟ್ಟಾರೆಂದು ಗ್ರಾಮಸ್ಥರು ಹೆದರಿದ್ದೇ ಇದರ ಕಾರಣವೆಂದೂ ಡಾಕ್ಟರ ಅಂಬೇಡಕರರು ನನಗೆ ಹೇಳಿದರು. ಯಾವ ತೊಂದರೆಯೇ ಇರಲಿ ಶವಮಾಂಸ ಮತ್ತು ಗೋಮಾಂಸಗಳನ್ನು ತ್ಯಜಿಸಲೇ ಬೇಕು. ಇದೊಂದು ಆತ್ಮಸಂಯಮದಿಂದ ಹರಿಜನರ ಗೌರವವು ಸವರ್ಣ ಹಿಂದುಗಳ ದೃಷ್ಟಿಯಲ್ಲಿ ಹೆಚ್ಚುವುದು ಮಾತ್ರವಲ್ಲ ಅಸ್ಪೃಶ್ಯತಾನಿವಾರಣೆಯ ಚಳವಳದಲ್ಲಿ ಸವರ್ಣ ಹಿಂದೂಸುಧಾರಕರ ಕೆಲಸವು ಸುಲಭವಾಗುವುದು.

ನಾಲ್ಕನೆ ಮತ್ತು ಐದನೇ ವಿಷಯಗಳ ಕುರಿತು ಟೀಕೆಮಾಡುವ ಆವಶ್ಯಕತೆ ಇಲ್ಲ. ಅವು ಸ್ವಯಂವೇದ್ಯವಿರುತ್ತವೆ.

ಕೊನೆಯ ವಿಷಯವೆಂದರೆ ಅಸ್ಪೃಶ್ಯರೊಳಗೇನೇ ಪ್ರಚಾರದಲ್ಲಿರುವ ಅಸ್ಪೃಶ್ಯತೆಯ ನಿವಾರಣೆ. ಇದು ಕೂಡಲೇ ಮಾಡಬೇಕಾದ

ಕೆಲಸ. ಒಂದೇ ಸಲ ಈ ದುಬಾರಿ ಅಸ್ಪೃಶ್ಯತೆಯನ್ನು ಹೋಗಲಾಡಿಸದೆ ಅಸ್ಪೃಶ್ಯತಾ ನಿವಾರಣೆಯ ಕೆಲಸವು ಅತ್ಯಂತ ಕಷ್ಟವಾಗುತ್ತದೆ. ಹರಿಜನ ಕೆಲಸಗಾರರಿಗೆ ಇದೊಂದು ಕಠಿಣ ಕಾರ್ಯವಿರುತ್ತದೆ. ಆದರೆ ಈ ಚಳವಳವು ಮುಖ್ಯವಾಗಿ ಧಾರ್ಮಿಕ ಚಳವಳವೆಂದೂ ಹಿಂದೂಧರ್ಮದಲ್ಲಿ ಸೇರಿಕೊಂಡಿರುವ ಕಶ್ಮಲವನ್ನು ಹೋಗಲಾಡಿಸುವುದೇ ಚಳವಳದ ಉದ್ದೇಶವೆಂದೂ ಅವರು ತಿಳಿದುಕೊಂಡರೆ ಈ ಮಹತ್ತಾದ ಸುಧಾರಣೆಯ ಕಾರ್ಯಕ್ಕೆ ಅಗತ್ಯವುಳ್ಳ ಧೈರ್ಯ ಹಾಗೂ ಆತ್ಮವಿಶ್ವಾಸವು ಅವರಿಗೆ ಸಿಕ್ಕುತ್ತದೆ. ಇಂಥ ಚಳವಳದಲ್ಲಿ ಕೆಲಸಗಾರರು ನಿಸ್ವಾರ್ಥಿಗಳೂ ಶುದ್ಧನಡತೆಯವರೂ ಇರುವುದು ಅತ್ಯಾವಶ್ಯಕವೆಂದು ನಾನು ಪುನಃ ಒತ್ತಿ ಹೇಳಬೇಕಾಗಿಲ್ಲ.

ಹರಿಜನರಲ್ಲಿ ಅತ್ಯಾತುರರಾದ ಸುಧಾರಕರಿಗೆ ಕೂಡ ತೃಪ್ತಿ ಮಾಡುವ ಮಾತ್ರವಲ್ಲ ಅವರ ಪೂರ್ಣಶಕ್ತಿ ವ ಸಮಯಗಳು ಬೇಕಾಗುವಂಥ ಒಂದು ವಿಧಾಯಕ ಕಾರ್ಯಕ್ರಮವನ್ನು ನಾನಿಲ್ಲಿ ಕೊಟ್ಟಿರುವೆನು. ಈ ಚಳವಳದ ಸಮಯದಲ್ಲಿ ಅವರು ಮಾಡಬಾರದ ಒಂದೆರಡು ಕೆಲಸಗಳನ್ನು ಕೂಡ ಸೂಚಿಸುತ್ತೇನೆ. ಯಾವ ಹರಿಜನ ಕೆಲಸಗಾರನೂ ಯಾರ ವಿರುದ್ಧವಾಗಿಯೂ ಉಪವಾಸವನ್ನು ಕೈಕೊಳ್ಳಲಾಗದು ಮಾತ್ರವಲ್ಲ ಅವರು ಯಾವ ರೀತಿಯ ಸತ್ಯಾಗ್ರಹವನ್ನು ಕೈಕೊಳ್ಳುವ ಆವಶ್ಯಕತೆಯೂ ಇಲ್ಲ. ಈಗ ಸವರ್ಣ ಹಿಂದುಗಳ ಪರೀಕ್ಷೆಯ ಕಾಲವಿರುತ್ತದೆ. ಅವರಿಂದ ಹರಿಜನರನ್ನು ಪ್ರತ್ಯೇಕಿಸುವ ತೊಡಕನ್ನು ಅವರು ಹೇಗೆ ನಿವಾರಿಸುತ್ತಿರುವರೆಂಬುದನ್ನು ಹರಿಜನ ಕೆಲಸಗಾರರು ನೋಡುತ್ತ ಇರಲಿ. ಸ್ಥಳೀಕ ಸವರ್ಣ ಹಿಂದುಗಳೊಡನೆ ಅವರು ಜಗಳವಾಡದಿರಲಿ. ಅವರ ನಡತೆಯು ಯಾವಾಗಲೂ ಮರ್ಯಾದೆ ಮತ್ತು ಗೌರವಗಳಿಂದ ಕೂಡಿ ಇರಬೇಕು. ಈ ಸಮಯದಲ್ಲಂತೂ ಅದು ಇನ್ನೂ ಆವಶ್ಯಕ. ಸ್ವಂತ ಕಷ್ಟಸಹನೆಯಿಂದ ಮಾತ್ರ ಧಾರ್ಮಿಕ ವಿಜಯವು ಸಾಧ್ಯವಾಗುತ್ತದೆ. ದಬ್ಬಾಳಿಕೆ ನಡೆಸುವವರ ವಿರೋಧ ಹಿಂಸೆಯನ್ನು ಕೈಕೊಳ್ಳುವುದರಿಂದ ಅದು ಸಾಧ್ಯವಲ್ಲ. ಬಲಾತ್ಕಾರದಿಂದ ಅವರು ಹಲವು ಸಂಗತಿಗಳನ್ನು ಪಡೆಯಬಹುದು. ಆದರೂ ಅವರ

ಹಕ್ಕುಗಳನ್ನು ಸವರ್ಣ ಹಿಂದೂಗಳ ಮನಸ್ಸನ್ನು ಬದಲಾಯಿಸಿ ಪಡೆಯುವುದೇ ಅವರಿಗೆ ಶ್ರೇಯಸ್ಕರ. ಈಗಂತೂ ಸಾವಿರಾರು ಮಂದಿ ಸವರ್ಣ ಹಿಂದುಗಳು ತಮ್ಮ ಅಪರಾಧವನ್ನು ಒಪ್ಪಿ ಹರಿಜನರಿಗೆ ತಮ್ಮಿಂದಾದ ಅನ್ಯಾಯವನ್ನು ಹೋಗಲಾಡಿಸಲು ಸಂಪೂರ್ಣ ಪ್ರಯತ್ನಮಾಡುವವರಿದ್ದಾರೆಂದು ಆಲೋಚಿಸಿದರೆ ಅವರಿಗೆ ಬೇಕಾದ ಆಸೆಯೂ ಸಮಾಧಾನವೂ ಸಿಕ್ಕಲು ಸಾಕಾದಷ್ಟು ಕಾರಣವಿದೆ. ತಮ್ಮ ಪಕ್ಷಕ್ಕೆ ಸಂಪೂರ್ಣ ನ್ಯಾಯವಿದೆಯೆಂದೂ ಆ ನ್ಯಾಯವನ್ನು ಸ್ಥಾಪಿಸಲು ಕಷ್ಟಗಳನ್ನು ಸ್ವಂತ ಸಹಿಸಲು ಸಾಕಷ್ಟು ಶಕ್ತಿಯಿದೆಯೆಂದೂ ತಮ್ಮಲ್ಲಿ ಅವರು ಪೂರ್ಣ ಆತ್ಮವಿಶ್ವಾಸವನ್ನು ಇಟ್ಟುಕೊಳ್ಳಬೇಕು.

ಚಳವಳಕ್ಕೆ ಸವರ್ಣಹಿಂದುಗಳು ಯಾವ ರೀತಿಯಿಂದ ಸಹಾಯ ಮಾಡಬಹುದೆಂದು ಕೇಳಿದ ಪ್ರಶ್ನೆಗಳಿಗೆ ಮುಂದಿನ ಲೇಖಾಂಕದಲ್ಲಿ ಉತ್ತರಕೊಡುತ್ತೇನೆ.

ಲೇಖಾಂಕ ೬.

ಚಳವಳಕ್ಕೆ ಹರಿಜನರು ಯಾವ ರೀತಿಯಿಂದ ಸಹಾಯಮಾಡಬಹುದೆಂದು ವಿಚಾರಿಸಿ ಹರಿಜನರಲ್ಲಿ ಶ್ರೀ। ರಾಜಭೋಜರೊಬ್ಬರು ನನಗೆ ಪತ್ರ ಬರೆದರೆ ಸವರ್ಣ ಹಿಂದುಗಳಲ್ಲಿ ಗಂಡಸರು, ಹೆಂಗಸರು, ವಿದ್ಯಾರ್ಥಿಗಳು ಮತ್ತಿತರರು ತಮ್ಮ ಇತರ ಕೆಲಸಗಳಿಗೆ ತೊಂದರೆಯಾಗದೆ ತಾವು ಈ ಚಳವಳಕ್ಕೆ ಹೇಗೆ ಸಹಾಯಮಾಡಬಹುದೆಂದು ವಿಚಾರಿಸಿ ದೇಶದ ಎಲ್ಲಾ ಕಡೆಗಳಿಂದ ನೂರಾರು ಪತ್ರಗಳನ್ನು ಬರೆದಿರುವರು. ಅಸ್ಪೃಶ್ಯತಾ ನಿವಾರಣೆಯ ಚಳವಳವು ಜನಸಮುದಾಯದ ಹೃದಯಬದಲಾವಣೆ ಹಾಗೂ ಹರಿಜನರ ಕಡೆಗಿರುವ ಭಾವನೆಯ ಬದಲಾವಣೆಯನ್ನು ಮಾತ್ರ ಸಾಧಿಸುವಂಥ ಚಳವಳವಿರುವುದರಿಂದ ಸವರ್ಣ ಹಿಂದೂ ಸಮಾಜದ ಸಾವಿರಾರು ಮಂದಿ ಜನರು ಹರಿಜನರ ಸೇವೆಮಾಡಲು ತಮ್ಮ ದೈನಿಕಕಾರ್ಯಗಳಲ್ಲಿ ಬದಲಾವಣೆಮಾಡಬೇಕಾದ ಅಗತ್ಯವಿಲ್ಲ.

ಮೊದಲನೆಯ ಕೆಲಸವೆಂದರೆ ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಅಸ್ಪೃಶ್ಯತಾನಿವಾರಣೆಯನ್ನು ಆಚರಿಸುವುದು. ಅಂದರೆ ಅವರನ್ನು ಮುಟ್ಟಲು ಆಕ್ಷೇಪಿಸಬಾರದು. ಮಾತ್ರವಲ್ಲ ಸಾರ್ವಜನಿಕ ದೇವಸ್ಥಾನ ವ ಶಾಲೆ, ಕೆರೆ, ರಸ್ತೆ, ಆಸ್ಪತ್ರೆ ಮೊದಲಾದ ಎಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲಿ ಅವರಿಗೆ ಪ್ರವೇಶಕೊಡಲು ಆತುರಪಡುವುದು. ಹಾಗೂ ಹರಿಜನರನ್ನು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ತಮ್ಮ ಸಮಾನಸ್ಥಾನದಲ್ಲಿರಿಸಲು ಇಚ್ಛಿಸುವುದು— ಇಷ್ಟರ ಆವಶ್ಯಕತೆಯನ್ನು ಒಬ್ಬನು ತಿಳಿದುಕೊಂಡನೆಂದರೆ ಅವನ ಮಟ್ಟಿಗೆ ತಾನು ಮಾಡಬಹುದಾದ ಎಲ್ಲಾ ಕೆಲಸವನ್ನು ಅವನು ಮಾಡಿದಂತಾಗುವುದು.

ಆದರೆ ನನಗೆ ಪ್ರಶ್ನೆಮಾಡಿದವರು ಕೇಳುವುದು ಇಷ್ಟೇ ಅಲ್ಲ. ಮೇಲೆ ಕಾಣಿಸಿದಷ್ಟರ ಮಟ್ಟಿಗೆ ಹೋಗಿ ಮುಂದೆ ಈ ಚಳವಳಕ್ಕೆ ತಾವು ಹೇಗೆ ಸಹಾಯಮಾಡಬಹುದೆಂದು ಇವರು ತಿಳಿಯಲಿಚ್ಛಿಸುತ್ತಾರೆ. ಈ ರೀತಿ ಪ್ರಶ್ನೆಮಾಡಿದವರು ತಮ್ಮ ಹತ್ತಿರದ ನೆರೆಹೊರೆಯನ್ನು ಬಿಟ್ಟು ದೂರಹೋಗಬೇಕಾದುದಿಲ್ಲ. ತಮ್ಮ ನಿತ್ಯಕೆಲಸಗಳಲ್ಲಿ ತಮಗೆ ಸಿಕ್ಕುವ ಸ್ನೇಹಿತರ ಅಭಿಪ್ರಾಯಗಳನ್ನು ಈ ಸುಧಾರಣೆಗೆ ಒಪ್ಪಿಸುವಂತೆ ಅವರು ಪ್ರಯತ್ನಿಸಬೇಕು. ಅಂದರೆ ಯಾರಿಗೆ ಇನ್ನೂ ಅಸ್ಪೃಶ್ಯತಾನಿವಾರಣೆಯ ಆವಶ್ಯಕತೆಯು ತಿಳಿದಿಲ್ಲವೋ ಅವರ ಅಭಿಪ್ರಾಯವನ್ನು ಬದಲಾಯಿಸಲು ಚಳವಳದ ತಮ್ಮ ಜ್ಞಾನವನ್ನು ಉಪಯೋಗಿಸಬೇಕು. ಈ ರೀತಿ ಬದಲಾವಣೆಮಾಡಲು ತಮ್ಮ ಜ್ಞಾನವು ಸಾಲದೆಂದಾದರೆ ಆ ವಿಷಯದಲ್ಲಿ ತಯಾರಾಗುತ್ತಿರುವ ಬರವಣಿಗೆಗಳನ್ನು ತರಿಸಿ ಅವನ್ನು ಅವರಿಗೆ ಕೊಡಬೇಕು. ಮಾತ್ರವಲ್ಲ ಈ ಪ್ರಚಾರಕಾರ್ಯಕ್ಕೆ ವಿಶೇಷ ತರ್ಬೇತಿಯನ್ನು ಹೊಂದಿ ಯೋಗ್ಯರಾಗಿರುವ ಇಡೀ ಸಮಯ ಕೆಲಸಗಾರರೊಡನೆ ಅವರಿಗೆ ಪರಿಚಯವನ್ನು ಮಾಡಿಕೊಡಬೇಕು. ತಮ್ಮ ನೆರೆಹೊರೆಯಲ್ಲಿ ಈ ಚಳವಳವು ಪ್ರಚಾರವಾಗಿಲ್ಲವೆಂದಾದರೆ ಮತ್ತು ತಮ್ಮ ಮಾತು ಸಾಕಷ್ಟು ನಡೆಯುವಂತಿದ್ದರೆ ಸಾರ್ವಜನಿಕ ಸಭೆ ವ ಮೆರವಣಿಗೆ ಮುಂತಾದವುಗಳನ್ನು ಜರಗಿಸಿ ಈ ವಿಷಯ ಒಳ್ಳೆಯ ಭಾಷಣಕೊಡು

ವವರನ್ನು ಆಮಂತ್ರಿಸಬೇಕು. ಸವರ್ಣಹಿಂದುಗಳ ನಡುವೆ ಇಷ್ಟರ ಕೆಲಸವನ್ನು ಮಾಡಬಹುದು.

ಆದರೆ ಇಷ್ಟೊಂದು ಮಂದಿ ಸ್ತ್ರೀಪುರುಷರು ಮಾಡಬಹುದಾದ ನಿಜವಾದ ಕೆಲಸವು ನಿಸ್ಸಂಶಯವಾಗಿ ಹರಿಜನರ ನಡುವೆ ಇರುತ್ತದೆ. ಯಾವ ಸವರ್ಣ ಹಿಂದುಗಳು ನನ್ನ ಐದನೇ ಲೇಖಾಂಕವನ್ನು ಓದಿನೋಡಿ ರುವರೊ ಅವರಿಗೆ ಹರಿಜನರ ಬಗ್ಗೆ ಹೆಚ್ಚಿನ ಸಮಯ, ಶಕ್ತಿ ಅಥವಾ ದ್ರವ್ಯದ ಖರ್ಚಿಲ್ಲದೆ ಹಲವು ಬಗೆಯಿಂದ ಸವರ್ಣ ಹಿಂದುಗಳು ಕೆಲಸ ಮಾಡಬಹುದೆಂದು ತಿಳಿಯಲು ಕಷ್ಟವಿಲ್ಲ. ಹರಿಜನ ಕೆಲಸಗಾರರು ತಮ್ಮವರಿಗೆ ಶುಚಿತ್ವದ ಅಭ್ಯಾಸಗಳನ್ನು ಕಲಿಸಲು ಯತ್ನಿಸುವಾಗ ಅವ ರಿಗೆ ಬೇಕಾದ ನೀರಿನ ಆಶ್ರಯವೇ ಮೊದಲಾದವು ಸುಲಭವಾಗಿ ಸಿಕ್ಕು ವಂತೆ ಮಾಡಿ ಈ ಕೆಲಸಕ್ಕೆ ಸವರ್ಣ ಹಿಂದುಗಳು ತುಂಬಾ ಉತ್ತೇಜನ ಕೊಡಬಹುದು. ಹರಿಜನರ ವಾಸಸ್ಥಾನಗಳ ಹತ್ತಿರದಲ್ಲಿರುವ ಸಾರ್ವ ಜನಿಕ ಬಾವಿ ಅಥವಾ ಕೆರೆಗಳನ್ನು ಉಪಯೋಗಿಸಲಿಕ್ಕೆ ಅವರಿಗೆ ಕಾನೂ ನಿನ ಪ್ರಕಾರ ಹಕ್ಕುಂಟೆಂಬುದನ್ನು ಹತ್ತಿರದ ಸವರ್ಣ ಹಿಂದುಗಳಿಗೆ ಬೋಧಿಸಿ ಅವುಗಳಿಗೆ ಅವರಿಗೆ ಪ್ರವೇಶಸಿಕ್ಕುವಂತೆ ಮಾಡಬಹುದು. ಮಾತ್ರವಲ್ಲ ಈ ರೀತಿ ಸವರ್ಣ ಹಿಂದುಗಳ ಒಪ್ಪಿಗೆಯು ಸಿಕ್ಕಿದ ಮೇಲೆ ಅವನ್ನು ಉಪಯೋಗಿಸುವಾಗ ಹರಿಜನರು ಸವರ್ಣ ಹಿಂದುಗಳ ಮನಸ್ಸು ನೋಯದಂತೆ ಅವನ್ನು ಉಪಯೋಗಿಸುವಂತೆ ಅವರಿಗೂ ಬೋಧಿಸಬಹುದು. ತೋಟಿ ಕೆಲಸದ ವಿಚಾರದಲ್ಲಿ ನೆರೆಹೊರೆಯಲ್ಲಿ ತೋಟಿಗಳನ್ನು ಉಪಯೋಗಿಸುವ ಯಜಮಾನರ ಮನೆಗಳಿಗೆ ಹೋಗಿ ತೋಟಿಕೆಲಸವನ್ನು ನಿರ್ಮಲವಾದ ರೀತಿಯಲ್ಲಿ ಮಾಡಲು ಸುಲಭ ವಾಗುವಂತೆ ಮಾಡಬೇಕೆಂದು ಅವರೊಡನೆ ಕೇಳಿಕೊಳ್ಳಬಹುದು. ಇದಕ್ಕಾಗಿ ಆಧುನಿಕ ಕ್ರಮದಂತೆ ಪಾಯಖಾನೆಗಳನ್ನು ಹೇಗೆ ಕಟ್ಟಿಸ ಬೇಕೆಂಬುದನ್ನೂ ಮಲಮೂತ್ರಗಳನ್ನು ಹೇಗೆ ತೆಗೆಯುತ್ತಾರೆಂಬುದನ್ನೂ ಅವರು ಮೊದಲಾಗಿ ಕಲಿತುಕೊಳ್ಳಬೇಕಾಗುತ್ತದೆ. ತೋಟಿಗಳಿಗೆ ತಮ್ಮ ಉದ್ಯೋಗದ ಸಮಯದಲ್ಲಿ ಉಪಯೋಗಿಸಲಿಕ್ಕೆ ಪ್ರತ್ಯೇಕ ಉಡುಪನ್ನು ಅವರು ಈ ಮನೆಗಳ ಗೃಹಸ್ಥರಿಂದ ತೆಗೆಸಿಕೊಡಬಹುದು. ಮಾತ್ರ

ವಲ್ಲ ತಾವೇ ಸಂಕೋಚಪಡದೆ ತೋಟಿಕೆಲಸವನ್ನು ಮಾಡಿತೋರಿಸಿ ಈ ಸೇವೆಯಲ್ಲಿ ಕೀಳುತನ ಅಥವಾ ಅಗೌರವವೇನೂ ಇಲ್ಲವೆಂಬುದನ್ನು ಅವರು ಸ್ಪಷ್ಟಪಡಿಸಬಹುದು. ಸವರ್ಣಹಿಂದುಗಳು ತಮ್ಮ ಉಚ್ಛಿಷ್ಟ ವನ್ನು ಹರಿಜನರಿಗೆ ಕೊಡದಂತೆ ಅವರು ಪ್ರಚಾರಕಾರ್ಯಮಾಡ ಬಹುದು. ಮಾತ್ರವಲ್ಲ ಅವರಿಗೆ ಸಾಕಷ್ಟು ಕೂಲಿಯನ್ನು ಕೊಡದಿರು ವಾಗ ಅವರಿಗೆ ಯೋಗ್ಯ ಮಜೂರಿ ಸಿಕ್ಕುವಂತೆ ಯಜಮಾನರೊಡನೆ ಹೇಳಿ ಪ್ರಯತ್ನಿಸಬಹುದು.

ಚರ್ಮದ ಕೆಲಸದ ಮಟ್ಟಿಗೆ ಹೆಚ್ಚಿನ ಸಹಾಯಮಾಡುವುದು ಕಷ್ಟವಿರುತ್ತದೆ. ಸಾಕಷ್ಟು ಸಮಯವುಳ್ಳ ಕೆಲಸಗಾರರು ಪರೋಪ ಕಾರಬುದ್ಧಿ ಮತ್ತು ಉತ್ಸಾಹಗಳಿದ್ದರೆ ತಾವೇ ಚರ್ಮಸುಲಿಯುವ ಕೆಲಸದ ಆಧುನಿಕಕ್ರಮವನ್ನು ಅಭ್ಯಾಸಮಾಡಿ ಈ ಸಮಗಾರರಲ್ಲಿ ಆ ಕ್ರಮಗಳನ್ನು ಪ್ರಚಾರಕ್ಕೆ ತರಲು ಯತ್ನಿಸಬಹುದು. ಒಂದು ಕೆಲಸ ವನ್ನಂತೂ ಅವರು ಮಾಡಬಹುದು. ಈ ಸತ್ತ ದನಕರುಗಳನ್ನು ಒಯ್ಯುವ ಕುರಿತು ಇರುವ ವಾಡಿಕೆಗಳನ್ನು ಅವರು ವಿಚಾರಿಸಿ ತಿಳಿದುಕೊಳ್ಳ ಬಹುದು. ಮತ್ತು ಈ ಸೇವೆಯ ಬಗ್ಗೆ ಹರಿಜನರಿಗೆ ನ್ಯಾಯವಾದ ಕೂಲಿಯು ಸಿಕ್ಕುವಂತೆ ಮಾಡಬಹುದು.

ಯೋಗ್ಯತೆ ಮತ್ತು ಸಮಯ ಇದ್ದವರು ಹರಿಜನರಿಗಾಗಿ ಹಗಲು ಅಥವಾ ರಾತ್ರಿಶಾಲೆಗಳನ್ನು ನಡೆಸಬಹುದು. ರಜಾದಿನಗಳಲ್ಲಿ ಹರಿ ಜನ ಮಕ್ಕಳನ್ನು ತಿರುಗಾಟಕ್ಕೆ ಕರೆದೊಯ್ಯಬಹುದು. ಸಂದರ್ಭ ಸಿಕ್ಕಿ ದಾಗ ಹರಿಜನರ ವಾಸಸ್ಥಾನಗಳನ್ನು ಸಂದರ್ಶಿಸಬಹುದು. ಆಗತ್ಯ ವಿದ್ದಾಗ ಔಷಧೋಪಚಾರಗಳನ್ನು ಒದಗಿಸಬಹುದು. ಒಟ್ಟಾರೆ ಹಿಂದೂ ಸಮಾಜದ ದುರ್ಲಕ್ಷಿಸಲ್ಪಟ್ಟ ಹಾಗೂ ತುಚ್ಛೀಕರಿಸಲ್ಪಟ್ಟ ಅಂಶಕ್ಕೆ ತಾವು ಸೇರಿದವರೆಂಬ ಅವರ ಭಾವನೆಯು ಬದಲಾಗಿ ತಮ್ಮ ಜೀವನ ದಲ್ಲಿ ಹೊಸಯುಗವು ಆರಂಭವಾಗಿದೆ ಎಂದು ಅವರು ತಿಳಿಯುವಂತೆ ಮಾಡಬಹುದು.

ನಾನು ವರ್ಣಿಸಿರುವ ಇವೆಲ್ಲ ಕಾರ್ಯಗಳನ್ನು ವಿದ್ಯಾರ್ಥಿವರ್ಗ ದವರು ಅತ್ಯಂತ ಸುಲಭವಾಗಿ ಹಾಗೂ ಉತ್ಕೃಷ್ಟರೀತಿಯಿಂದ ಸಾಧಿಸ

ಬಹುದು. ಈ ಕೆಲಸವನ್ನು ಅನೇಕ ಮಂದಿ ಸ್ತ್ರೀಪುರುಷರು ಪೌನ ಉತ್ಸಾಹ, ಮನೋದಾರ್ಢ್ಯ ಹಾಗೂ ತಿಳುವಳಿಕೆಯಿಂದ ಮಾಡಿದರೆ ನಮ್ಮ ಉದ್ದೇಶವನ್ನು ಕೈಗೂಡಿಸುವ ದಾರಿಯಲ್ಲಿ ನಾವು ಹಲವು ಮೆಟ್ಟಲು ಮುಂದರಿದಂತಾಗುವುದು. ಮಾತ್ರವಲ್ಲ ನಾನು ವರ್ಣಿಸಿರುವುದಕ್ಕಿಂತ ಹೆಚ್ಚಿನ ಸಂಗತಿಗಳ ಕಡೆಗೆ ನಾವು ಲಕ್ಷ್ಯಕೊಡಬೇಕಾಗಿದೆ ಎಂದು ನಮಗೆ ತಿಳಿದುಬರುವುದು. ನನ್ನ ಪ್ರಯಾಣಗಳ ಸಂದರ್ಭಗಳಲ್ಲಿ ನನ್ನ ದೃಷ್ಟಿಗೆ ಬಿದ್ದ ಹಲವು ವಿಷಯಗಳಲ್ಲಿ ಕೆಲವನ್ನು ಮಾತ್ರ ಆರಿಸಿ ನಾನಿಲ್ಲಿ ವರ್ಣಿಸಿದ್ದೇನೆ.

ಲೇಖಾಂಕ ೭.

ಈ ಲೇಖಾಂಕದಲ್ಲಿ ನಾನು ಉತ್ತರಕೊಡಲಿಕ್ಕಿರುವ ಪ್ರಶ್ನೆಗಳಿಗೆ ಹೆಚ್ಚುಕಡಿಮೆ ಹಿಂದಿನ ಲೇಖಗಳಲ್ಲಿ ಉತ್ತರವಿರುವುದಾದರೂ ಅದೇ ಪ್ರಶ್ನೆಗಳು ಇನ್ನೂ ನನ್ನೆಡೆಗೆ ಬರುತ್ತಲೇ ಇರುವುದರಿಂದ ಅವುಗಳಲ್ಲಿ ಸಾಧ್ಯವಿದ್ದಷ್ಟನ್ನು ಶೇಖರಿಸಿ ಈ ಒಂದು ಲೇಖಾಂಕದಲ್ಲಿ ಉತ್ತರಕೊಡುವುದು ಉತ್ತಮವೆಂದು ಭಾವಿಸುತ್ತೇನೆ.

'ಜನರು ಅವರ ಇಚ್ಛೆಗೆ ವಿರುದ್ಧವಾಗಿ ವರ್ತಿಸುವಂತೆ ನೀವು ಅವರನ್ನು ಬಲಾತ್ಕರಿಸುತ್ತ ಇಲ್ಲವೊ?' ಅಂಥ ಪ್ರಶ್ನೆಗಳಲ್ಲಿ ಇದೊಂದಾಗಿರುತ್ತದೆ. ನನ್ನ ಇರಾದೆಯಂತೂ ಹಾಗಿರುವುದಿಲ್ಲವೆಂದು ಹೇಳಬಲ್ಲೆನು. ಅಬಲರಿಗೆ ಬಲಕೊಡುವುದು, ಆಲಸ್ಯವಿದ್ದಲ್ಲಿ ಚಟುವಟಿಕೆಯನ್ನುಂಟುಮಾಡುವುದು, ಅವಿಶ್ವಾಸವಿದ್ದಲ್ಲಿ ವಿಶ್ವಾಸವನ್ನುಂಟುಮಾಡುವುದು ಇದೇ ನಾನು ಯೋಚಿಸುತ್ತಿರುವ ಉಪವಾಸದ ಉದ್ದೇಶ. ಸುಧಾರಣೆಗೆ ವಿರುದ್ಧವಿರುವ ಪಕ್ಷದವರ ಮೇಲೆ ನನ್ನ ಉಪವಾಸದಿಂದ ಯಾವ ಪರಿಣಾಮವೂ ಇಲ್ಲವೆಂಬುದು ಮಾತ್ರವಲ್ಲ ಪ್ರಾಯಶಃ ಅವರ ದೃಷ್ಟಿಯಿಂದ ನ್ಯಾಯವಾಗಿಯೇ ಉಪವಾಸವು ವಿಷಮ ರೀತಿಯಿಂದ ಅಂತ್ಯವಾದರೆ ಅವರು ಸಂತೋಷಪಡಬಹುದು. ಕೋಪದಿಂದ ಬರೆದ ಹಿಂದು ಪತ್ರದಲ್ಲಿ ಒಬ್ಬ ಲೇಖಕನು ಸ್ಪಷ್ಟವಾಗಿ ಇದೇ ರೀತಿ ಬರೆದಿರುವನು.

ಆದರೆ ಇನ್ನೊಬ್ಬ ಲೇಖಕನು ಈ ರೀತಿ ಪ್ರಶ್ನೆ ಮಾಡುತ್ತಾನೆ: 'ಇಂಥಿಂಥ ಪರಿಣಾಮಗಳನ್ನು ಉಂಟುಮಾಡಲು ನಾನು ಇಚ್ಛಿಸುವುದಿಲ್ಲವೆಂದು ನೀವು ಹೇಳಲಿಕ್ಕೇನೂ ಅಡ್ಡಿ ಇಲ್ಲ. ನಿಮ್ಮ ವಿಪರೀತ ಉತ್ಸಾಹದ ಅನುಯಾಯಿಗಳಿಂದ ಪೀಡೆಯಾಗುವುದೆಂದು ಹೆದರಿ ಸಮುದಾಯದ ಅಭಿಪ್ರಾಯಕ್ಕೆ ಒಪ್ಪುವ ಎಷ್ಟೋ ಮಂದಿ ಸಂಪ್ರದಾಯವಾದಿಗಳಿರುವುದು ನನಗೆ ಗೊತ್ತಿದೆ.' ಈ ನಮೂನೆಯ ತರ್ಕವನ್ನು ಯಾವ ಸಂದರ್ಭದಲ್ಲಿಯೂ ಉಪಯೋಗಿಸಬಹುದು. ನನ್ನ ಜೀವಮಾನದಲ್ಲಿ ಉಪವಾಸದ ಅಗತ್ಯಶೀಲದ ಎಷ್ಟೋ ಚಳವಳಗಳನ್ನು ನಾನು ಹೂಡಿದ್ದೇನೆ: ಆದರೂ ನನ್ನ ಧ್ಯೇಯದಿಂದ ನನ್ನನ್ನು ತಿರುಗಿಸಲು ಇದೇ ತೆರನಾದ ಆರೋಪವು ನನ್ನ ಮೇಲೆ ಎಷ್ಟೋ ಬಾರಿ ಹೊರಿಸಲ್ಪಟ್ಟಿದೆ. ನನ್ನ ಇರಾದೆಗೆ ವಿರುದ್ಧವಾದ ಯಾವ ಪರಿಣಾಮವೇ ನನ್ನ ಉಪವಾಸದಿಂದ ಒಮ್ಮೆಗೆ ಆಗುವುದಾದರೂ ಈ ಉಪವಾಸವು ಒಂದು ಗೌರವದ ಪ್ರಶ್ನೆಯಾಗಿದೆಯೆಂಬುದನ್ನು ಒತ್ತಟ್ಟಿಗಿಟ್ಟರೂ ನನ್ನಲ್ಲಿ ವಿಶ್ವಾಸವಿರುವ ಸಾವಿರಾರು ಮಂದಿ ಈ ಉಪವಾಸದಿಂದ ಯೋಗ್ಯ ಪ್ರಯತ್ನಕ್ಕೆ ಕೈಹಚ್ಚುವಂತಾಗುವುದೆಂಬ ನಿಶ್ಚಯವಿರುವುದರಿಂದ ನಾನು ಈ ಉಪವಾಸವನ್ನು ಕೈಕೊಳ್ಳಲೇ ಬೇಕು. ಧಾರ್ಮಿಕ ಸ್ವಭಾವದ ಪ್ರತಿಯೊಂದು ಚಳವಳವೂ ಇದೇ ರೀತಿ ಇರುತ್ತದೆ.

ಎರಡನೇ ಪ್ರಶ್ನೆ ಎಂದರೆ: 'ಹಿಂದೂ ಸಮಾಜದಲ್ಲಿ ಒಂದು ಭಾಗದವರು ಇನ್ನೊಂದು ಭಾಗದವರೊಡನೆ ಜಗಳಾಡುವಂತೆ ನೀವು ಮಾಡುತ್ತ ಇಲ್ಲವೆ?' ಅತ್ಯಂತ ಖಂಡಿತವಾಗಿಯೂ ಇಲ್ಲ. ಪ್ರತಿಯೊಂದು ಸುಧಾರಣೆಗೂ ಸ್ವಲ್ಪ ಮಟ್ಟಿಗೆ ವಿರುದ್ಧವಿಲ್ಲದಿರುವುದು ಸಾಧ್ಯವಿಲ್ಲ. ಈ ರೀತಿ ವಿರೋಧ ಮತ್ತು ಚಳವಳಗಳು ಒಂದು ಮಿತಿಯ ತನಕ ಇರುವುದು ಸಮಾಜದ ಆರೋಗ್ಯಕರ ಬೆಳವಣಿಗೆಯನ್ನೇ ಸೂಚಿಸುತ್ತವೆ. ಸನಾತನ ಪಕ್ಷದವರಿಗೂ ಸುಧಾರಕರಿಗೂ ಚಿರಸ್ಥಾಯಿಯಾದ ದ್ವೇಷವು ಬೆಳೆಯುವುದೆಂಬ ಹೆದರಿಕೆಯು ಸ್ವಲ್ಪವಾದರೂ ನನಗೆ ಇರುವುದಿಲ್ಲ. ಸನಾತನ ಪಕ್ಷದ ವಿರೋಧಕ್ಕೆ ತಕ್ಕ ಮಹತ್ವವನ್ನು ಕೊಡದಿರುವುದಾಗಲಿ ಅವರ ಭಾವನೆಗಳನ್ನು ದುರ್ಲಕ್ಷಿಸುವುದಾಗಲಿ ಅಂಥ ತಪ್ಪನ್ನು ನಾನು

ಮಾಡುವಂತಿಲ್ಲ. ಅವರಲ್ಲಿ ಕೆಲವರು ಸನಾತನ ಧರ್ಮಕ್ಕೆ ಅಪಾಯ ಬಂದಿದೆಯೆಂಬ ಬಲವತ್ತರವಾದ ಭಾವನೆಗೊಳಗಾಗಿದ್ದಾರೆಂಬ ವಿಷಯ ದಲ್ಲಿ ನನಗೆ ಯಾವ ಬಗೆಯ ಸಂಶಯವೂ ಇರುವುದಿಲ್ಲ. ಆದರೂ ತಾತ್ವಿಕ ದೃಷ್ಟಿಯಿಂದ ಸನಾತನಿಗಳಿಗೂ ಸುಧಾರಕರಿಗೂ ಇರುವ ಭೇದವು ಎಷ್ಟು ಕಡಿಮೆಯೆಂದು ಪರೀಕ್ಷಿಸಿದರೆ ಆಶ್ಚರ್ಯವೆನ್ನಿಸುತ್ತದೆ.

ಸನಾತನ ಪಕ್ಷದವರಿಂದ ನನಗೆ ಬಂದಿರುವ ಪತ್ರಗಳು ಪ್ರತಿ ಯೊಂದು ಪತ್ರವೆಂಬಂತೆ ಈ ಕೆಳಗಿನ ವಿಷಯಗಳನ್ನು ಒಪ್ಪಿಕೊಳ್ಳುತ್ತವೆ: '(1) ಹರಿಜನರ ಸ್ಥಿತಿಯನ್ನು ಸುಧಾರಿಸಲು ಮಾಡಬೇಕಾದ ಕೆಲಸವು ತುಂಬಾ ಇರುತ್ತದೆಂದು ನಾವು ಒಪ್ಪುತ್ತೇವೆ. (2) ಅನೇಕ ಸವರ್ಣ ಹಿಂದುಗಳು ಹರಿಜನರನ್ನು ಕೆಟ್ಟ ರೀತಿಯಿಂದ ನಡೆಸುವರೆಂದು ನಾವು ಒಪ್ಪುತ್ತೇವೆ. (3) ಅವರ ಮಕ್ಕಳಿಗೆ ವಿದ್ಯೆ ಸಿಕ್ಕಬೇಕೆಂದೂ ಅವರಿಗೆ ವಾಸಿಸಲಿಕ್ಕೆ ಒಳ್ಳೆಯ ವಾಸಸ್ಥಾನಗಳಿರಬೇಕೆಂದೂ ನಾವು ಒಪ್ಪುತ್ತೇವೆ. (4) ಅವರೇ ಬೇಕಾದ ನೀರನ್ನು ಎಳೆದುಕೊಳ್ಳಲಿಕ್ಕೂ ಸ್ನಾನಮಾಡ ಲಿಕ್ಕೂ ಅವರಿಗೆ ಯೋಗ್ಯ ಏರ್ಪಾಡುಗಳಿರಬೇಕೆಂದು ನಾವು ಒಪ್ಪುತ್ತೇವೆ. (5) ಅವರಿಗೆ ಸಂಪೂರ್ಣ ರಾಜಕೀಯ ಹಕ್ಕುಗಳು ಸಿಕ್ಕಬೇಕೆಂದು ನಾವು ಒಪ್ಪುತ್ತೇವೆ. (6) ದೇವರನ್ನು ಪೂಜಿಸಲಿಕ್ಕೆ ಯೋಗ್ಯ ಅನುಕೂಲತೆ ಗಳು ಅವರಿಗೆ ಇರಬೇಕೆಂಬುದನ್ನು ನಾವು ಒಪ್ಪುತ್ತೇವೆ. (7) ಇತರ ರೆಲ್ಲರಿಗಿರುವ ನಾಗರಿಕ ಹಕ್ಕುಗಳು ಅವರಿಗೂ ಇರಬೇಕೆಂದು ನಾವು ಒಪ್ಪುತ್ತೇವೆ.' ಆದರೆ ಈ ಸನಾತನ ಪಕ್ಷದವರು ಹೇಳುತ್ತಾರೆ: 'ಅವರನ್ನು ಮುಟ್ಟುವಂತೆ ಮಾತ್ರ ನಮಗೆ ಒತ್ತಾಯಮಾಡಬಾರದು. ಅದರಲ್ಲೂ ಅವರ ಈಗಿನ ಸ್ಥಿತಿಯಲ್ಲಿ ಅವರ ಒಡನಾಟದಲ್ಲಿರುವಂತೆ ನಮ್ಮನ್ನು ಬಲಾತ್ಕರಿಸಕೂಡದು.' ಇದಕ್ಕೆ ನಾನು ಅವರಿಗೆ ಹೇಳುವುದೇನೆಂದರೆ:— ನಿಮ್ಮ ಸಮಾನ ತರಗತಿಯಲ್ಲಿ ಅವರನ್ನಿರಿಸಬೇಕೆಂಬುದರ ಆವಶ್ಯಕತೆ ಯನ್ನು ನೀವು ಒಪ್ಪುವುದರಿಂದ ಇನ್ನು ಕೆಲವು ಸವರ್ಣ ಹಿಂದುಗಳು ಒಂದು ಹೆಜ್ಜೆ ಮುಂದೆ ಹೋಗಿ ನೀವು ನಂಬುವ ಶಾಸ್ತ್ರಗಳನ್ನೇ ಆಧಾರ ವಾಗಿ ನಂಬಿಕೊಂಡು ಹರಿಜನರು ಅಸ್ಪೃಶ್ಯರಲ್ಲವೆಂದು ಭಾವಿಸುವುದು ತಮ್ಮ ಕರ್ತವ್ಯವೆಂದೂ ನೀವು ಅವರಿಗೆ ಯಾವ ಹಕ್ಕುಬಾಧ್ಯತೆಗಳನ್ನು

ಕೊಟ್ಟು ಅವರು ಅವುಗಳನ್ನು ಪ್ರತ್ಯೇಕವಾಗಿ ಅನುಭವಿಸಬೇಕೆನ್ನುವಿರೊ ಆ ಅಧಿಕಾರಗಳನ್ನು ಅವರು ತಮ್ಮ ಜೊತೆಯಲ್ಲಿಯೇ ಅನುಭವಿಸಲೆಂದೂ ಹೇಳುವುದಾದರೆ ಅದಕ್ಕಾಗಿ ನೀವು ಇಷ್ಟು ಕಳವಳಪಡುವುದಾದರೂ ಏತಕ್ಕೆ? ನಿಮ್ಮ ಕರ್ತವ್ಯಸ್ವಾತಂತ್ರ್ಯವನ್ನು ನೀವು ಕಾಪಾಡಲಿಚ್ಛಿಸುತ್ತೀರಿ. ನಿಮ್ಮ ಮೇಲೆ ಬಲಾತ್ಕಾರಮಾಡುವರೆಂಬ ಭಾವನೆಯನ್ನು ನೀವು ನ್ಯಾಯವಾಗಿ ಸಿಟ್ಟಿನಿಂದ ಎದುರಿಸುತ್ತೀರಿ. ಅಂದ ಮೇಲೆ ಹರಿಜನರ ಸ್ಥಿತಿಯನ್ನು ಸುಧಾರಿಸಲು ನೀವು ಮಾಡಬೇಕೆನ್ನುವ ಕೆಲಸಗಳನ್ನು ನೀವು ಹೇಳಿದಂತೆಯೇ ಮಾಡಬೇಕೆಂದು ಸುಧಾರಕರನ್ನು ನೀವು ಬಲಾತ್ಕರಿಸಲಿಕ್ಕೆ ಇಚ್ಛಿಸಲಾರಿರಿ. ಹರಿಜನರ ಸ್ಥಿತಿಯನ್ನು ಸುಧಾರಿಸುವ ವಿಷಯದಲ್ಲಿ ಸುಧಾರಕರ ಹೇಳಿಕೆಗಳನ್ನು ನೀವು ಒಪ್ಪಿಕೊಳ್ಳುವುದರಿಂದ ಮಾತ್ರವಲ್ಲ ಈ ಬಗ್ಗೆ ಕಾರ್ಯರೂಪದಲ್ಲಿ ನೀವು ಇದುವರೆಗೆ ಏನೂ ಮಾಡಿದ್ದಿಲ್ಲವಾದುದರಿಂದ ನಾನು ಇದಕ್ಕೊಂದು ಉತ್ತಮ ದಾರಿಯನ್ನು ಸೂಚಿಸುತ್ತೇನೆ. ಸುಧಾರಕರು ಸಂಗ್ರಹಿಸುತ್ತಿರುವ ನಿಧಿಗೆ ಉದಾರ ಮನಸ್ಸಿನಿಂದ ಧನಸಹಾಯ ಮಾಡಿರಿ. ಹರಿಜನರ ಸ್ಥಿತಿಗಳನ್ನು ಸುಧಾರಿಸುವ ನಿಮ್ಮ ಮತ್ತು ಸುಧಾರಕರ ಸಮಾನ ಕಾರ್ಯಕ್ರಮಗಳನ್ನು ಜ್ಯಾರಿಗೆ ತರುವುದಕ್ಕೆ ಈ ಸುಧಾರಕರನ್ನು ನಿಮ್ಮ ಪ್ರತಿನಿಧಿಗಳನ್ನಾಗಿ ಉಪಯೋಗಿಸಿಕೊಳ್ಳಿರಿ. ಹಿಂದುಧರ್ಮದ ನಿಮ್ಮ ಅರ್ಥವನ್ನು ಸುಧಾರಕರು ಗೌರವಿಸಬೇಕೆಂದು ನೀವು ಭಾವಿಸುವಂತೆ ಅವರ ಅರ್ಥವನ್ನು ನೀವೂ ಗೌರವಿಸಿರಿ. ಇಷ್ಟರ ವರೆಗೆ ಸುಧಾರಕರು ಹರಿಜನರ ಒಡನಾಟವನ್ನು ಕಟ್ಟಿಕೊಂಡ ಬಗ್ಗೆ ನೀವು ಕಾರ್ಯರೂಪದಿಂದ ಆಕ್ಷೇಪವೆತ್ತಿದ್ದಿಲ್ಲ. ಅವರ ದಾರಿಯಲ್ಲಿ ಅವರಿಗೆ ಹೋಗಲಿಕ್ಕೆ ಬಿಟ್ಟಿದ್ದೀರಿ. ನೀವು ಅವರಿಗೆ ಬಹಿಷ್ಕಾರಹಾಕಿದ್ದಿಲ್ಲ. ಚಳವಳವು ಹೆಚ್ಚಿನ ಚಟುವಟಿಕೆಯನ್ನು ತಾಳಿ ಹೆಚ್ಚು ವಿಸ್ತಾರವಾಗಿ ಹಬ್ಬಿದೆಯೆಂಬ ಮಾತ್ರಕ್ಕೆ ಈಗ ನೀವು ಆ ಬಗೆಯ ವಿರೋಧವನ್ನು ಕಟ್ಟಿಕೊಳ್ಳುವುದರಲ್ಲಿ ಅರ್ಥವಿಲ್ಲ.

ಈಗ ಇರುವ ಸಾರ್ವಜನಿಕ ದೇವಸ್ಥಾನ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳು ಅಂದರೆ ಈಗ ಕೆಲವೆಡೆ ಕಾನೂನಿನ ಆಧಾರದಿಂದ ಹೆಚ್ಚಿನ ಕಡೆ ಕಾನೂನಿಗೆ ವಿರೋಧವಾಗಿ ಹರಿಜನರನ್ನು ಹೊರಗೆ

ಹಾಕಿರುವ ಸಾರ್ವಜನಿಕ ಸಂಸ್ಥೆಗಳು ಯಾರ ಸ್ವಾಧೀನವಾಗಬೇಕೆಂಬ ಪ್ರಶ್ನೆಯು ಉಳಿದಿರುವ ಒಂದೇ ತೊಂದರೆಯಾಗಿರುತ್ತದೆ. ಈ ತೊಂದರೆಯನ್ನು ನಿವಾರಿಸಲಿಕ್ಕೆ ಸುಲಭವಾದೊಂದು ದಾರಿ ಇರುತ್ತದೆ. ಎರಡೂ ಪಕ್ಷವವರು ಪರಸ್ಪರ ಕ್ರೋಧ ಮತ್ತು ಅಗೌರವ ಬುದ್ಧಿಯನ್ನು ಬಿಟ್ಟುಕೊಡುವುದಾದರೆ ಪ್ರತಿ ಗ್ರಾಮದಲ್ಲಿ ಅಥವಾ ಗ್ರಾಮಗಳ ಗುಂಪಿನಲ್ಲಿ ಪ್ರತಿ ಪಟ್ಟಣದಲ್ಲಿ ಅಥವಾ ಪಟ್ಟಣದ ವಿಭಾಗದಲ್ಲಿ ಹಿಂದುಗಳ ಅಭಿಪ್ರಾಯವನ್ನು ವೋಟುಗಳ ಮೂಲಕ ಸುಲಭದಿಂದ ನಿರ್ಧರಿಸಬಹುದು. ಯಾವ ಪಕ್ಷಕ್ಕೆ ಬಹುಮತ ಸಿಕ್ಕುತ್ತದೆಯೋ ಆ ಪಕ್ಷದವರ ಸ್ವಾಧೀನಕ್ಕೆ ಎಲ್ಲಾ ಸಾರ್ವಜನಿಕ ಸಂಸ್ಥೆಗಳನ್ನು ದೇವಸ್ಥಾನಗಳನ್ನು ಕೂಡಾ ಬಿಟ್ಟುಕೊಡಬೇಕು. ಸನಾತನ ಪಕ್ಷದವರಿಗೆ ಬಹುಮತ ಸಿಕ್ಕಿದರೆ ಇದೇ ಬಗೆಯ ಉಪಯೋಗವು ಸುಧಾರಕರಿಗೂ ಹರಿಜನರಿಗೂ ಸಿಕ್ಕುವಂತೆ ಸಂಸ್ಥೆಗಳನ್ನು ಸ್ಥಾಪಿಸಲು ಸುಧಾರಕರೊಡನೆ ಸನಾತನಿಗಳು ಖರ್ಚನ್ನು ಹಂಚಿಕೊಂಡು ತಮ್ಮ ಪಾಲನ್ನು ಕೊಡಬೇಕು. ಹರಿಜನರನ್ನೂ ಸುಧಾರಕರನ್ನೂ ನಾನು ಒಟ್ಟಿಗೆ ಹಾಕುತ್ತೇನೆ. ಏಕೆಂದರೆ ಸುಧಾರಕರು ತಮ್ಮ ವಿಶ್ವಾಸದಂತೆ ವರ್ತಿಸುತ್ತ ಹೋದರೆ ಸವರ್ಣಹಿಂದುಗಳೊಡನೆ ಸಮಾನತೆಯಿಂದ ಹರಿಜನರು ಅನುಭವಿಸಲಿಕ್ಕೆ ಬಾರದ ಯಾವ ಹಕ್ಕನ್ನೂ ತಾವು ಉಪಯೋಗಿಸದೆ ಬಿಟ್ಟುಕೊಡುವುದು ಸಮಯವು ಮುಂದರಿದಂತೆ ಅವರ ಕರ್ತವ್ಯವಾಗಿ ಪರಿಣಮಿಸುತ್ತದೆ. ಸನಾತನೀಯರು ಸಮಾನಸಂಸ್ಥೆಗಳನ್ನು ಸ್ಥಾಪಿಸಲು ತಗಲುವ ಪೂರ್ಣಖರ್ಚನ್ನು ತಾಳಿಕೊಳ್ಳುವುದು ಅವರ ಕರ್ತವ್ಯವಿರುತ್ತದೆ. ಏಕೆಂದರೆ ನನಗೆ ಬಂದಿರುವ ಪತ್ರಗಳ ಅಭಿಪ್ರಾಯದಂತೆ ನಾನು ಮೇಲೆ ವಿವರಿಸಿದಂತೆ ತಮ್ಮ ಸಂಸ್ಥೆಗಳಿಂದ ತಮಗೆ ಸಿಕ್ಕುವ ಲಾಭಗಳು ಇದುವರೆಗೆ ತಮಗೆ ಮಾತ್ರವಿದ್ದು ಹರಿಜನರಿಗೆ ದೊರಕಿಲ್ಲವೆಂದೂ ಅದೇ ತೆರನಾದ ಲಾಭಗಳು ಅವರಿಗೆ ಅಗತ್ಯವೆಂದೂ ಸನಾತನಪಕ್ಷದವರು ಒಪ್ಪಿಕೊಳ್ಳುತ್ತಾರೆ. ಸನಾತನಪಕ್ಷದವರು ಅವಸರದಿಂದ ಈಗಿನ ಚಳವಳದ ಕುರಿತು ತಮ್ಮ ಚಿತ್ರವನ್ನೇ ರಚಿಸಿ ಗಾಬರಿಪಡದಿರಲಿ. ನಿಜವಾಗಿ ಇಲ್ಲದ ಸಂಗತಿಗಳಿಗೆಲ್ಲ ಅಸ್ತಿತ್ವವನ್ನು ಕಲ್ಪಿಸದಿರಲಿ. ಯೆರವಾಡ ಒಪ್ಪಂದದಂತೆ ಹೂಡಿದ ಅಸ್ಪೃಶ್ಯತಾ

ನಿವಾರಣಾಚಳವಳದಲ್ಲಿ ಹಾಗೂ ಅಖಿಲಭಾರತ ಹರಿಜನಸೇವಾಸಂಘದ ಕಾರ್ಯಕ್ರಮದಲ್ಲಿ ನಾನು ಹೇಳಿರುವುದಕ್ಕಿಂತ ಹೆಚ್ಚಿನ ವಿಷಯಗಳಿಲ್ಲ. ಸಹಭೋಜನ ಮತ್ತು ವಿವಾಹದ ಪ್ರಶ್ನೆಗಳು ಈ ಕಾರ್ಯಕ್ರಮದಲ್ಲಿ ಸೇರಿಲ್ಲ. ಅನೇಕ ಹಿಂದುಗಳು ನಾನು ಕೂಡಾ ಈ ಕಾರ್ಯಕ್ರಮಕ್ಕಿಂತ ಮುಂದೆ ಹೋಗಲಿಚ್ಛಿಸುತ್ತೇವೆಂಬ ಮಾತ್ರದಿಂದ ಸನಾತನಿಗಳು ಯೋಚನೆಪಡಬೇಕಾಗಿಲ್ಲ. ಖಾಸಗಿ ಅಭಿಪ್ರಾಯ ಹಾಗೂ ಕಾರ್ಯಗಳ ಮಟ್ಟಿನ ವ್ಯಕ್ತಿಸ್ವಾತಂತ್ರ್ಯವನ್ನು ಬಲಾತ್ಕಾರದಿಂದ ಅಪಹರಿಸಲು ಅವರು ಬಯಸಲಿಕ್ಕಿಲ್ಲ. ಅವರ ನಂಬಿಕೆಗಳಲ್ಲಿ ಅವರಿಗೆ ಘನವಾದ ವಿಶ್ವಾಸವಿದ್ದರೆ ಮುಂದೆ ಏನೆಲ್ಲ ಬಂದೀತೆಂಬ ಬಗ್ಗೆ ಅವರು ಈಗ ಹೆದರಬೇಕಾದುದಿಲ್ಲ. ಒಂದು ವಿಶಿಷ್ಟ ಸುಧಾರಣೆಯು ಆಂತರಿಕ ಶಕ್ತಿಯುಳ್ಳದ್ದಾದರೆ ಮತ್ತೆ ಕಾಲದ ಆವಶ್ಯಕತೆಗಳಿಂದ ಜನ್ಮತಾಳಿರುವುದಾದರೆ ಎದುರಿಸಲಸಾಧ್ಯವಾದ ಅದರ ಪ್ರಗತಿಯನ್ನು ತಡೆಗಟ್ಟುವುದು ಜಗತ್ತಿನಲ್ಲಿ ಯಾವ ಶಕ್ತಿಗೂ ಸಾಧ್ಯವಿಲ್ಲ.

ಮೂರನೆಯ ಪ್ರಶ್ನೆಯು ಈ ರೀತಿ ಇರುತ್ತದೆ: 'ಸಾರ್ವಜನಿಕ ಲಕ್ಷ್ಯದ ಮೇಲೆ ನಿಮ್ಮ ಧಾರ್ಮಿಕ ಮತ್ತು ಸಾಮಾಜಿಕ ಪ್ರಶ್ನೆಗಳ ಅಭಿಪ್ರಾಯಗಳನ್ನು ಹೊರಿಸಿ ಅವನ್ನು ಸ್ವೀಕರಿಸಲು ಈ ಬಗೆಯ ರಭಸದ ಚಳವಳವನ್ನು ಒಮ್ಮೆಗೇನೇ ಮಹಾಜನರ ಮುಂದೆ ತರುವುದರಿಂದ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆಯನ್ನು ನೀವು ಹಿಂದೆ ಹಾಕಿದಂತೆ ಆಗುವುದಿಲ್ಲವೆ?' ನಾನು ಕೈದಿಯಾಗಿದ್ದು ಅಸ್ಪೃಶ್ಯತಾ ನಿವಾರಣೆಯ ಚಳವಳದ ಬಗ್ಗೆ ಒಪ್ಪಿಕೊಂಡಿರುವ ಶರ್ತಗಳನ್ನು ಮೀರದೆ ಈ ಪ್ರಶ್ನೆಗೆ ನಾನು ಸಂಪೂರ್ಣ ಉತ್ತರ ಕೊಡುವುದು ಸಾಧ್ಯವಿಲ್ಲ. ಆದರೂ ಇಷ್ಟನ್ನು ಹೇಳಬಲ್ಲೆನು: ನಾನು ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತೆ ಇತರ ಪ್ರಶ್ನೆಗಳು ಪ್ರತ್ಯೇಕ ಪ್ರತ್ಯೇಕ ಪ್ರಶ್ನೆಗಳೆಂದು ಅವನ್ನು ತೀರ ಭಿನ್ನವಾಗಿರಿಸುವ ಅಭ್ಯಾಸವಿಲ್ಲದಿರುವವನೆಂದು ನನ್ನ ಪರಿಚಯವುಳ್ಳವರಿಗೆಲ್ಲ ಗೊತ್ತೇ ಇದೆ. ಅವು ಒಂದರ ಮೇಲೆ ಒಂದು ಹೊಂದಿಕೊಂಡಿವೆಯೆಂದೂ ಒಂದರ ಸುಧಾರಣೆಯು ಇನ್ನೊಂದರ ಸುಧಾರಣೆಯನ್ನು ಹತ್ತಿರಕ್ಕೆ ತರುವುದೆಂದೂ ನಾನು ಯಾವಾಗಲೂ ಹೇಳುತ್ತ ಇದ್ದೇನೆ.

ಸಹಜವಾಗಿ ನನಗೆ ಈಗ ಇರಲಿಕ್ಕೆ ಸಾಧ್ಯವಿರುವ ಸಹಾಯದಿಂದ ಇತ್ಯರ್ಥಗೊಳಿಸಲಿಕ್ಕೆ ಕಷ್ಟಸಾಧ್ಯವಾಗುವಷ್ಟರ ಮಟ್ಟಿಗೆ ಬೆಳೆದಿರುವ ನನ್ನ ಪತ್ರವ್ಯವಹಾರದಲ್ಲಿ ನಾನು ಸಂಗ್ರಹಿಸಿರುವ ಪ್ರಶ್ನೆಗಳೇನೂ ಇಲ್ಲಿಗೆ ಮುಗಿಯುವುದಿಲ್ಲ. ಉಳಿದ ಪ್ರಶ್ನೆಗಳ ಕುರಿತು ನನ್ನ ಶಕ್ತಿಯಂತೆ ನಾನು ಇನ್ನೊಂದು ಲೇಖದಲ್ಲಿ ಬರೆಯುತ್ತೇನೆ. ಈ ಸಂದರ್ಭದಲ್ಲಿ ನನಗೆ ಪತ್ರ ಬರೆಯುವವರು ಸ್ವಲ್ಪ ಕರುಣೆತೋರಿಸಬೇಕಾಗಿ ಪ್ರಾರ್ಥಿಸುತ್ತೇನೆ. ಇದುವರೆಗೆ ಪ್ರಾಯಶಃ ಪ್ರತಿಪತ್ರಕ್ಕೆ ಉತ್ತರ ಕಳುಹಿಸಿದ್ದೇನೆ. ಇನ್ನು ಮುಂದೆ ಪ್ರತ್ಯೇಕ ಉತ್ತರಗಳನ್ನು ಬಯಸದೆ ನನ್ನ ಈ ಲೇಖಾಂಕಗಳಲ್ಲಿ ನಾನು ಕೊಡುತ್ತಿರುವ ಉತ್ತರಗಳಿಂದ ಅವರು ತೃಪ್ತರಾಗಬೇಕು. ಚಳವಳದ ಸಂಬಂಧ ಕಾರ್ಯಗಳ ಕುರಿತು ಇತ್ಯರ್ಥಮಾಡುವ ಮೊದಲು ನನ್ನ ಅಭಿಪ್ರಾಯವು ಆಗತ್ಯವಾದಲ್ಲಿ ಇಲ್ಲವೆ ವಿಶೇಷ ಅಭಿಪ್ರಾಯಗಳನ್ನು ಹೇಳಲಿಕ್ಕಿದ್ದಲ್ಲಿ ಮಾತ್ರ ಆದಷ್ಟು ಸಂಕ್ಷೇಪವಾಗಿ ಬರೆದರೆ ಸ್ವತಃ ಹಾಗೆಯೇ ನನಗೂ ಲೇಖಕರು ಉಪಕಾರಮಾಡಿದಂತಾಗುವುದು.

ಲೇಖಾಂಕ ೮.

ಹಲವು ಪತ್ರಗಳಲ್ಲಿರುವ ಪ್ರಶ್ನೆಯೊಂದು ಈ ರೀತಿ ಇರುತ್ತದೆ: 'ನೀವು ಶಾಸ್ತ್ರಗಳನ್ನು ನಂಬುವುದಾಗಿ ಹೇಳುತ್ತೀರಿ. ಶಾಸ್ತ್ರಗಳ ನಿಮ್ಮ ಅಭಿಪ್ರಾಯವು ನಮಗೆ ಅರ್ಥವಾಗುವುದಿಲ್ಲ. ಶಾಸ್ತ್ರಗಳು ಸಮರ್ಥಿಸುವ ಹಲವು ವಿಷಯಗಳನ್ನು ನೀವು ವಿಚಾರವಿಲ್ಲದೆ ತಿರಸ್ಕರಿಸುತ್ತೀರಿ. ನಿಮ್ಮ ವಿಶ್ವಾಸಕ್ಕೆ ಪಾತ್ರವೆಂದು ನೀವು ಹೇಳುವ ಗೀತೆಯು ಕೂಡ ಶಾಸ್ತ್ರಗಳನ್ನು ಅನುಸರಿಸಬೇಕೆಂದು ವಿಧಿಸುತ್ತದೆ.'

ಗೀತೆಯ ಮುಖ್ಯ ವಿಷಯಕ್ಕೆ ವಿರುದ್ಧವಿರುವ ಸಂಗತಿಗಳು ಯಾವ ಅಚ್ಚು ಹಾಕಿದ ಪುಸ್ತಕದಲ್ಲಿ ಸಿಕ್ಕಿದರೂ ನನ್ನ ಮಟ್ಟಿಗೆ ಅದು ಶಾಸ್ತ್ರವಾಗಲಾರದೆಂದು ಹಿಂದೆ ಒಂದು ಲೇಖಾಂಕದಲ್ಲಿ ಬರೆದ ವಿಚಾರವನ್ನು ಪುನಃ

ಬರೆಯುತ್ತೇನೆ. ನನ್ನ ಸಂಪ್ರದಾಯವಾದೀ ಸ್ನೇಹಿತರು ತಾಳಿಕೊಳ್ಳಲು ಸಮರ್ಥರಾದರೆ ನನ್ನ ಅಭಿಪ್ರಾಯವನ್ನು ಇನ್ನಷ್ಟು ಸ್ಪಷ್ಟಗೊಳಿಸ ಲಿಚ್ಛಿಸುತ್ತೇನೆ. ಸಾರ್ವಜನಿಕವಾಗಿ ಸ್ವೀಕರಿಸಲ್ಪಡುವ ನೀತಿಶಾಸ್ತ್ರದ ಪ್ರಾಥಮಿಕ ತತ್ವಗಳಿಗೆ ಸರಿಬೀಳದ ವಿಷಯಗಳಿಗೆ ನನ್ನ ದೃಷ್ಟಿಯಲ್ಲಿ ಶಾಸ್ತ್ರಗಳ ಅಧಿಕಾರವು ಎಂದಿಗೂ ದೊರೆಯಲಾರದು. ಈ ಪ್ರಾಥಮಿಕ ತತ್ವಗಳಿಗೆ ವಿರುದ್ಧ ವಿಷಯಗಳನ್ನು ಸಮರ್ಥಿಸಲಿಕ್ಕೆ ಶಾಸ್ತ್ರಗಳು ರಚಿಸಲ್ಪಟ್ಟಿಲ್ಲ. ಆ ತತ್ವಗಳನ್ನು ಸಮರ್ಥಿಸುವುದೇ ಶಾಸ್ತ್ರಗಳ ಉದ್ದೇಶವು. ಆ ಪ್ರಾಥಮಿಕ ತತ್ವಗಳಿಗೆ ಗೀತೆಯು ಸರಿಹೊಂದುತ್ತದೆ ಮಾತ್ರವಲ್ಲ ಅವನ್ನು ಎಷ್ಟು ಮಾತ್ರಕ್ಕೂ ಮೀರದೆ ಆಚರಿಸಬೇಕೆಂಬುದಕ್ಕೆ ಗೀತೆಯು ಖಂಡಿತವಾದ ಕಾರಣಗಳನ್ನು ಕೊಡುತ್ತದೆ. ಆದುದರಿಂದಲೇ ನನಗೆ ಗೀತೆಯೊಂದೇ ಸಾಕಾಗಿದೆ. ನಾನು ಸೂಚಿಸಿರುವ ಈ ಸುವರ್ಣ ನಿಯಮವಲ್ಲದಿದ್ದರೆ ಪಂಡಿತನಲ್ಲದ ನನ್ನಂಥ ಸಾಮಾನ್ಯ ಮನುಷ್ಯನು ಪರಸ್ಪರ ವಿರೋಧ ಪಕ್ಷಗಳ ಪಂಡಿತರು ದೈವೀಕ ಅಧಿಕಾರದ ಗ್ರಂಥಗಳೆಂದು ಹೇಳುವ—ಅಂದವಾಗಿ ಅಚ್ಚು ಹಾಕಿ ಅಷ್ಟೇ ಅಂದವಾಗಿ ರಕ್ಷಾಪತ್ರಬದ್ಧವಾಗಿರುವ—ಸಂಸ್ಕೃತ ಗ್ರಂಥರಾಶಿಯ ಹಾಗೂ ಪರಸ್ಪರ ವಿರೋಧ ಶ್ಲೋಕಗಳ ಕಾಡಿನ ಮಧ್ಯದಲ್ಲಿ ದಾರಿ ತಪ್ಪಿ ತೊಳಲಬೇಕಾಗುವುದು.

ಸ್ವಲ್ಪ ಮಾತ್ರ ವಿಸ್ತೀರ್ಣವುಳ್ಳ ಸ್ಥಳಗಳಲ್ಲಿ ಕೆಲವು ನೂರು ಜನರಿಂದ ಪೂಜ್ಯವಾಗಿ ಭಾವಿಸಲ್ಪಟ್ಟು, ಆ ಸ್ಥಳಗಳ ಹೊರಗೆ ಯಾರಿಗೂ ಗೊತ್ತೇ ಇಲ್ಲದಂಥ ಹಲವು ಸ್ಮೃತಿಗಳಿರುತ್ತವೆ. ಅವುಗಳ ಮೂಲ ಹಾಗೂ ಅವನ್ನು ರಚಿಸಿದ ಕಾಲ ಇವುಗಳನ್ನು ಹೇಳಲು ಯಾರೂ ಸಮರ್ಥರಿಲ್ಲ. ನಾನು ದಕ್ಷಿಣ ಭಾರತಕ್ಕೆ ಹೋದಾಗ ಇಂಥ ಒಂದು ಗ್ರಂಥವನ್ನು ನೋಡಿದೆನು. ವಿದ್ವಾಂಸರಾದ ನನ್ನ ಪಂಡಿತ ಸ್ನೇಹಿತರೊಡನೆ ಈ ಗ್ರಂಥದ ವಿಚಾರವನ್ನು ಕೇಳಲು ಅವರಿಗೆ ಅದರ ಪರಿಚಯವೇ ಇಲ್ಲವೆಂದರು. ಪರೀಕ್ಷೆ ಮಾಡಿ ನೋಡಿದರೆ ಪರಸ್ಪರವಿರುದ್ಧವಿರುವ ಮಾತ್ರವಲ್ಲ ಅವು ಸ್ವೀಕರಿಸಲ್ಪಡುವ ಚಿಕ್ಕ ಸ್ಥಳಗಳ ಹೊರಗೆ ಮನ್ನಿಸಲ್ಪಡದ ಎಷ್ಟೋ ಆಗಮಗಳಿರುತ್ತವೆ. ಈ ಎಲ್ಲ ಪುಸ್ತಕಗಳ

ಅಧಿಕಾರವನ್ನು ಹಿಂದೂಸಮಾಜವು ಒಪ್ಪಿಕೊಳ್ಳಬೇಕೆಂದಾದರೆ ಯಾವ ದುರಾಚಾರಕ್ಕಾದರೂ ಶಾಸ್ತ್ರದ ಆಧಾರವನ್ನು ತೋರಿಸಿಕೊಡುವುದು ಕಷ್ಟವಾಗಲಿಕ್ಕಿಲ್ಲ. ಬಹಳ ಪುರಾತನ ಗ್ರಂಥಗಳಲ್ಲಿ ಕೂಡ ಸಂಶಯಾಸ್ಪದ ಪ್ರಕ್ಷಿಪ್ತ ಶ್ಲೋಕಗಳನ್ನು ತೆಗೆದುಹಾಕುವುದಿಲ್ಲವಾದರೆ ಆ ಗ್ರಂಥದಲ್ಲಿ ಸಾರ್ವತ್ರಿಕವಾಗಿ ಸಾರಲ್ಪಡುವ ಅತ್ಯುನ್ನತ ನೈತಿಕ ಶಿಕ್ಷಣಕ್ಕೆ ವಿರುದ್ಧವಾದ ಎಷ್ಟೋ ಶ್ಲೋಕಗಳು ಸಿಕ್ಕುತ್ತವೆ. ಆದುದರಿಂದ ಗೀತೆಯಲ್ಲಿ ಒಂದೇ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುವ ಆ ಶಾಸ್ತ್ರವೆಂಬ ಶಬ್ದಕ್ಕೆ ನಾನು ಕೊಟ್ಟ ಅರ್ಥವು ಈ ರೀತಿ ಇರುತ್ತದೆ: ಶಾಸ್ತ್ರವೆಂದರೆ ಯಾವದಾದರೊಂದು ಪುಸ್ತಕವಲ್ಲ ಅಥವಾ ಸ್ವತಃ ಗೀತೆಯಲ್ಲಿಯೇ ಇರುವ ಕೆಲವು ನಿಯಮಗಳ ಸಮೂಹವಲ್ಲ. ಜೀವಂತ ಅಧಿಕಾರಿಯಾಗಿ ರೂಪುಗೊಂಡ ಶಿಷ್ಟಾಚಾರಕ್ಕೇನೇ ಶಾಸ್ತ್ರವೆಂದು ನಾನು ಕರೆಯುತ್ತೇನೆ. ವಿಮರ್ಶಕರಿಗೆ ಇದರಿಂದ ತೃಪ್ತಿಯಾಗಲಾರದೆಂದು ನನಗೆ ಗೊತ್ತಿದೆ. ಪಂಡಿತನಲ್ಲದ ನಾನು ಯಾರಿಗೂ ಈ ವಿಷಯದಲ್ಲಿ ಮುಂದಾಳಾಗಿ ದಾರಿ ತೋರಿಸಲಾರೆನು. ಆದರೆ ಶಾಸ್ತ್ರವೆಂದರೆ ನಾನು ಕೊಡುವ ಅರ್ಥವನ್ನು ಸರಿಯಾಗಿ ಹೇಳುವುದರಿಂದ ನನ್ನ ವಿಮರ್ಶಕರ ಕುತೂಹಲವನ್ನು ತೃಪ್ತಿಪಡಿಸಲಿಕ್ಕೆ ಸಾಧ್ಯವಿದೆ.

ಅದೇ ರೀತಿ ಹಲವು ಬಾರಿ ಕೇಳಲ್ಪಡುವ ಇನ್ನೊಂದು ಪ್ರಶ್ನೆಯು ಈ ರೀತಿ ಇರುತ್ತದೆ: 'ನೀವು ದೈವೀಕ ಪ್ರೇರಣೆಯೆಂದೂ ಅಥವಾ ಅಂತರಾತ್ಮನ ಧ್ವನಿಯೆಂದೂ ಹೇಳುವುದರ ಅಭಿಪ್ರಾಯವೇನು? ಇದೇ ರೀತಿ ಪ್ರತಿಯೊಬ್ಬನೂ ತನಗೂ ಪ್ರೇರಣೆಯಾಗಿದೆಯೆಂದು ಹೇಳಿ ತನ್ನ ನೆರೆಯವರಿಲ್ಲರಿಂದ ಭಿನ್ನವಾಗಿ ವರ್ತಿಸುತ್ತ ಹೋಗುವುದಾದರೆ ನಿಮ್ಮ ಹಾಗೂ ಜಗತ್ತಿನ ಗತಿ ಏನಾದೀತು?' ಇದೊಂದು ನ್ಯಾಯವಾದ ಪ್ರಶ್ನೆಯೇ ಇರುತ್ತದೆ. ದೈವೀಕಶಕ್ತಿಯು ತನ್ನ ರಕ್ಷಣೆಗಾಗಿ ಬೇಕಾದ ಭದ್ರತೆಗಳನ್ನು ಮಾಡಿಟ್ಟುಕೊಂಡಿಲ್ಲವಾದರೆ ನಾವು ಚಲೋ ಅವಸ್ಥೆಗೆ ಬರಬೇಕಾಗುತ್ತಿತ್ತು. ಆದರೆ ದೈವಿಕ ಪ್ರೇರಣೆಯ ಹಕ್ಕನ್ನು ಪ್ರತಿಯೊಬ್ಬರು ಹೇಳಿಕೊಳ್ಳಬಹುದಾದರೂ ಅದನ್ನು ಕೆಲವರು ಮಾತ್ರವೇ ಸಮರ್ಥಿಸಬಲ್ಲರು. ದೈವೀಕ ಪ್ರೇರಣೆ ಅಥವಾ ಅಂತರ್ಧ್ವನಿಯು

ಪ್ರೇರಣೆ ಇಲ್ಲದೇನೇ ಉಂಟೆಂದು ಅಸತ್ಯವಾಗಿ ಅಧಿಕಾರವನ್ನು ತೋರಿಸಲಿಕ್ಕೆ ಹೋಗುವವನ ಗತಿಯು ಇಹಲೋಕದ ರಾಜನ ಸರಕಾರದ ಅಧಿಕಾರದಿಂದ ಕೆಲಸಮಾಡುತ್ತೇನೆಂದು ಸುಳ್ಳಾಗಿ ನಟಿಸುವವನ ಅವಸ್ಥೆಗಿಂತಲೂ ಹೀನವಾಗುವುದು. ಎರಡನೆಯವನ ನಟನೆಯು ಕಂಡು ಹಿಡಿಯಲ್ಪಟ್ಟಾಗ ದೇಹದಂಡನೆಗೆ ಪಾತ್ರನಾಗಿ ತಪ್ಪಿಸಿಕೊಳ್ಳಬಹುದಾದರೆ ಮೊದಲನೆಯವನು ಆತ್ಮ ಮತ್ತು ದೇಹ ಇವೆರಡಕ್ಕೂ ನಷ್ಟವನ್ನು ತಂದು ಕೊಳ್ಳುವನು.

ನನ್ನಲ್ಲಿ ದಯೆಯುಳ್ಳ ವಿಮರ್ಶಕರು ನನ್ನಲ್ಲಿ ಮೋಸವಿದೆಯೆನ್ನುವುದಿಲ್ಲ. ಆದರೆ ನಾನು ಒಂದು ಭ್ರಾಂತಿಗೆ ವಶನಾಗಿ ಕೆಲಸಮಾಡುತ್ತಿದ್ದೇನೆಂದು ಬಲು ಮಟ್ಟಿಗೆ ತೋರುವುದಾಗಿ ಸೂಚಿಸುತ್ತಾರೆ. ಅಂದರೆ ನಾನು ತಕ್ಕ ಹಕ್ಕನ್ನು ಹೇಳಿಕೊಂಡರೆ ಸಿಕ್ಕುವ ಫಲಕ್ಕಿಂತ ವಿಶೇಷ ಭಿನ್ನವಲ್ಲದ ಫಲವೇ ನನಗೆ ಇದರಿಂದಲೂ ಸಿಕ್ಕಬೇಕು. ನಾನೇ ಹೇಳಿಕೊಳ್ಳುವಂತೆ ನನ್ನಂಥ ಸತ್ಯಶೋಧಕನು ಅತ್ಯಂತ ಜಾಗರೂಕನಾಗಿರಬೇಕಾಗುತ್ತದೆ ಮಾತ್ರವಲ್ಲ ಚಿತ್ತದ ಸ್ಥೈರ್ಯವನ್ನು ಕಾಪಾಡಿಕೊಳ್ಳುವುದು ಅಗತ್ಯವಾಗುತ್ತದೆ. ದೇವರ ಪ್ರೇರಣೆಗೆ ಅವನು ಪಾತ್ರನಾಗಬೇಕಾದರೆ ಮೊದಲು ತಾನು ಶೂನ್ಯಾವಸ್ಥೆಯನ್ನು ತಾಳಿಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ಇಲ್ಲಿ ವಿವರಿಸಬೇಕಾಗಿಲ್ಲ. ನಾನು ಹೇಳಿಕೊಳ್ಳುವಂಥ ಹಕ್ಕು ಅಷ್ಟು ವಿಶೇಷವೆಂದಾಗಲಿ ನನಗೊಬ್ಬನಿಗೆ ಮಾತ್ರವೇ ಇರುವುದೆಂದಾಗಲಿ ಹೇಳಲಾಗದು. ಏನನ್ನೂ ಇಟ್ಟುಕೊಳ್ಳದೆ ಯಾರು ಸಂಪೂರ್ಣವಾಗಿ ತನ್ನನ್ನು ದೇವರಿಗೆ ಅರ್ಪಿಸಿಕೊಳ್ಳುತ್ತಾರೊ ಅಂತಹ ಎಲ್ಲರ ಜೀವನವನ್ನೂ ಆತನೇ ತನ್ನಿಚ್ಛೆಯಂತೆ ನಡೆಸುತ್ತಾನೆ. ಗೀತೆಯ ಭಾಷೆಯಲ್ಲಿ ಹೇಳುವುದಾದರೆ ಯಾರು ಸಂಪೂರ್ಣ ಅನಾಸಕ್ತಿಯನ್ನು ಸಾಧಿಸಿರುವರೊ ಅಂದರೆ ಯಾರು ಅಹಂಭಾವವನ್ನು ಸಂಪೂರ್ಣ ತ್ಯಜಿಸುತ್ತಾರೊ ಅಂತಹವರ ಮೂಲಕ ದೇವರು ತನ್ನ ಕೆಲಸಗಳನ್ನು ಮಾಡಿಸುತ್ತಾನೆ. ಇಲ್ಲಿ ಭ್ರಾಂತಿಯ ಪ್ರಶ್ನೆ ಇಲ್ಲ. ನಾನು ಸರಳವಾದ ಒಂದು ಸತ್ಯ ಸಂಗತಿಯನ್ನು ಮಾತ್ರ ಹೇಳಿರುವೆನು. ಅಗತ್ಯವಿರುವ ಗುಣಗಳನ್ನು ಸಂಪಾದಿಸಲು ಇಚ್ಛೆ ಹಾಗೂ ತಾಳ್ಮೆಯುಳ್ಳವರೆಲ್ಲರೂ

ಈ ಸತ್ಯವನ್ನು ಶೋಧಿಸಿ ಪರೀಕ್ಷಿಸಲು ಸಾಧ್ಯವುಂಟು. ಈ ಅವಶ್ಯ ಗುಣಗಳನ್ನಾದರೂ ದೃಢನಿಶ್ಚಯವುಳ್ಳವರು ಸುಲಭವಾಗಿ ತಿಳಿದುಕೊಳ್ಳಬಹುದು. ಸುಲಭವಾಗಿ ಸಾಧಿಸಬಹುದು.

ಕೊನೆಗೆ ನಾನು ಹೇಳಿಕೊಳ್ಳುವ ಹಕ್ಕಿಗಾಗಿ ಯಾರೂ ಯೋಚನೆ ಪಡಬೇಕಾದುದಿಲ್ಲ. ಯಾಕೆಂದರೆ ಜನರು ಮಾಡಬೇಕಾಗಿ ನಾನು ಕೇಳಿಕೊಳ್ಳುವ ವಿಷಯವು ಬುದ್ಧಿಶಕ್ತಿಯನ್ನುಪಯೋಗಿಸಿ ಪರೀಕ್ಷಿಸಲಿಕ್ಕೆ ಬರುವಂಥ ವಿಷಯವಿರುತ್ತದೆ. ಈ ದೃಶ್ಯದಿಂದ ನಾನು ಮಾಯವಾದಾಗ ಅಸ್ಪೃಶ್ಯತೆಯನ್ನು ಹೋಗಲಾಡಿಸಲೇ ಬೇಕಾಗುವುದು. ನನ್ನ ಉಪವಾಸಕ್ಕೆ ದೈವೀಕಪ್ರೇರಣೆ ಇದೆಯೋ ಇಲ್ಲವೋ ಎಂಬುದು ನನ್ನ ಅತ್ಯಂತ ಜೊತೆಗಾರನು ಕೂಡ ಯೋಚನೆಗೀಡಾಗಬೇಕಾದ ವಿಷಯವಲ್ಲ. ಅವರು ನನ್ನ ಮೇಲೆ ಇರುವ ಪ್ರೇಮದಿಂದ ಇಮ್ಮಡಿ ಉತ್ಸಾಹದಿಂದ ಕಾರ್ಯವನ್ನು ಸಾಧಿಸಲಿಕ್ಕೆ ಕೆಲಸಮಾಡಬಹುದು. ನನ್ನ ಉಪವಾಸವು ಸ್ವೇಚ್ಛಾಚಾರಿ ಸ್ನೇಹಿತನೊಬ್ಬನ ಹುಚ್ಚುಕೆಲಸವೆಂದು ತಿಳಿದುಬಂದರೂ ಇವರ ಕಾರ್ಯದಿಂದ ಯಾವ ಅಪಾಯವೂ ಆಗುವಂತಿಲ್ಲ. ಯಾರಿಗೆ ನನ್ನ ಮೇಲೆ ಪ್ರೇಮವಾಗಲಿ ನನ್ನಲ್ಲಿ ವಿಶ್ವಾಸವಾಗಲಿ ಇಲ್ಲವೋ ಅವರ ಮೇಲೆ ನನ್ನ ಉಪವಾಸದಿಂದ ಯಾವ ಪರಿಣಾಮವೂ ಆಗುವಂತಿಲ್ಲ. ಆದುದರಿಂದ ನಾನು ಯೋಚಿಸುತ್ತಿರುವ ಉಪವಾಸ ಹಾಗೂ ಅದಕ್ಕೆ ನಾನು ಹೇಳಿಕೊಳ್ಳುವ ಅಧಿಕಾರ ಇವನ್ನೇ ಕುರಿತು ಯಾವಾಗಲೂ ಚರ್ಚಿಸುತ್ತ ಇರುವುದರಿಂದ ಸಾರ್ವಜನಿಕ ಮನಸ್ಸನ್ನು ಮಂಕುಗೊಳಿಸಿ ಜನಾಂಗದ ಮುಂದಿರುವ ಮಹತ್ಕಾರ್ಯದಿಂದ ಸಾರ್ವಜನಿಕ ಲಕ್ಷ್ಯವನ್ನು ತಿರುಗಿಸುವಂತಾಗುತ್ತದೆ. ಆದುದರಿಂದ ಈ ಲೇಖಾಂಕವನ್ನು ಅಂತ್ಯಗೊಳಿಸುವಾಗ ನನ್ನ ಹತ್ತಿರ ಇರುವ ವಿಸ್ತಾರ ಪತ್ರವ್ಯವಹಾರದಿಂದ ಹೆಕ್ಕಿತೆಗೆದ ಕೆಲವು ಚಿತ್ರಗಳನ್ನು ವಾಚಕರ ಲಕ್ಷ್ಯಕ್ಕೆ ತರಲಿಚ್ಛಿಸುತ್ತೇನೆ.

ಬೊಂಬಾಯಿಯ ಒಂದು ಭಾಗವಿದ್ದು ಶ್ರೀಮಂತ ಹಿಂದುಗಳು ವಾಸಿಸುವ ವಿಲ್ಲೆಪಾರ್ಲೆಯಲ್ಲಿಯ ಒಂದು ಚಿತ್ರವು ಇಲ್ಲಿದೆ. ಈ ವಿಭಾಗದಲ್ಲಿ ಸುಮಾರು 1700 ಮನೆಗಳಿವೆ. ಇಲ್ಲಿಯ ಮ್ಯುನಿಸಿ

ಪಾಲಿಟಿಗೆ 70,000 ರೂ. ಉತ್ಪನ್ನವಿರುತ್ತದೆ. ಈ ಪೈಕಿ 31,000 ರೂ. ಪಾಯಖಾನೆಸ್ವಚ್ಛತೆಯ ಇಲಾಖೆಗೆ ಖರ್ಚುಮಾಡಲ್ಪಡುತ್ತದೆ. ಇಲ್ಲಿಯ ತೋಟಿಗಳು ವಾಸಿಸುವಲ್ಲಿ ರಸ್ತೆಗಳಿಲ್ಲ, ನೀರಿನ ಆಶ್ರಯವಿಲ್ಲ ಮತ್ತು ಆರೋಗ್ಯದ ಯಾವ ಸೌಕರ್ಯಗಳೂ ಇಲ್ಲ. ಇಲ್ಲಿಯ ಭೂಮಿಯು ತಗ್ಗು ಪ್ರದೇಶವಿರುತ್ತದೆ. ಒಮ್ಮೆ ಪಾಯಖಾನೆಕೆಲಸಗಳಿಗೆ ಉಪಯೋಗಿಸಲ್ಪಟ್ಟು ಹಾಳಾಗಿರುವ ಟಿನ್ನಿನ ತಗಡುಗಳಿಂದ ಮಾಡಿದ ಗುಡಿಸಲು ಇವರಿಗೆ ವಾಸಸ್ಥಾನ. ಅಲ್ಲಿ ದೀಪಗಳನ್ನಿಡುವುದಿಲ್ಲ. ಹತ್ತಿರದಲ್ಲೆ ಊರಿನ ಕೊಳೆಯನ್ನು ದಾಸ್ತಾನುಮಾಡುವ ಸ್ಥಳವಿದ್ದು ಸದಾಕಾಲವೂ ಕೆಟ್ಟ ವಾಸನೆಯು ನಾರುತ್ತದೆ. ಅದರ ಹತ್ತಿರದಲ್ಲೆ ಪಾಯಖಾನೆ ಕೆಲಸದ ಮೋಟರ್ ಲಾರಿಗಳನ್ನು ನಿಲ್ಲಿಸುವ ಒಂದು ಕಟ್ಟಡವಿದೆ. ಇದಕ್ಕೆ ಒಂದು ನೀರಿನ ನಳ್ಳಿ ಇದ್ದು ಪಾಯಖಾನೆಯ ಟಿನ್ನುಗಳನ್ನು ತೊಳೆಯುವುದಕ್ಕೆ ಉಪಯೋಗಿಸಲ್ಪಡುತ್ತಿದೆ. ಅಲ್ಲಿ ಒವರ್ಸಿಯರನು ಒಳ್ಳೆಯ ಮನಸ್ಸಿನಲ್ಲಿದ್ದರೆ ತೋಟಿಗಳಿಗೆ ಈ ನಳ್ಳಿಯಿಂದ ನೀರು ಉಪಯೋಗಿಸಿಕೊಳ್ಳಲಿಕ್ಕೆ ಬಿಡುತ್ತಾನೆ. ಇನ್ನೊಂದು ಬದಿಯಲ್ಲಿ ಗೃಹಸ್ಥರ ಪಾಯಖಾನೆಗಳಿಂದ ಬಾಲ್ದಿಗಳನ್ನು ತರುವ ಗಾಡಿಗಳ ಸಾಲು ಇರುತ್ತದೆ. ಇಂಥ ಪ್ರದೇಶದಲ್ಲಿ ಈ ತೋಟಿಗಳು ಜೀವಿಸಬೇಕು. ಈ ಪ್ರದೇಶದ ಸುತ್ತಲೂ ಗದ್ದೆಗಳಿವೆ. ಅವುಗಳು ಹೆಚ್ಚಿನ ಸಮಯ ನೀರಿನಿಂದ ತುಂಬಿದ್ದು ನುಸಿಗಳನ್ನು ಹುಟ್ಟಿಸುವುದು ಮಾತ್ರವಲ್ಲ, ಚೇಳು ಹಾವುಗಳು, ಗದ್ದೆಇಲಿಗಳು ತುಂಬಿಕೊಳ್ಳುವಂತಾಗುತ್ತದೆ. ಮೂವತ್ತೊಂದು ಕುಟುಂಬಗಳು ಈ ಸ್ಥಿತಿಯಲ್ಲಿ ವಾಸಿಸುತ್ತಿವೆ. ಈ ಕುಟುಂಬಗಳಲ್ಲಿ ಮೂವತ್ತೈದು ಗಂಡಸರು, ಇಪ್ಪತ್ತೈದು ಹೆಂಗಸರು, ಮೂವತ್ತನಾಲ್ಕು ಹುಡುಗರು ಮತ್ತು ಹದಿನೈದು ಹುಡುಗಿಯರಿದ್ದಾರೆ. ಒಟ್ಟಿಗೆ ಈ ನೂರ ಒಂಭತ್ತು ಮಂದಿ ಜನಸಂಖ್ಯೆಯಲ್ಲಿ ಒಂಭತ್ತು ಹುಡುಗರಿಗೆ ಮಾತ್ರ ಕಷ್ಟದಿಂದ ಓದಲಿಕ್ಕೆ ಮತ್ತು ಬರೆಯಲಿಕ್ಕೆ ತಿಳಿಯುತ್ತದೆ. ಉಳಿದವರಿಗೆ ಏನೂ ಅಕ್ಷರಜ್ಞಾನವಿಲ್ಲ.

ವಿಲ್ಲೆಪಾರ್ಲೆಯ ನಿವಾಸಿಗಳು ತಮ್ಮ ಈ ಬಂಧುಗಳ ಕುರಿತು ಸ್ವಲ್ಪವಾದರೂ ಯೋಚಿಸಿದರೆ ಅವರಿಗೆ ಒಳ್ಳೆಯ ವಾಸಸ್ಥಾನಗಳು,

ನೀರು, ದೀಪಗಳು ಮೊದಲಾದ ಪಟ್ಟಣ ಜೀವನದ ಎಲ್ಲಾ ಸೌಕರ್ಯ ಗಳನ್ನು ಒದಗಿಸಿಕೊಡಲು ಇವರಿಗೆ ಸಾಧ್ಯವುಂಟು. ಇಲ್ಲಿ ಸನಾತನಿ ಗಳಿಗೂ ಸುಧಾರಕರಿಗೂ ಬೇಕಷ್ಟು ಕೆಲಸವುಂಟು. ಮುನಿಸಿಪಾಲಿಟಿಗೆ 70,000 ರೂಪಾಯಿ ಮಾತ್ರ ಉತ್ಪನ್ನವಿದ್ದು ಮುಖ್ಯ ಅಂಶ ಅಂದರೆ ರೂಪಾಯಿ 31,000ವನ್ನು ಪಾಯಖಾನೆ ಸ್ವಚ್ಛತೆಯ ಇಲಾಖೆಗೆ ಖರ್ಚು ಮಾಡಲಾಗುತ್ತದೆಂಬುದು ನನ್ನ ಪ್ರಶ್ನೆಗೆ ಉತ್ತರವಾಗಲಾರದು. ಸಮಾಜದ ಈ ಉಪಯುಕ್ತ ಸೇವಕ ವರ್ಗಕ್ಕಾಗಿಯೇ ಬೇಕಿದ್ದರೆ ಹೆಚ್ಚಿನ ತೆರಿಗೆ ಹೊರಿಸಿಕೊಳ್ಳುವಷ್ಟು ಇಲ್ಲಿಯ ನಿವಾಸಿಕರು ಶ್ರೀಮಂತ ರಿದ್ದಾರೆಂದು ನನಗೆ ಗೊತ್ತಿದೆ. ಆದರೆ ಅದು ಬಹಳ ಸಾವಕಾಶದ ದಾರಿ. ಅಲ್ಲಿಯ ಹಿಂದು ನಿವಾಸಿಕರು ಸಾಕಷ್ಟು ಧನವನ್ನು ಸಂಗ್ರಹಿಸಿ ಇವರಿಗೆ ಯೋಗ್ಯ ವಾಸಸ್ಥಾನ ಹಾಗೂ ಇತರ ಸೌಕರ್ಯಗಳನ್ನು ಒದಗಿಸಿಕೊಡು ವುದು ತಮ್ಮ ಆದ್ಯಕರ್ತವ್ಯವಾಗಿ ತಿಳಿಯಬೇಕು. ಇಷ್ಟು ಮಾಡಿದ ಮೇಲೆ ಈ ತೋಟಿಗಳು ಮುಂದೆ ಸರಿಯಾಗಿ ಜೀವಿಸುವಂತೆ ಮಾಡಲು ಬೇಕಾಗುವ ವರ್ಷಾವಧಿ ಖರ್ಚನ್ನು ತಾಳಿಕೊಳ್ಳುವರೆ ಮುನಿಸಿಪಾಲಿ ಟಿಗೆ ಆಗ ಕೇಳಿಕೊಂಡರೆ ಅದಕ್ಕೆ ಅರ್ಥವುಂಟು.

ಅಖಿಲಭಾರತ ಹರಿಜನ ಸೇವಾಸಂಘದ ಅವಿಶ್ರಾಂತ ಕಾರ್ಯ ದರ್ಶಿ ಶ್ರೀ। ಎ. ವಿ. ಠಕ್ಕರರು ಸಂಘದ ಕಾರ್ಯಕ್ಕಾಗಿ ಪ್ರವಾಸ ಮಾಡುವಾಗ ಅವರು ತೋಟಿಗಳ ವಾಸಸ್ಥಾನಗಳನ್ನು ಪರೀಕ್ಷಿಸಿ ಇದೇ ರೀತಿ ಚಿತ್ರವನ್ನು ಬರೆದಿರುವರು. ಬಿಹಾರದಲ್ಲಿಯ ಪಾಟ್ನಾದ ಹತ್ತಿರದ ದಾನಪುರ ಮತ್ತಿತರ ಸ್ಥಳಗಳಲ್ಲಿಯ ಇಂಥ ವಾಸಸ್ಥಾನಗಳ ಸ್ಥಿತಿಯನ್ನು ಅವರು ಅತೀ ದುಃಖಕರವಾಗುವ ರೀತಿ ವರ್ಣಿಸುತ್ತಾರೆ. ಅಸ್ಪೃಶ್ಯ ತೆಯು ಕುರಿತು ಶಾಸ್ತ್ರಗಳಲ್ಲಿ ಏನು ಉಂಟು ಅಥವಾ ಏನು ಇಲ್ಲ ಎಂದು ಫಲವಿಲ್ಲದ ಚರ್ಚೆಯಲ್ಲಿ ಕಾಲಕಳೆಯುವುದಕ್ಕಿಂತ ಪ್ರತಿ ಯೊಬ್ಬರೂ ಈ ಅಸ್ಪೃಶ್ಯರೆನ್ನಿಸುವವರ ದುಃಖಕರ ಸ್ಥಿತಿಯನ್ನು ಸುಧಾರಿಸ ಲಿಕ್ಕೆ ಕೆಲಸ ಮಾಡುವುದಾದರೆ ಎಷ್ಟು ಉತ್ತಮವಾಗುತಿತ್ತೆಂದು ನನಗೆ ಅನ್ನಿಸುತ್ತದೆ. ನನಗೆ ಪತ್ರಬರೆಯುವ ಆ ಎಲ್ಲಾ ವಿದ್ವಾಂತರು ಇವರ ನೈತಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಆತುರದಲ್ಲಿ ತಾವು

ಯಾರಿಗೂ ಕಡಿಮೆ ಇಲ್ಲವೆಂದು ಬರೆದಿರುವುದರಿಂದ ಅವರೆಲ್ಲರಿಗೆ ಸಾಕಾಗಿ ಉಳಿಯುವಷ್ಟು ಕೆಲಸವು ಇಲ್ಲಿ ಉಂಟೆಂಬುದು ಸ್ಪಷ್ಟವಿರುತ್ತದೆ.

ಲೇಖಾಂಕ ೮.

ಜನವರಿ ಒಂದನೆಯ ತಾರೀಕು ಹತ್ತಿರ ಬರುತ್ತಿರುವುದರಿಂದ ಗುರುವಾಯೂರು ಕ್ಷೇತ್ರ ಪ್ರವೇಶದ ಕುರಿತು ಪತ್ರವ್ಯವಹಾರವು ಹೆಚ್ಚಾಗುತ್ತಿದೆ. ಈ ಪತ್ರಗಳಲ್ಲಿಯ ಪ್ರಶ್ನೆಗಳಿಗೆ ಪ್ರತ್ಯೇಕಪ್ರತ್ಯೇಕವಾಗಿ ಉತ್ತರ ಕೊಡುವುದಕ್ಕಿಂತ ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಈ ಲೇಖಾಂಕದಿಂದ ಅವೆಲ್ಲಕ್ಕೆ ಉತ್ತರಕೊಡುವುದು ಸುಲಭವಿರುತ್ತದೆ.

ಸಾಮಾನ್ಯವಾಗಿ ಸವರ್ಣ ಹಿಂದುಗಳಿಗೆ ಯಾವ ಶರ್ತಗಳ ಮೇಲೆ ಗುರುವಾಯೂರು ದೇವಸ್ಥಾನಕ್ಕೆ ಪ್ರವೇಶ ಕೊಡುತ್ತಾರೋ ಅದೇ ಶರ್ತಗಳ ಮೇಲೆ ಹರಿಜನರಿಗೆ ಇದೇ ಬರುವ ಜನವರಿ ೨ನೇ ತಾರೀಕಿನ ಒಳಗೆ ಪ್ರವೇಶಕೊಡುವುದಿಲ್ಲವಾದರೆ ಆ ದಿನ ಉಪವಾಸಕ್ಕೆ ಆರಂಭವಾಗುವುದು. ಆದರೆ ನೆರೆಹೊರೆಯಲ್ಲಿ ದೇವಸ್ಥಾನಕ್ಕೆ ಹೋಗುವ ಹಿಂದುಗಳಲ್ಲಿ ಬಹುಮತವು ಹರಿಜನರ ಪ್ರವೇಶಕ್ಕೆ ವಿರುದ್ಧವಿರುತ್ತದೆಂದು ಸ್ಪಷ್ಟವಾದರೆ ಉಪವಾಸವು ಮುಂದರಿಸಲಾಗುವುದು. ಅಥವಾ ಹರಿಜನರಿಗೆ ಪ್ರವೇಶ ಕೊಡಲು ಪ್ರತಿಯೊಬ್ಬರಿಗೆ ಇಷ್ಟವಿದ್ದರೂ ಜನವರಿ 2ನೇ ತಾರೀಕಿನ ಒಳಗೆ ನಿವಾರಿಸಲಿಕ್ಕೆ ಸಾಧ್ಯವಿಲ್ಲದ ಕಾನೂನಿನ ಅಡ್ಡಿ ಮಾತ್ರ ಇರುತ್ತದೆಂಬುದು ಸ್ಪಷ್ಟವಾದರೆ ಉಪವಾಸವು ಮುಂದರಿಸಲಾಗುತ್ತದೆ.

ದೇವಸ್ಥಾನಕ್ಕೆ ಹೋಗುವವರ ಅಭಿಪ್ರಾಯವು ಹರಿಜನ ಭಜಕರಿಗೆ ದೇವಸ್ಥಾನಕ್ಕೆ ಪ್ರವೇಶಕೊಡುವರೆ ಅನುಕೂಲವುಂಟೆಂದು ನನಗೆ ಬಂದಿರುವ ಹೆಚ್ಚಿನ ಪತ್ರಗಳು ಭರವಸೆ ಹೇಳುತ್ತಿವೆ. ಒಬ್ಬಿಬ್ಬ ಪತ್ರ

ಲೇಖಕರು ಮಾತ್ರ ಇದನ್ನು ಬಲವತ್ತರವಾಗಿ ಅಲ್ಲಗಳೆಯುತ್ತಾರೆ. ಮಾತ್ರವಲ್ಲ ಸರಿಯಾಗಿ ವೋಟುತೆಗೆದು ನೋಡಿದರೆ ಹರಿಜನರ ಕ್ಷೇತ್ರ ಪ್ರವೇಶಕ್ಕೆ ಬಹಳ ಹೆಚ್ಚಿನ ಬಹುಮತವು ವಿರೋಧವಿದೆಯೆಂದು ಗೊತ್ತಾಗುತ್ತದೆಂದು ಇವರು ಹೇಳುತ್ತಾರೆ. ಈ ಲೇಖಕರು ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಯಾವ ಆಧಾರಗಳನ್ನೂ ಕೊಟ್ಟಿಲ್ಲ; ಆದರೆ ಇನ್ನೊಂದು ಪಕ್ಷದವರು ತಮ್ಮ ಅಭಿಪ್ರಾಯದ ಬಗ್ಗೆ ಒಂದು ತರನಾಗಿ ವೋಟುತೆಗೆದು ನೋಡಿರುವುದಾಗಿಯೂ ಬಹುಮತವು ಹರಿಜನರ ಕ್ಷೇತ್ರಪ್ರವೇಶಕ್ಕೆ ಅನುಕೂಲವಿದೆಯೆಂದೂ ಹೇಳುತ್ತಾರೆ. ಸಂಪ್ರದಾಯವಾದಿಗಳು ಒಪ್ಪುವುದಾದರೆ ಇತ್ತಂಡದವರೂ ನೇಮಿಸುವ ಪಂಚಾಯ್ತರ ಸಮಕ್ಷಮದಲ್ಲಿ ಹೊಸತಾಗಿ ಕ್ರಮಪ್ರಕಾರ ವೋಟು ತೆಗೆದು ಕೂಡಲೇ ನೋಡಬಹುದು.

ಕಳೆದ ಶನಿವಾರ "ಟೈಮ್ಸ್ ಆಫ್ ಇಂಡಿಯಾ" ಪತ್ರಕರ್ತರ ಪ್ರಶ್ನೆಗೆ ಉತ್ತರವಾಗಿ ಸೂಚಿಸಿದ ಯೋಜನೆಯನ್ನು ನಾನಿಲ್ಲಿ ಪುನಃ ಹೇಳಬೇಕಾಗಿಲ್ಲ. ಹೇಗಿದ್ದರೂ ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಬೇಕಾಗುವ ನಿಸ್ಸಂಶಯವಾದ ಆಧಾರಗಳನ್ನು ಸ್ಥಾಪಿಸಿಕೊಳ್ಳುವುದರಲ್ಲಿ ಸುಧಾರಕರು ವಿಳಂಬಮಾಡಬಾರದು. ಆದರೆ ದೇವಸ್ಥಾನಕ್ಕೆ ಹೋಗುವವರ ಬಲುಮಟ್ಟಿನ ಬಹುಮತವು ಸುಧಾರಕರಿಗೆ ಅನುಕೂಲವಿದ್ದರೂ ದೇವಸ್ಥಾನದ ಬೀಗದ ಕೈಯು ಜಾಮೋರೀನರ ಕೈಯಲ್ಲಿರುವುದಾಗಿ ಅವರು ಹೇಳುತ್ತಿದ್ದಾರೆ. ಅಕ್ಷರಶಃ ಅದು ನಿಜವಿರುತ್ತದೆ. ಆದರೆ ದೇವಸ್ಥಾನವು ಜಾಮೋರೀನರದ್ದಲ್ಲ. ಅವರು ದೇವಸ್ಥಾನಕ್ಕೆ ಹೋಗುವ ಮಹಾಜನರ ಟ್ರಸ್ಟೀಯಾಗಿ ಮಾತ್ರ ಇದ್ದಾರೆ. ಆದುದರಿಂದ ಅವರಲ್ಲಿಯ ಅಧಿಕ ಸಂಖ್ಯಾಕರ ಸ್ಪಷ್ಟವಾಗಿ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಅವರು ವಿರುದ್ಧ ಆಚರಣೆಯನ್ನು ಕೈಕೊಳ್ಳುವುದು ಸಾಧ್ಯವಿಲ್ಲ. ಆಗ ಕಾನೂನಿನ ತೊಂದರೆಗಳೇನಾದರೂ ಇದ್ದರೆ ಅವನ್ನು ನಿವಾರಿಸುವುದು ಅವರ ಕರ್ತವ್ಯವಾಗುವುದು. ಅವರು ಹಾಗೆ ಮಾಡುವುದಿಲ್ಲವಾದರೆ ಅವರ ಸ್ಪಷ್ಟವಾದ ಕರ್ತವ್ಯವನ್ನು ಅವರಿಂದ ಮಾಡಿಸುವಷ್ಟು ಮಹಾಜನರ ಅಭಿಪ್ರಾಯಕ್ಕೆ ಶಕ್ತಿಯು ಬೆಳೆದಿಲ್ಲ;

ವೆಂದು ಮಾತ್ರ ಅರ್ಥವಾಗುತ್ತದೆ. ಆಗ ಉಪವಾಸದಿಂದ ಮಹಾ ಜನ ಅಭಿಪ್ರಾಯವು ಇನ್ನಷ್ಟು ಪ್ರಬಲವಾಗಿ ಪರಿಣಾಮಕಾರಿಯಾಗುವುದು. ಆದ್ದರಿಂದ ದೇವಸ್ಥಾನದ ಬೀಗದ ಕೈಯು ನಿಜವಾಗಿ ಮಹಾ ಜನರ ಕೈಯಲ್ಲೆ ಇರುತ್ತದೆ. ಆದರೆ ಕಾನೂನಿನ ಒಂದು ತತ್ವದಲ್ಲಿರುವಂತೆ ಕಾನೂನಾಗಲಿ ನ್ಯಾಯವಾಗಲಿ ಜಾಗರೂಕರಾಗಿರುವವರಿಗೆ ಮಾತ್ರ ಸಹಾಯಮಾಡುವುದಲ್ಲದೆ ಆಲಸ್ಯಗಾರರಿಗಲ್ಲ. ಆದ್ದರಿಂದ ಕೇರಳದ ಸುಧಾರಕರು ಜಾಮೋರೀನರನ್ನು ದೂರದಿರಲಿ. ಅವರ ಮೇಲೆ ಕೆಟ್ಟ ಇರಾದೆಗಳನ್ನು ಆರೋಪಿಸುವುದು ಮರ್ಯಾದೆಗೂ ನ್ಯಾಯಕ್ಕೂ ಯೋಗ್ಯವಲ್ಲ. ಹರಿಜನರಿಗೆ ದೇವಸ್ಥಾನಕ್ಕೆ ಪ್ರವೇಶ ಕೊಡಲು ಅವರು ಒಪ್ಪುವುದಿಲ್ಲವಾದರೆ ಈ ಸುಧಾರಣೆಯು ಮಹಾ ಜನರಿಗೆ ಬೇಕಾಗಿದೆಯೆಂದು ಅವರ ಮನಸ್ಸಿಗೆ ಇನ್ನೂ ಖಾತ್ರಿಯಾಗಿಲ್ಲವೆಂದೇ ಭಾವಿಸೋಣ. ಅವರ ನಿರಾಕರಣೆಯು ಅವರನ್ನು ದೂರಲು ಕಾರಣವಾಗುವುದರ ಬದಲು ನಮ್ಮ ಪಕ್ಷದ ದೌರ್ಬಲ್ಯವನ್ನು ಹುಡುಕಿ ತೆಗೆಯಲಿಕ್ಕೆ ಕಾರಣವಾಗಬೇಕು. ತಮ್ಮ ಪ್ರತಿನಿಧಿ ಮಾತ್ರವಾಗಿರುವ ಜಾಮೋರೀನರು ತಮ್ಮ ಸ್ಪಷ್ಟವಾಗಿ ವ್ಯಕ್ತಗೊಳಿಸಿದ ಇಚ್ಛೆಯನ್ನು ಮೀರುವುದು ಸಾಧ್ಯವಿಲ್ಲವೆಂದು ಭಾವಿಸುವುದೇ ಮಹಾಜನರಿಗೆ ಯೋಗ್ಯವೂ ಗೌರವಯುಕ್ತವೂ ಆಗಿರುತ್ತದೆ.

ಗುರುವಾಯೂರಿನ ಪ್ರಶ್ನೆಯು ಈಗಾಗಲೇ ಅಖಿಲಭಾರತದ ಪ್ರಶ್ನೆಯಾಗಿದೆ. ಅಖಿಲಭಾರತದ ಸವರ್ಣ ಹಿಂದುಗಳು ಎಚ್ಚೆತ್ತು ಗುರುವಾಯೂರು ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶಕೊಡಬೇಕೆಂದು ತಮ್ಮ ಅಭಿಪ್ರಾಯವನ್ನು ಜಾಹೀರುಪಡಿಸಲಿ. ಯಥಾರ್ಥ ಮತ್ತು ಸ್ವತಂತ್ರ ಬುದ್ಧಿಯಿಂದ ವ್ಯಕ್ತಗೊಳಿಸುವ ಇಂಥ ಅಭಿಪ್ರಾಯದ ನೈತಿಕ ಸಾಮರ್ಥ್ಯವನ್ನು ಎದುರಿಸುವುದು ಸಾಧ್ಯವಿಲ್ಲ.

ಸಂಪ್ರದಾಯವಾದೀ ಸನಾತನೀ ಪಕ್ಷದವರ ಕುರಿತು ಅಥವಾ ವೈಸರಾಯರಿಗೆ ಮಾಡಿಕೊಂಡ ಒಂದು ಮನವಿಯಲ್ಲಿ ಅವರೇ ಕರೆದುಕೊಂಡಂತೆ ಬೇಡಬದಲಾವಣೆಯ ಪಕ್ಷದವರ ಕುರಿತು ಅಯೋಗ್ಯ ಭಾಷೆಯನ್ನುಪಯೋಗಿಸಬಾರದೆಂದು ಸುಧಾರಕರನ್ನು ನಾನು ಈ

ಮೊದಲೇ ಎಚ್ಚರಿಸಿದ್ದೇನೆ. ಅವರಿಗೆ ಅವರ ಸ್ವಂತ ಅಭಿಪ್ರಾಯವನ್ನಿಟ್ಟುಕೊಳ್ಳಲಿಕ್ಕೆ ಅಧಿಕಾರವಿರುತ್ತದೆ. ಈ ಅಸ್ಪೃಶ್ಯತಾ ಪ್ರಶ್ನೆಯು ಮುಖ್ಯವಾಗಿ ಧಾರ್ಮಿಕ ಪ್ರಶ್ನೆಯೆಂದು ನಾನು ತಿಳಿಯುತ್ತೇನೆ. ಆದ್ದರಿಂದ ಬೇಡಬಸಲಾವಣೆಯುವರೂ ಸುಧಾರಕರೂ ಪರಸ್ಪರ ಕೆಟ್ಟ ಇರಾದೆಗಳನ್ನು ಆರೋಪಿಸದೆ ಧಾರ್ಮಿಕ ಭಾವನೆಯಿಂದ ಕೆಲಸಮಾಡಬೇಕಾಗಿ ಅಪೇಕ್ಷಿಸುತ್ತೇನೆ. ಯಾವ ಸುಧಾರಣೆಯೇ ಆಗಲಿ, ಅದರಲ್ಲಿಯೂ ಧಾರ್ಮಿಕ ಸುಧಾರಣೆಯಂತೂ ಬಲಾತ್ಕಾರದಿಂದ ಸಾಧಿಸುವುದು ಸಾಧ್ಯವಿಲ್ಲ ಮಾತ್ರವಲ್ಲ ಹಾಗೆ ಯತ್ನಿಸಲಿಕ್ಕೂ ಕೂಡದು. ನನ್ನ ಉಪವಾಸದ ಧ್ಯೇಯಗಳು ಹಾಗೂ ಮಿತಿಗಳನ್ನು ನಾನು ಅನೇಕ ಬಾರಿ ಖಂಡಿತ ಮಾತುಗಳಲ್ಲಿ ವರ್ಣಿಸಿದ್ದೇನೆ.

ಗುಜರಾತಿ ಭಾಷೆಯಲ್ಲಿ ನನಗೆ ಬರೆದಿರುವ ಒಂದು ಪತ್ರದಲ್ಲಿ ಲೇಖಕರೊಬ್ಬರು ತಮ್ಮ ಮತ್ತು ಇತರರ ಪರವಾಗಿ ಈ ರೀತಿ ಬರೆಯುತ್ತಾರೆ:—'ಯಾರ ಮೇಲೆಯೂ ಬಲಾತ್ಕಾರ ನಡೆಸುವ ಇರಾದೆಯು ನಿಮಗಿಲ್ಲವೆಂದು ಹೇಳುವುದೇನೊ ಸರಿಯೇ—ಆದರೆ ನಿಮ್ಮ ಕೆಲಸದಿಂದ ಹಲವು ಜನರು ತಮ್ಮ ಅಭಿಪ್ರಾಯವನ್ನು ಬಿಟ್ಟುಕೊಟ್ಟು ಕೆಲಸಮಾಡುವಂತೆ ಒತ್ತಾಯವಾಗುತ್ತದೆ. ನಮ್ಮಲ್ಲಿ ಕೆಲವರು ನಿಮ್ಮ ಧಾರ್ಮಿಕ ಅಭಿಪ್ರಾಯಗಳಿಗಾಗಲಿ ಸಾಮಾಜಿಕ ಸುಧಾರಣೆಗಳಿಗಾಗಲಿ ಏನೂ ಬೆಲೆ ಕೊಡುವುದಿಲ್ಲ. ಆದರೆ ನಿಮ್ಮ ರಾಜಕೀಯ ಶಕ್ತಿಗಾಗಿ ನೀವು ಜೀವಿಸುವುದು ನಮಗೆ ಅಗತ್ಯವಿರುತ್ತದೆ. ಆದ್ದರಿಂದ ನೀವು ಉಪವಾಸ ಮಾಡುವ ಹಟವನ್ನೆ ಹಿಡಿದರೆ ನಮ್ಮ ನಿಶ್ಚಿತ ಅಭಿಪ್ರಾಯಗಳನ್ನು ಮೂಲೆಗೊತ್ತಿ ಈ ದೇವಸ್ಥಾನ ಪ್ರವೇಶ ಚಳವಳದಲ್ಲಿ ನಿಮಗೆ ಸಹಾಯಮಾಡಬೇಕಾಗುವುದು. ಇದಕ್ಕೆ ಬಲಾತ್ಕಾರವೆನ್ನುವುದಿಲ್ಲವಾದರೆ ಆ ಶಬ್ದದ ಅರ್ಥವೇ ನಮಗೆ ಗೊತ್ತಿಲ್ಲ.'

ಇದಕ್ಕೆ ನನ್ನ ಉತ್ತರ ಹೀಗಿದೆ: ದೇಶದಲ್ಲಿ ನನಗೊಂದು ಪ್ರಮುಖ ಸ್ಥಾನವಿದೆಯೆಂಬುದರಿಂದಾಗಲಿ ನನಗೆ ಸ್ವಲ್ಪ ರಾಜಕೀಯ ಶಕ್ತಿ ಇದೆಯೆಂಬುದರಿಂದಾಗಲಿ ನನಗೆ ಪ್ರಿಯವಾಗಿರುವ ನನ್ನ ಅಭಿಪ್ರಾಯಗಳನ್ನು

ನಾನು ಬಿಟ್ಟುಕೊಡಬೇಕೆಂದು ಯಾರೂ ಅಪೇಕ್ಷಿಸಬಾರದು. ನನ್ನ ಸಮಾಜದಲ್ಲಿಯ ಸ್ಥಾನವನ್ನು ಅಥವಾ ರಾಜಕೀಯ ಶಕ್ತಿಯನ್ನು ಇಟ್ಟುಕೊಳ್ಳುವ ಉದ್ದೇಶದಿಂದ ನನ್ನ ಶ್ರದ್ಧೆಯನ್ನು ನಾನು ಮಾರಲಾರೆನು. ಪ್ರತಿಯೊಂದು ಆ ಶ್ರದ್ಧೆಗೆ ಅಧೀನವಾಗಿ ಅದರಿಂದಲೇ ಉತ್ಪನ್ನವಾದುದಾಗಿರಬೇಕು. ನನ್ನ ಶ್ರದ್ಧೆಯನ್ನು ನಿರಾಕರಿಸಲಿಕ್ಕೆ ಅಥವಾ ಒತ್ತಿ ಮೂಲೆಗಿರಿಸಲಿಕ್ಕೆ ಹೇಳುವುದೆಂದರೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕೆ ನನಗೆ ಹೇಳಿದ್ದಕ್ಕಿಂತಲೂ ನನಗೆ ಕೆಟ್ಟದ್ದೆನಿಸುತ್ತದೆ. ನನ್ನ ಸ್ಥಾನ ಅಥವಾ ರಾಜಕೀಯ ಶಕ್ತಿಗಾಗಿ ಯಾರು ತಮ್ಮ ಅಭಿಪ್ರಾಯಗಳನ್ನು ಬಿಟ್ಟುಕೊಡುತ್ತಾರೋ ಅವರಿಗೆ ತಮ್ಮ ಅಭಿಪ್ರಾಯಗಳಲ್ಲಿ ಆಳವಾದ ಶ್ರದ್ಧೆ ಇಲ್ಲವೆಂದೂ ಅಥವಾ ಶ್ರದ್ಧೆಯೇ ಇಲ್ಲವೆಂದೂ ಸೂಚಿಸಲು ಸಾಹಸಪಡುತ್ತೇನೆ. ಶ್ರದ್ಧೆಯು ಇದಕ್ಕಿಂತ ಎಷ್ಟೋ ಕಠಿಣ ವಸ್ತುವಿನಿಂದ ರಚಿಸಲ್ಪಡುತ್ತದೆ. ಜನರು ತಮ್ಮ ಶ್ರದ್ಧೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿದ್ದುಂಟು. ಆಗ ಅದಕ್ಕೆ ಧರ್ಮವೆನ್ನಬಹುದು.

ಅದೇ ಪತ್ರಲೇಖಕನು ಮತ್ತೂ ಬರೆಯುತ್ತಾನೆ: 'ಜಾಮೋರಿನರು ಪಾಪ ಏನು ಮಾಡಬಲ್ಲರು? ಒಂದೆಡೆ ನೀವು ಮತ್ತು ಶ್ರೀ ಕೇಳಪ್ಪನವರು ಉಪವಾಸ ಮಾಡುತ್ತೀರಿ. ಇನ್ನೊಂದೆಡೆ ಒಂದು ಸಾವಿರ ಬೇಡಬದಲಾವಣೆಯವರು ಉಪವಾಸಮಾಡಲು ನಿರ್ಣಯಿಸಿರುವರಾಗಿ ಹೇಳುತ್ತಾರೆ. ಜಾಮೋರೀನರು ಯಾರನ್ನು ಸಂತೋಷಪಡಿಸಬೇಕು.'

ಯಾವ ಸಂದೇಹವೂ ಇಲ್ಲದೆ ಈ ರೀತಿ ಉತ್ತರ ಕೊಡುತ್ತೇನೆ: 'ಜಾಮೋರೀನರು ಇತ್ತಂಡದವರಿಗೂ ಸಂತೋಷಪಡಿಸಬೇಕಾಗಿಲ್ಲ. ಅವರು ಸತ್ಯಸ್ವರೂಪಿಯಾದ ದೇವರನ್ನು ಸಂತೋಷಪಡಿಸಬೇಕು. ಅವರು ಅಲ್ಲಿರುವುದು ತಮ್ಮ ಕರ್ತವ್ಯಪಾಲನೆಯ ಬಗ್ಗೆ. ಅಂದ ಮೇಲೆ ಅದಕ್ಕಾಗಿ ಸಾವಿರ ಬೇಡಬದಲಾವಣೆಯವರು, ನಾನು, ಕೇಳಪ್ಪನವರು ಅಗತ್ಯವಿದ್ದರೆ ನಮ್ಮೆಲ್ಲರನ್ನು ಆಹುತಿಕೊಡಲು ಬೇಕಾದ ಧೈರ್ಯವು ಅವರಲ್ಲಿರಬೇಕು. ಹಾಗೆ ಮಾಡಿದರೇನೇ ಅವರು ಈಗಿನ ಮಾತ್ರವಲ್ಲ ಭಾವೀಜನಾಂಗದ ಗೌರವಕ್ಕೆ ಪಾತ್ರರಾಗುವರು. ಉಪವಾಸದ ಬಂಧುಗಳ ಜಾಗ್ರತೆ

ಯನ್ನು ದೇವರು ನೋಡಿಕೊಳ್ಳುವನು. ಯಾರು ಉಪವಾಸ ಮಾಡು ವರೋ ಅವರು ತಮಗೆ ತೋರಿದಂತೆ ಸತ್ಯವನ್ನು ರಕ್ಷಿಸಲಿಕ್ಕಾಗಿ ಹಾಗೆ ಮಾಡುತ್ತಾರೆ ಮತ್ತು ಸತ್ಯದ ದೇವರು ಅವನ ಇಚ್ಛೆಯಂತೆ ಅವರನ್ನು ನಡೆಸುತ್ತಾನೆ. ಅವರ ಉಪವಾಸವು ಅಂತಪ್ರೇರಣೆಗೆ ಉತ್ತರವೆಂದಾದರೆ ಅದಕ್ಕೆ ಬೇರೆ ಪ್ರತಿಫಲದ ಆವಶ್ಯಕತೆಯೇ ಇಲ್ಲದೆ ಅದೇ ಸ್ವಂತ ಫಲ ವಿರುತ್ತದೆ.'

ಆ ಲೇಖಕನು ಇನ್ನೂ ಬರೆಯುತ್ತಾನೆ: 'ಆದರೆ ದೇವರು, ಆತ್ಮ ಸಾಕ್ಷಿ, ಅಂತರ್ಧ್ವನಿ ಎಂಬಿತ್ಯಾದಿಯಾಗಿ ನೀವು ಹೇಳುವುದೇನೊ ಚೆನ್ನಾ ಗಿದೆ. ಇತರರೂ ಅದೇ ರೀತಿ ಹೇಳಬಹುದು ಮಾತ್ರವಲ್ಲ ಹೇಳು ತ್ತಾರೆ. ಯಾವ ಅಂತರ್ಧ್ವನಿಯೂ ಕೇಳಿಸದ ಹಾಗೂ ಮಹಾಜನರ ಮುಂದೆ ಪ್ರದರ್ಶಿಸಲಿಕ್ಕೆ ಯಾವ ದೇವರು ಕೂಡ ಇಲ್ಲದ ನಾವು ಏನು ಮಾಡಬೇಕು ಮತ್ತು ಯಾರನ್ನು ನಂಬಬೇಕು?'

ಇದಕ್ಕೆ ನಾನು ಇಷ್ಟೇ ಹೇಳಬಲ್ಲೆನು: ನೀವು ಸ್ವಂತ ನಿಮ್ಮನ್ನಲ್ಲದೆ ಯಾರನ್ನೂ ನಂಬಬೇಕಾಗಿಲ್ಲ. ಅಂತರ್ಧ್ವನಿಯನ್ನು ಕೇಳಲಿಕ್ಕೆ ನೀವು ಯತ್ನಿಸಬೇಕು. ಆ ಶಬ್ದವು ನಿಮಗೆ ಬೇಡವೆಂದಿದ್ದರೆ 'ಬುದ್ಧಿಶಕ್ತಿಯ ಸೂಚನೆ'ಗಳೆಂದು ಹೇಳಿರಿ ಮತ್ತು ಅವುಗಳಿಗೆ ವಿಧೇಯತೆಯನ್ನು ತೋರಿಸಿರಿ. ನೀವು ದೇವರನ್ನು ಪ್ರದರ್ಶಿಸುವುದಿಲ್ಲವೆಂದಾದರೆ ನೀವು ಬೇರೆ ಏನನ್ನಾದರೂ ತಂದು ಪ್ರದರ್ಶಿಸುವಿರೆಂಬುದಕ್ಕೆ ನನಗೆ ಸಂಶಯ ವಿಲ್ಲ. ಮಾತ್ರವಲ್ಲ ನೀವು ಪ್ರದರ್ಶಿಸುವ ವಸ್ತುವು ಕಟ್ಟಕಡೆಗೆ ದೇವರೆಂದೇ ರುಜುವಾಗುವುದು. ಯಾಕೆಂದರೆ ಈ ವಿಶ್ವದಲ್ಲಿ ಭಾಗ್ಯವಶಾತ್ ದೇವ ರಲ್ಲದೆ ಬೇರೆ ಏನೂ ಮತ್ತು ಯಾರೂ ಇರುವುದಿಲ್ಲ. ಅಂತರ್ಧ್ವನಿಯ ಪ್ರೇರಣೆಯಿಂದ ಕೆಲಸ ಮಾಡುವೆವೆಂದು ಹೇಳುವವರೆಲ್ಲರೂ ಆ ಪ್ರೇರಣೆ ಯಿಂದಲೇ ಕೆಲಸ ಮಾಡುವವರೆನ್ನಲಾಗುವುದಿಲ್ಲವೆಂದು ಕೂಡ ಹೇಳ ಲಿಚ್ಛಿಸುತ್ತೇನೆ. ಪ್ರತಿಯೊಂದು ವಿದ್ಯೆಯನ್ನು ಸಂಪಾದಿಸಲಿಕ್ಕೆ ಹೇಗೆ ದೀರ್ಘಪ್ರಯತ್ನ ಮತ್ತು ಶಿಕ್ಷಣಗಳು ಬೇಕೋ ಅದೇ ರೀತಿ ಅಂತರ್ಯಾಮಿದ ಈ ಶಾಂತವಾದ ಮೃದುಧ್ವನಿಯನ್ನು ಕೇಳಬೇಕಾದರೆ ಅದಕ್ಕೂ ದೀರ್ಘ

ಪ್ರಯತ್ನ ಮತ್ತು ಶಿಕ್ಷಣಗಳು ಬೇಕಾಗುತ್ತವೆ; ಮಾತ್ರವಲ್ಲ ಬೇರೆ ಯಾ
ವಿದ್ಯೆಗೆ ಬೇಕಾಗುವುದಕ್ಕಿಂತ ಅವು ಇದಕ್ಕೆ ಹೆಚ್ಚಿನ ಅಂಶದಲ್ಲಿ ಬೇಕಾಗ
ವವು. ಈ ಹಕ್ಕನ್ನು ಹೇಳಿಕೊಳ್ಳುವ ಸಾವಿರಾರು ಜನರಲ್ಲಿ ಕೆಲವ
ಮಂದಿ ಅದನ್ನು ಸಮರ್ಥಿಸುವುದರಲ್ಲಿ ಯಶಸ್ವಿಗಳಾದರೂ ಅವ
ಕ್ಕಾಗಿಯೇ ಸಂಶಯಾಸ್ಪದ ಹಕ್ಕುದಾರರನ್ನು ಸಹಿಷ್ಣುತಾಭಾವದಿಂ
ನೋಡುವುದರಲ್ಲಿರುವ ಅಪಾಯವನ್ನು ತಾಳಿಕೊಳ್ಳುವುದು ಲಾಭವ
ಇರುತ್ತದೆ.

ಗುಜರಾತೀ ಪತ್ರ ಲೇಖಕರ ಬಗ್ಗೆ ಇಷ್ಟು ಸಾಕು. ಇಂಗ್ಲಿಷ್
ಭಾಷೆಯಲ್ಲಿ ಬರೆದ ಒಬ್ಬ ಲೇಖಕರ ಒಂದು ಪ್ರಶ್ನೆಗೆ ಉತ್ತರವಿತ್ತು ನಾನು
ಈ ಲೇಖಾಂಕವನ್ನು ಮುಗಿಸುತ್ತೇನೆ. ವಿಸ್ತಾರವಾದ ತರ್ಕಗಳನ್ನೊಳ
ಗೊಂಡು ಅವರ ಪತ್ರವು ಉದ್ದವಾಗಿದೆ. ಆದರೂ ಸಂಕ್ಷಿಪ್ತ ರೀತಿಯಲ್ಲಿ
ಅವರ ಅಭಿಪ್ರಾಯವನ್ನು ಈ ಕೆಳಗಿನಂತೆ ಸರಿಯಾಗಿ ವರ್ಣಿಸಬಹುದು:
‘ಇದು ವರೆಗೆ ನಿಮ್ಮಲ್ಲಿ ನಾನು ಜಾತಿಯ ಅಭಿಮಾನದ ಚಿಹ್ನೆಯನ್ನು
ಕಂಡದ್ದಿಲ್ಲ. ಆದರೆ ಈಗ ನೀವು ಒಮ್ಮೆಗೇನೇ ಜಾತಿಯ ಅಭಿಮಾನದ
ವೇಷವನ್ನು ತಾಳಿ ಮುಂದೆ ಬಂದಿರುವಿರಿ. ನೀವು ಸ್ವರಾಜ್ಯಕ್ಕಾಗಿ ಅಥವಾ
ಅಖಿಲ ಭಾರತದ ಐಕ್ಯಕ್ಕಾಗಿ ಉಪವಾಸವನ್ನು ಕೈಕೊಂಡರೆ ಅದು ನನಗೆ
ಅರ್ಥವಾಗುತ್ತಿತ್ತು; ಮಾತ್ರವಲ್ಲ ಅದನ್ನು ನಾನು ನ್ಯಾಯವೆನ್ನುತ್ತಿದ್ದೆನು.
ಆದರೆ ನೀವು ಹಿಂದೂಮತಕ್ಕಾಗಿ ಉಪವಾಸ ಕೈಕೊಳ್ಳುವುದು ನನಗೆ
ಅರ್ಥವಾಗುವುದಿಲ್ಲ. ನೀವು ಒಬ್ಬ ಹಿಂದೂವೆಂದು ನಾನು ಇದುವರೆಗೆ
ಭಾವಿಸಿಲ್ಲ. ಅಂತೂ ಸಂಕುಚಿತ ದೃಷ್ಟಿಯ ಹಿಂದುವೆಂದು ಖಂಡಿತವಾ
ಗಿಯೂ ತಿಳಿದಿಲ್ಲ. ದೇವಸ್ಥಾನದೊಳಗೆ ಹೋಗಲಿಕ್ಕೆ ಆತುರಪಡದ
ಹರಿಜನರಿಗೆ ಅಲ್ಲಿ ಪ್ರವೇಶ ಕೊಡುವುದರಲ್ಲಿ ಏನಿರುತ್ತದೆ?’

ಈ ಪ್ರಶ್ನೆಗಾಗಿ ನಾನು ಸಂತೋಷಪಡುತ್ತೇನೆ. ನಿಜವಾಗಿ ಇರು
ವುದಕ್ಕಿಂತ ಬೇರೆಯಾಗಿ ತೋರಿಸಿಕೊಳ್ಳಲಿಕ್ಕೆ ನಾನು ಇಚ್ಛಿಸುವುದಿಲ್ಲ.
ಹಿಂದೂ ಆಗಿರುವುದರಿಂದ ಅಥವಾ ನನ್ನ ಹಿಂದೂ ಮತಕ್ಕಾಗಿ ನಾನು
ನಾಚಿಕೆಪಡುವುದಿಲ್ಲ. ಸಂಕುಚಿತ ದೃಷ್ಟಿಯನ್ನು ನಾನು ಸಂಪೂರ್ಣ
ನಿರಾಕರಿಸುತ್ತೇನೆ. ಒಂದು ಸಂಕುಚಿತ ಧರ್ಮವು ನನ್ನನ್ನು ಒಂದು ಕ್ಷಣ

ಕ್ಕಾದರೂ ಸ್ವಾಧೀನದಲ್ಲಿಟ್ಟುಕೊಳ್ಳಲಾರದೆಂದೇ ನಾನು ಭಾವಿಸುತ್ತೇನೆ. ಅಸ್ಪೃಶ್ಯತೆಯನ್ನು ಹೊರಿಸುವುದರಿಂದ ಹಿಂದೂ ಮತವು ಸಂಕುಚಿತ ಧರ್ಮವಾಗುತ್ತದೆಂಬುದರಿಂದಲೇ ನಾನು ಅದಕ್ಕೆ ವಿರುದ್ಧಬಂಡನ್ನೆಬ್ಬಿಸಿದ್ದೇನೆ. ಆ ಕಲಂಕವನ್ನು ಹೋಗಲಾಡಿಸುವುದಕ್ಕೆ ನನ್ನ ಪ್ರಾಣಕೊಡಬೇಕಾದರೆ ಅದು ಬಹಳ ಅಗ್ಗಕ್ರಯವೆಂದೇ ನಾನು ಎಣಿಸುತ್ತೇನೆ.

ನನ್ನಲ್ಲಿ ಜಾತ್ಯಭಿಮಾನವೇನೂ ಇಲ್ಲ. ಯಾಕೆಂದರೆ ನನ್ನ ಹಿಂದೂಮತವು ಸರ್ವರನ್ನು ಒಳಗೊಳ್ಳುವಂಥಾದ್ದೇ ಇರುತ್ತದೆ. ಅದು ಮುಸಲ್ಮಾನರ ವಿರುದ್ಧ ಅಥವಾ ಕ್ರೈಸ್ತರ ವಿರುದ್ಧ, ಅಥವಾ ಇನ್ನಾವ ಮತದ ವಿರುದ್ಧವೂ ಇಲ್ಲ. ಅದು ಮುಸಲ್ಮಾನರಿಗೆ ಅನುಕೂಲವಾಗಿ, ಕ್ರೈಸ್ತರಿಗೆ ಅನುಕೂಲವಾಗಿ ಹಾಗೆಯೇ ಜಗತ್ತಿನಲ್ಲಿಯ ಪ್ರತಿಯೊಂದು ಜೀವಂತಧರ್ಮಕ್ಕೂ ಅನುಕೂಲವಾಗಿಯೇ ಇರುತ್ತದೆ. ನನಗೆ ಹಿಂದೂ ಮತವೆಂದರೆ ಒಂದೇ ತಾಯಿವೃಕ್ಷದ ಒಂದು ಶಾಖೆ ಮಾತ್ರವಿರುತ್ತದೆ. ಆ ವೃಕ್ಷದ ಮೂಲ ಹಾಗೂ ಗುಣಗಳ ಪರೀಕ್ಷೆಯು ಅದರ ಎಲ್ಲಾ ವಿವಿಧ ಶಾಖೆಗಳ ಒಟ್ಟು ಶಕ್ತಿ ಹಾಗೂ ಗುಣಗಳನ್ನು ಪರೀಕ್ಷಿಸಿಯೇ ತಿಳಿಯುತ್ತೇವೆ. ನಾನು ಯಾವ ಹಿಂದೂ ಶಾಖೆಯ ಮೇಲೆ ಕುಳಿತಿರುವೆನೋ ಮತ್ತೆ ಯಾವುದು ನನ್ನನ್ನು ಪೋಷಿಸುತ್ತದೊ ಆ ಶಾಖೆಯ ರಕ್ಷಣೆಯನ್ನು ನಾನು ಮಾಡಿದರೆ ನಿಶ್ಚಯವಾಗಿಯೂ ನಾನು ಉಳಿದ ಸಹೋದರ ಶಾಖೆಗಳ ಜಾಗ್ರತೆಯನ್ನು ತೆಗೆದುಕೊಂಡಂತಾಗುತ್ತದೆ. ಹಿಂದೂ ಶಾಖೆಗೆ ವಿಷ ತಗಲಿದರೆ ಆ ವಿಷವು ಪ್ರಾಯಶಃ ಉಳಿದವುಗಳಿಗೂ ಹಬ್ಬುತ್ತದೆ. ಆ ಶಾಖೆಯು ಒಣಗಿ ಹಾಳಾದರೆ ಅದರಿಂದ ತಾಯಿವೃಕ್ಷದ ಶಕ್ತಿಯು ಅಷ್ಟಕ್ಕೆ ಕಡಮೆಯಾಗುತ್ತದೆ.

ನನ್ನ ಪತ್ರಲೇಖಕರು ಹಾಗೂ ಅವರಂತೆ ಅಭಿಪ್ರಾಯವುಳ್ಳವರು ಇಷ್ಟರ ಮಟ್ಟಿಗೆ ನನ್ನ ಅಭಿಪ್ರಾಯಗಳನ್ನು ತಿಳಿದುಕೊಂಡರೆ ನನ್ನ ಭಾವನೆಯು ಈ ಹಿಂದೂ ಧರ್ಮಕ್ಕಾಗಿ ಪ್ರಾಣವನ್ನರ್ಪಿಸುವ ಹಕ್ಕನ್ನು ದೇವರು ನನಗೆ ಕೊಟ್ಟರೆ ನಾನು ಎಲ್ಲರ ಐಕ್ಯಕ್ಕಾಗಿ ಮತ್ತು ಸ್ವರಾಜ್ಯಕ್ಕಾಗಿ ಕೂಡ

ಪ್ರಾಣಕೊಟ್ಟಂತಾಗುವುದೆಂದು ಅವರು ತಿಳಿದುಕೊಳ್ಳಬಲ್ಲರು. ಕೊನೆಗೆ ಇದಕ್ಕೆ ಮೊದಲೇ ಹೇಳಿರುವುದನ್ನು ಪುನಃ ಹೇಳುತ್ತೇನೆ. ಅದೇನೆಂದರೆ ದೇವಸ್ಥಾನದೊಳಗೆ ಪ್ರವೇಶಿಸಲು ಹರಿಜನರಿಗೆ ಇಚ್ಛೆ ಇದೆಯೊ ಅಥವಾ ಅವರಿಗೆ ಬಿಟ್ಟರೆ ಅವರು ಪ್ರವೇಶಿಸುವರೊ ಎಂಬ ಪ್ರಶ್ನೆಯು ಅಸಂಬದ್ಧ ವಿರುತ್ತದೆ. ಅಸ್ಪೃಶ್ಯತಾ ನಿವಾರಣೆಯೆಂಬುದು ಹರಿಜನರಿಗೆ ಮಾಡುವ ಒಂದು ಉಪಕಾರದ ವಿಷಯವಲ್ಲ. ಅದು ಸವರ್ಣ ಹಿಂದುಗಳ ಆತ್ಮ ಶುದ್ಧಿಯ ಹಾಗೂ ಪ್ರಾಯಶ್ಚಿತ್ತದ ಪ್ರಶ್ನೆ ಇರುತ್ತದೆ. ಹಿಂದೂ ದೇವ ಸ್ಥಾನಗಳನ್ನು ಹರಿಜನರಿಗೆ ತೆರೆದುಬಿಟ್ಟು ಅವರನ್ನು ಪ್ರವೇಶಿಸುವಂತೆ ಆಮಂತ್ರಿಸುವುದು ಅವರು ಮಾಡಬೇಕಾದ ಪ್ರಾಯಶ್ಚಿತ್ತಗಳಲ್ಲಿ ಒಂದಾಗಿರುತ್ತದೆ.

ಲೇಖಾಂಕ ೧೦.

ಶ್ರೀಯುತ ವಿ. ಆರ್. ಶಿಂಧೇ ಎಂಬವರು ಅಸ್ಪೃಶ್ಯತಾ ನಿವಾರಣಾ ಸಂಘವೆಂಬ ಸಂಸ್ಥೆಯನ್ನು ಮೊದಲೇ ಸ್ಥಾಪಿಸಿದ್ದ ಕಾರಣ ಹೊಸತಾಗಿ ಸ್ಥಾಪಿಸಿದ ಇದೇ ಹೆಸರಿನ ಸಂಘಕ್ಕೆ ಇನ್ನು ಮುಂದೆ ಹರಿಜನ ಸೇವಾ ಸಂಘವೆಂಬ ಇನ್ನೂ ಯೋಗ್ಯವೆಂದು ನನಗೆ ತೋರುವ ಹೆಸರನ್ನು ಕೊಡ ಲಾಗುವುದು. ಈ ಹರಿಜನ ಸೇವಾಸಂಘದ ಒಂದು ಸಭೆಗೆ ಹೋದ ಸ್ನೇಹಿತರೊಬ್ಬರು ಹಲವು ಪ್ರಶ್ನೆಗಳನ್ನೂ ಕೆಲವು ತರ್ಕಗಳನ್ನೂ ಪೋಣಿಸಿ ನನ್ನಡೆಗೆ ಕಳುಹಿಸಿರುವರು. ಇವುಗಳಲ್ಲಿ ಮುಖ್ಯವಾದವುಗಳನ್ನು ಒಂದು ಪತ್ರರೂಪದಲ್ಲಿ ಸಂಕ್ಷಿಪ್ತವಾಗಿ ಹೇಳಬಹುದು.

'ಹರಿಜನ ಸೇವಾಸಂಘವು ಅಸ್ಪೃಶ್ಯತಾನಿವಾರಣೆಯ ಕಾರ್ಯ ಸಾಧನೆಯ ಬಗ್ಗೆ ನಿಮ್ಮ ಸೂಚನೆಯಂತೆ ಸ್ಥಾಪಿತವಾಗಿರುವುದರಿಂದ ಕೆಲಸಗಾರರು ನಿಮ್ಮಿಂದ ಈ ಬಗ್ಗೆ ಹಲವು ಸೂಚನೆಗಳನ್ನು ಪಡೆಯಲಪೇ ಕ್ಷಿಸುವುದು ಸಹಜವಿದೆ. ನನಗೆ ಸೂಚಿಸುವ ಮೊದಲನೇ ಪ್ರಶ್ನೆಯು ಈ ರೀತಿ ಇದೆ: ಕೆಲಸಗಾರರು ತಾವು ಸುಧಾರಕ ತಂಡವಾಗಿ ಭಾವಿಸಿ

ಹರಿಜನರ ಸುಧಾರಣೆಯು ಕಾರ್ಯವನ್ನು ಕೈಕೊಳ್ಳಬೇಕೋ ಅಥವಾ ತಮ್ಮನ್ನು ಸುಧಾರಿಸಿಕೊಳ್ಳುವ ಕಾರ್ಯವೆಂದು ಭಾವಿಸಬೇಕೊ? ಎರಡನೇಯದೇ ಸರಿಯೆಂದಾದರೆ ಸವರ್ಣ ಹಿಂದುಗಳ ನಡುವೆ ಮಾಡಬೇಕಾದ ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ. ಈ ಕಾರ್ಯವನ್ನು ಯಾವ ಕ್ರಮದಲ್ಲಿ ಮಾಡಬಹುದು?'

ಈ ಪ್ರಶ್ನೆಯು ಸಾಕಷ್ಟು ವಿಶಾಲವಿರುವುದರಿಂದ ಇದಕ್ಕೆ ಉತ್ತರ ಕೊಡುವಾಗ ನನ್ನ ಸ್ನೇಹಿತರು ಕೇಳಿದ ಹಲವು ಪ್ರಶ್ನೆಗಳನ್ನು ವಿಚಾರಿಸಲು ಸಾಧ್ಯವಾಗುವುದೆಂದು ಭಾವಿಸುತ್ತೇನೆ.

ಅಸ್ಪೃಶ್ಯರೆಂದು ಕರೆಯಲ್ಪಡುವವರ ಕಡೆಗೆ ಪಾಪಮಾಡಿರುವುದರಿಂದ ಸವರ್ಣ ಹಿಂದುಗಳೇ ತಪ್ಪಿತಸ್ಥರೆಂದು ನಾನು ಎಷ್ಟೋ ಬಾರಿ ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ್ದೇನೆ. ಹರಿಜನರ ಈಗಿನ ಪರಿಸ್ಥಿತಿಗೆ ಸವರ್ಣ ಹಿಂದುಗಳೇ ಜವಾಬ್ದಾರರು. ಆದುದರಿಂದ ಇವರು ತಮ್ಮ ಪಾಪಕ್ಕಾಗಿ ಪಶ್ಚಾತ್ತಾಪಪಟ್ಟು 'ಅಸ್ಪೃಶ್ಯ'ರ ಬೆನ್ನ ಮೇಲಿನ ಅಸ್ಪೃಶ್ಯತೆಯ ಭಾರವನ್ನು ನಿವಾರಿಸಿ ತಾವು ಶುದ್ಧರಾದರೆ ಕೂಡಲೆ ಅವರ ನಡುವೆ ಒಂದು ಬದಲಾವಣೆಯಾಗುವುದನ್ನು ನೋಡಬಲ್ಲೆವು. ಅಂದರೆ ಜೀವಮಾನದ ಅಭ್ಯಾಸಗಳನ್ನು ಅವರು ಒಮ್ಮೆಗೆನೇ ತ್ಯಜಿಸುವರೆಂದಲ್ಲ. ಈ ಅಭ್ಯಾಸಗಳನ್ನು ಅವರು ನಿವಾರಿಸಲಿಕ್ಕೆ ಮನಃಪೂರ್ವಕ ಯತ್ನಿಸುವರು ಮತ್ತು ಈ ಕಾರ್ಯದಲ್ಲಿ ಎಲ್ಲೆಲ್ಲಿಯೂ ಸಾವಿರಾರು ಸವರ್ಣ ಹಿಂದುಗಳು ಅವರಿಗೆ ಸಹಾಯಮಾಡುವರು. ಒಂದು ಕುಟುಂಬದಲ್ಲಿ ಹೊರಗೆ ಹಾಕಲ್ಪಟ್ಟ ಸಂಬಂಧಿಕರು ಪುನಃ ಬಂದು ಕುಟುಂಬದವರೊಡನೆ ಸೇರುವಂತೆ ಹಾಗೂ ಹೊರಗೆ ಹಾಕಿದವರು ಅಂಥದ್ದೇನೂ ನಡೆಯಲಿಲ್ಲವೆಂಬಂತೆ ಪುನಃ ಅವನನ್ನು ಸ್ವೀಕರಿಸುವಂತೆಯೇ ಈ ಕಾರ್ಯವು ಜರಗುವುದು. ಈ ಪರಿಣಾಮವು ಕೈಗೂಡಬೇಕಾದರೆ ಸ್ವಲ್ಪ ಸಮಯವು ಇನ್ನೂ ಬೇಕಾಗಿದೆ ಎಂದು ನೋಡಿ ನನಗೆ ದುಃಖವಾಗುತ್ತದೆ. ಆದರೆ ನಮ್ಮಲ್ಲಿ ಕೆಲವರಾದರೂ ಪ್ರಶ್ನೆಯನ್ನು ಸರಿಯಾಗಿ ತಿಳಿದುಕೊಂಡು ಸರಿಯಾದ ಭಾವವನ್ನು ತಾಳದೆ ಅಂಥ ಪರಿಸ್ಥಿತಿಯು ಎಂದೂ ಬರಲಾರದು.

ಉದಾರ ಬುದ್ಧಿಯ ಕೆಲಸಗಾರರಲ್ಲಿ ಕೂಡ ಹರಿಜನರು ತಮ್ಮ ಕೆಟ್ಟ ಅಭ್ಯಾಸಗಳನ್ನು ತ್ಯಜಿಸಿ ವಿದ್ಯೆಯನ್ನು ಪಡೆದು ನಿರ್ಮಲವಾಗಿ ಜೀವಿಸಲಿಕ್ಕೆ ಕಲಿತ ನಂತರವೇ ಅಸ್ಪೃಶ್ಯತೆಯನ್ನು ತೆಗೆಯಬೇಕೆಂದು ಹೇಳುವವರನ್ನು ನಾನು ಕೇಳಿದ್ದೇನೆ. ಹರಿಜನರು ಅಸ್ಪೃಶ್ಯರಾಗಿರುವ ತನಕ ಅವರಿಗೆ ಇಚ್ಛೆ ಇದ್ದರೂ ಅವರು ಈ ಸುಧಾರಣೆಗಳನ್ನು ಮಾಡಿಕೊಳ್ಳಲಾರರೆಂಬುದನ್ನು ಇವರು ಸಂಪೂರ್ಣ ಮರೆಯುತ್ತಾರೆ. ಸವರ್ಣ ಹಿಂದುಗಳು ಸುಧಾರಿತರಾದ ಹರಿಜನರನ್ನು ಸಮಾನತೆಯಿಂದ ನಡೆಸುವುದಿಲ್ಲವೆಂಬುದನ್ನೂ ಅವರಲ್ಲಿ ಅತ್ಯುತ್ತಮರಾದವರಿಗೆ ಕೂಡ ದಿನನಿತ್ಯದ ವ್ಯವಹಾರಗಳಲ್ಲಿ ಸಮಾನತೆಯನ್ನು ತೋರಿಸುವುದಿಲ್ಲವೆಂಬುದನ್ನೂ ಇವರು ಮರೆಯುತ್ತಾರೆ. ಅವರ ಜನ್ಮವೇ ಅವರಿಗೆ ಆಮರಣಾಂತ ಟಾಪಿನ ಶಿಕ್ಷೆಗೆ ಗುರಿಮಾಡುವ ಸಹಜ ಕಾರಣವಾಗಿ ಉಂಟು. ಯಾವ ಸುಧಾರಣೆಗಳಿಂದ ಅಥವಾ ಯಾವ ಕಾರಣಗಳಿಂದಲೂ ಈ ಶಿಕ್ಷೆಯನ್ನು ತೆಗೆಯಲಿಕ್ಕೆ ಈಗ ಬಾರದಂತಾಗಿದೆ. ಹೀಗಿರುವುದರಿಂದ ಜೀವನವನ್ನು ಸುಧಾರಿಸಲಿಕ್ಕೆ ಅವರಿಗೆ ಯಾವ ಉತ್ಸಾಹವೂ ಇಲ್ಲ ಮಾತ್ರವಲ್ಲ ಇರುವುದು ಸಾಧ್ಯವೂ ಇಲ್ಲ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಒಂದೇ ದಾರಿಯಿದೆ. ಸವರ್ಣ ಹಿಂದುಗಳು ಯಾವ ಶರ್ತಗಳೂ ಇಲ್ಲದೆ ಅವರನ್ನು ತಮ್ಮವರನ್ನಾಗಿ ಸ್ವೀಕರಿಸಬೇಕು. ಬಳಿಕ ಅವರು ತಮ್ಮ ಮನುಷ್ಯತ್ವದ ಗೌರವವನ್ನು ತಿಳಿಯಬಲ್ಲರು. ಆಗ ಮಾತ್ರ ಅವರ ಪರಿಸ್ಥಿತಿಯು ವಿಶಾಲಕಾರ್ಯಕ್ಷೇತ್ರದಲ್ಲಿ ಸುಧಾರಿಸುವುದು ಸಾಧ್ಯವಾಗುವುದು.

ಆದುದರಿಂದ ಕಾರ್ಯಕ್ರಮದಲ್ಲಿ ಮೊದಲನೆಯ ಮತ್ತು ಪ್ರಧಾನ ವಿಷಯವೆಂದರೆ ಸವರ್ಣ ಹಿಂದುಗಳ ಅಭಿಪ್ರಾಯ ಬದಲಾವಣೆಯ ಬಗ್ಗೆ ಬೇಕಾದ ಪ್ರಬಲ ಪ್ರಚಾರಕಾರ್ಯ. ವ್ಯಕ್ತಿಶಃ ಪ್ರತಿಯೊಬ್ಬರನ್ನು ಕಂಡು ಚರ್ಚಿಸುವುದರಿಂದಲೂ ಈ ಕುರಿತು ಬರವಣಿಗೆಗಳನ್ನು ದೇಶದಲ್ಲೆಲ್ಲ ತುಂಬುವುದರಿಂದಲೂ ಈ ಕೆಲಸವನ್ನು ಮಾಡಬಹುದು.

ನನ್ನ ಅಭಿಪ್ರಾಯದಲ್ಲಿ ಅಸ್ಪೃಶ್ಯತೆಯು ಅಸತ್ಯದಂತೆ ಸ್ವಯಂವೇದ್ಯವಾದ ಪಾಪವು. ಇದಕ್ಕೆ ಶಾಸ್ತ್ರಾಧಾರವು ಬೇಕಾಗಿಲ್ಲ. ಆದರೂ

ಜನ್ಮದ ಮೇಲೆ ಹೊಂದಿರುವ ಅಸ್ಪೃಶ್ಯತೆಯನ್ನು ಶಾಸ್ತ್ರಾಧಾರಗಳಿಂದ ಸಮರ್ಥಿಸುವ ಪಂಡಿತರನೇಕರಿರುವುದರಿಂದ ಕೆಲಸಗಾರರು ಈ ಕುರಿತು ಸುಧಾರಕರ ಬರವಣಿಗೆಗಳನ್ನು ತಿಳಿದಿರುವುದು ಅಗತ್ಯವಿರುತ್ತದೆ.

ಈಗ ನಂಬುವ ಮತ್ತು ಆಚರಿಸಲ್ಪಡುವ ಅಸ್ಪೃಶ್ಯತೆಗೆ ಯಾವ ಶಾಸ್ತ್ರಾಧಾರವೂ ಇಲ್ಲವೆಂದು ಖಂಡಿತ ಅಭಿಪ್ರಾಯಕ್ಕೆ ಬಂದಿರುವ ಪಂಡಿತರ ಸಂಖ್ಯೆಯೂ ಹೆಚ್ಚಾಗುತ್ತಲಿದೆ. ಈ ಪ್ರಚಾರವನ್ನು ಕೈಕೊಳ್ಳುವ ಕೆಲಸಗಾರರಿಗೆ ನಡತೆಯು ಒಳ್ಳೆಯದಿರಬೇಕು. ಅಪಮಾನಗಳನ್ನು ಸಹಿಸುವ ಶಕ್ತಿ ಇರಬೇಕು. ವಿರುದ್ಧಪಕ್ಷದ ತರ್ಕಗಳನ್ನು ಸಾವಧಾನದಿಂದ ಕೇಳುವ ತಾಳ್ಮೆ ಬೇಕು ಮತ್ತು ಆ ತರ್ಕಗಳಿಗೆ ಉತ್ತರ ಕೊಡುವ ಬುದ್ಧಿಯೂ ಬೇಕು.

ಧಾರ್ಮಿಕ ಸುಧಾರಣೆಯ ಚಳವಳದಲ್ಲಿ ಯಾವದೇ ರೂಪದ ಬಲಾತ್ಕಾರಕ್ಕೆ ಸ್ಥಳವಿಲ್ಲ. ಸುಧಾರಕರು ಪ್ರಬಲವಾದ ಪ್ರಚಾರಕಾರ್ಯ ಮಾಡಿ ವ್ಯಕ್ತಿಶಃ ಅಭಿಪ್ರಾಯಗಳನ್ನು ಬದಲಾಯಿಸಲಿಕ್ಕೆ ಪ್ರಯತ್ನಿಸಿದ ನಂತರ ಕೂಡಾ ಹಿಂದುಗಳಲ್ಲಿ ಹೆಚ್ಚಿನವರು ಅಸ್ಪೃಶ್ಯತೆಯ ಪಾಪವನ್ನು ತಿಳಿಯುವುದಿಲ್ಲವೆಂದಾದರೆ, ಅದನ್ನು ತೆಗೆಯಲಿಕ್ಕೆ ಸಿದ್ಧರಿಲ್ಲವೆಂದಾದರೆ ಅಂದರೆ ಹರಿಜನರಿಗೆ ಸಮಾನತೆಯನ್ನು ಕೊಡಲು ಸಿದ್ಧರಿಲ್ಲದಿದ್ದರೆ ಆಗ ಸುಧಾರಕರು ಈ ಪರಿಸ್ಥಿತಿಯನ್ನು ಒಪ್ಪಿಕೊಳ್ಳಬೇಕು. ಬಹುಮತದ ಕಡೆಗೆ ತಾಳ್ಮೆ ತಪ್ಪದೆ ತಮ್ಮ ಕಷ್ಟಸಹನೆಯಿಂದ ತಮ್ಮ ಅಭಿಪ್ರಾಯವೇ ಸತ್ಯವೆಂದೂ ಬಹುಮತದ ಅಭಿಪ್ರಾಯವು ಸರಿಯಲ್ಲವೆಂದೂ ಆಗ ಅವರು ತೋರಿಸಲಿಕ್ಕೆ ಸಿದ್ಧರಾಗಬೇಕು. ಹರಿಜನರಿಗೆ ಇಲ್ಲದ ಹಕ್ಕುಗಳು ತಮಗೂ ಬೇಡವೆಂದು ತ್ಯಜಿಸಿ ಹರಿಜನರೊಡನೆ ಸಮಾನರಾಗಿ ವರ್ತಿಸುವುದರಿಂದ ಈ ಕಾರ್ಯವನ್ನು ಚೆನ್ನಾಗಿ ಮಾಡಬಹುದು. ಅನೇಕ ಸ್ತ್ರೀಪುರುಷರು ಈ ರೀತಿ ತೋರಿಸುವ ತ್ಯಾಗದಿಂದಲೇ ಹರಿಜನರಲ್ಲಿ ಆಶೋದಯವಾಗುವುದು. ತಮ್ಮ ವಿಷಯದಲ್ಲಿ ಅವರಿಗಿರುವ ಅಭಿಪ್ರಾಯವು ಸುಧಾರಣೆಯಾಗುವುದು ಮತ್ತು ತಮ್ಮ ಸುಧಾರಣೆಗಳನ್ನು ಮಾಡಿಕೊಳ್ಳುವುದರಲ್ಲಿ ಅವರು ಉತ್ಸಾಹಹೊಂದುವರು.

ಸವರ್ಣಹಿಂದುಗಳಲ್ಲಿ ಮಾಡಬಹುದಾದ ಅತೀ ಪರಿಣಾಮಕಾರಿಯಾಗುವ ಕೆಲಸವೆಂದರೆ ಪ್ರತಿ ಕುಟುಂಬದವರು ತಮ್ಮ ಮನೆಗಳಲ್ಲಿ ಸೇವಕನಾಗಿಯಾದರೂ ಒಬ್ಬೊಬ್ಬನನ್ನು ತೆಗೆದುಕೊಳ್ಳುವಂತೆ ಮಾಡುವುದು. ಒಬ್ಬ ಅತಿಥಿಗಾದರೂ ಅನ್ನಹಾಕದೆ ಊಟಮಾಡಬಾರದೆಂಬ ಹಳೆಯ ಸಂಪ್ರದಾಯವೊಂದು ಅನೇಕ ಶ್ರೀಮಂತ ಹಿಂದೂ ಮನೆಗಳಲ್ಲಿ ಇದೆ. ಈಗಿನ ದಿನಗಳಲ್ಲಿ ಈ ಸಂಪ್ರದಾಯದ ಆಚರಣೆಯು ಕಡಮೆಯಾಗುತ್ತಿದೆ. ದಿನಸಿತ್ಯದ ಪಂಚಯಜ್ಞಗಳಲ್ಲಿ ಇದು ಒಂದು ಎಂದು ಹೇಳುತ್ತಾರೆ. ನಮ್ಮೊಡನೆ ಹರಿಜನರಿಗೆ ಊಟಕೊಡುವುದಕ್ಕಿಂತ ಈ ಯಜ್ಞವನ್ನು ಉತ್ತಮರೀತಿಯಲ್ಲಿ ಮಾಡುವುದು ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಇದನ್ನು ಸಹಭೋಜನದೊಡನೆ ತಪ್ಪಾಗಿ ತಿಳಿಯಬಾರದು. ಸಹಭೋಜನವೆಂದರೆ ಯಾರ ಆಹಾರವನ್ನು ನೀವು ಮುಟ್ಟಬಹುದೋ ಅಥವಾ ಯಾರು ನಿಮ್ಮ ಆಹಾರವನ್ನು ಮುಟ್ಟಬಹುದೋ ಅವರೊಡನೆ ಊಟವೆಂದು ನನ್ನ ಅಭಿಪ್ರಾಯ. ಒಂದೇ ಮಾಡಿನ ಕೆಳಗೆ ಪರಸ್ಪರ ಸ್ಪರ್ಶವಿಲ್ಲದೆ ಮಾಡುವ ಊಟವು ಸಹಭೋಜನವಲ್ಲ. ಹರಿಜನರ ಅಸ್ಪೃಶ್ಯತೆಯನ್ನು ಹೋಗಲಾಡಿಸಿದರೆ ಅವರಿಗೆ ಇತರ ಜಾತಿಯವರಿಗೆ ನಾವು ಊಟಕೊಡುವಂತೆ ಕೊಡಲಿಕ್ಕೆ ಆಕ್ಷೇಪವಿರಲಾರದು.

ಸವರ್ಣಹಿಂದುಗಳಲ್ಲಿರುವ ಎಷ್ಟೊ ಮದುವೆ, ಉಪನಯನಗಳಂಥ ಸಾಮಾಜಿಕ ಹಬ್ಬಗಳ ಸಂದರ್ಭಗಳಲ್ಲಿ ಹರಿಜನರಿಗೆ ಯಾರೂ ಕರೆಯುವುದಿಲ್ಲ. ಮನೆತನದ ಸುಖದುಃಖಗಳಲ್ಲಿ ದನಕರುಗಳಿಗೆ ಕೂಡಾ ಭಾಗವಿದೆ. ಆದರೆ ಹರಿಜನರಿಗಿಲ್ಲ. ಒಂದು ವೇಳೆ ಇದ್ದರೂ ಅದರಿಂದ ಅವರಿಗೆ ಹರಿಜನರು ಸವರ್ಣಹಿಂದುಗಳಂತೆ ಮನುಷ್ಯರಲ್ಲವೆಂದು ನೆನಪು ಚೆನ್ನಾಗಿ ಉಳಿಯುವಂತೆ ಈ ಅವರ ಪಾಲಿನ ಭಾಗವಿರುತ್ತದೆ.

ಸವರ್ಣಹಿಂದುಗಳು ಈ ಪಾಪವನ್ನು ಪರಿಹಾರಮಾಡಿಕೊಳ್ಳುವಂತೆ ಅವರ ನಡುವೆ ಮಾಡಬಹುದಾದ ಹಾಗೂ ಮಾಡಬೇಕಾದ ಪ್ರಚಾರ ಮತ್ತೂ ಕೆಲಸಗಳ ಕೆಲವು ಉದಾಹರಣೆಗಳನ್ನು ಮಾತ್ರ

ನಾಸಿಲ್ಲಿ ಕೊಟ್ಟಿರುವೆನು. ಹೇಗೆ ಕುಟುಂಬದಲ್ಲಿ ಒಬ್ಬ ಬಹಿಷ್ಕೃತ ವ್ಯಕ್ತಿಯನ್ನು ಪುನಃ ಕರೆದುಕೊಳ್ಳುವಾಗ ಅವನ ಕಡೆಗೆ ಹೆಚ್ಚಿನ ಆದರವು ತೋರಿಸಲಾಗುವುದೋ ಅದೇ ರೀತಿ ಸವರ್ಣಹಿಂದುಗಳು ಹರಿಜನರ ನಡುವೆ ಕೆಲಸಮಾಡಬೇಕಾಗಿದೆ. ತಮ್ಮ ಪಾಪವನ್ನು ಅವರು ನಿಜವಾಗಿ ಕಂಡುಕೊಂಡರೆ ಅವರು ಹರಿಜನರ ನಡುವೆ ಗುರುಗಳಂತೆ ಅಥವಾ ಉದ್ಧಾರಕರಂತೆ ಹೋಗುವ ಬದಲು ಸಾಲಗಾರರು ಸಾಲ ಕೊಟ್ಟವರ ಬಳಿಗೆ ಅದನ್ನು ತೀರಿಸಲು ಹೋಗುವವರಂತೆ ಹೋಗಿ ನಮ್ರಭಾವದಿಂದ ಅವರ ಮಕ್ಕಳಿಗೂ ಅವರಿಗೂ ಕಲಿಸುವರು. ಮತ್ತು ಸಾಧ್ಯವಿದ್ದ ಎಲ್ಲಾ ವಿಧಗಳಲ್ಲಿ ಅವರಿಗೆ ಸಹಾಯಮಾಡುವರು.

ಇಂಥ ವಿಧಾಯಕ ಕಾರ್ಯಕ್ರಮವನ್ನು ಕೈಕೊಂಡರೆ ಅದು ಬಹಳ ದೀರ್ಘ ಹಾಗೂ ಬಹಳ ಖರ್ಚಿಗೆ ಕಾರಣವಾಗುವುದರಿಂದ ಅದರಿಂದ ಕೂಡಲೆ ಪರಿಣಾಮವು ಸಿಕ್ಕುವಂತಿಲ್ಲವೆಂದು ಕೆಲವರು ಸೂಚಿಸುತ್ತಾರೆ. ಕೆಲವು ಮಂದಿ ಸುಧಾರಕರು ಮಾತ್ರ ಈ ಕಾರ್ಯಕ್ಕೆ ಕೈಹಚ್ಚಿ ಇದೊಂದು ಪ್ರತ್ಯೇಕ ಕಾರ್ಯಕ್ರಮವನ್ನಾಗಿ ಮಾಡಿಕೊಂಡರೆ ಹಾಗಾಗುವುದೆಂಬುದು ನಿಜವಿರುತ್ತದೆ. ಆದರೆ ಆತ್ಮಶುದ್ಧಿಯ ಕಾರ್ಯಕ್ರಮದಲ್ಲಿ ಇದೊಂದು ವಿಷಯವೆಂದಿಟ್ಟುಕೊಂಡಲ್ಲಿ ಈ ಕೆಲಸಕ್ಕೆ ಪ್ರತ್ಯೇಕ ಸ್ವರೂಪವು ಪ್ರಾಪ್ತವಾಗುತ್ತದೆ. ಮರದ ಪರೀಕ್ಷೆಯು ಹಣ್ಣಿನಿಂದ ಗೊತ್ತಾಗುವಂತೆ ಸವರ್ಣಹಿಂದುಗಳ ಹೃದಯಬದಲಾವಣೆಯು ಈ ಕಾರ್ಯದಿಂದ ಗೊತ್ತಾಗುತ್ತದೆ. ಆದ್ದರಿಂದ ನಾವು ಕೆಲವು ಮಂದಿ ಹರಿಜನರನ್ನು ಮುಟ್ಟಿರುವೆವೆಂದಾಗಲಿ ಒಬ್ಬನಿಗೆ ಊಟ ಕೊಟ್ಟಿರುವೆವೆಂದಾಗಲಿ ಅವರು ಹೇಳಿದರೆ ಸಾಲದು. ಹೊಸತಾಗಿ ಹುಟ್ಟಿದ ಪ್ರೇಮದಿಂದ ಇದುವರೆಗೆ ಅಡಿಗೊತ್ತಲ್ಪಟ್ಟ ಈ ಜನರಿಗೆ ಅಗತ್ಯವುಳ್ಳ ಎಲ್ಲಾ ಸೇವೆಯನ್ನು ಮಾಡಲು ಇವರು ಆತುರಪಡಬೇಕು. ಮುಖ್ಯವಾಗಿ ಹರಿಜನರಿಗೆ ಸ್ವತಃ ಈ ನೂತನ ಜಾಗೃತಿಯು ತಿಳಿದು ಬರಬೇಕು. ಮತ್ತೂ ಸವರ್ಣಹಿಂದುಗಳು ಜೀವನದ ಎಲ್ಲಾ ವ್ಯವಹಾರಗಳಲ್ಲಿ ಅವರ ಒಡನಾಟವನ್ನು ಕಟ್ಟಿಕೊಳ್ಳದಿದ್ದರೆ ಇದು ಸಾಧ್ಯವಾಗುವಂತಿಲ್ಲ. ಜಾಗೃತಿಯು ಸರ್ವತ್ರವಾದರೆ ಈ ವಿಧಾಯಕ

ಕಾರ್ಯಕ್ಕೆ ಹೆಚ್ಚು ಖರ್ಚು ತಗಲುವಂತಿಲ್ಲ. ಸ್ಥಳೀಕ ಕೆಲಸಗಾರರು ಆಯಾ ಸ್ಥಳಗಳಲ್ಲಿ ಪ್ರತಿಫಲವಿಲ್ಲದೆ ಕೆಲಸವನಾಡುವರು. ಜಾಗೃತಿಯು ಸರ್ವತ್ರವಲ್ಲವೆಂದಾದರೆ ಕೆಲಸಗಾರರು ಇಮ್ಮಡಿ ಪ್ರಯತ್ನದಿಂದ ವಿಧಾಯಕ ಕೆಲಸವನ್ನು ಮಾಡುವುದು ಅವರ ಕರ್ತವ್ಯವಿರುತ್ತದೆ. ಆದುದರಿಂದ ಖರ್ಚು ಹೆಚ್ಚಾಗಲಿ ಕಡಮೆಯಾಗಲಿ ಎಷ್ಟೇ ಸಮಯ ತಾಗಲಿ ಸಂಘದ ಕಾರ್ಯಕ್ರಮಗಳಲ್ಲಿ ಇದೊಂದು ಮುಖ್ಯ ವಿಷಯವೆಂಬುದಕ್ಕೆ ನನಗೆ ಸಂಶಯವಿಲ್ಲ. ಎಲ್ಲಾ ಹರಿಜನ ಮಕ್ಕಳ ಬಳಿಗೆ ಹೋಗಲು ಹಾಗೂ ಔಷಧೋಪಚಾರ ಬೇಕಾಗುವ ಎಲ್ಲಾ ಹರಿಜನ ರೋಗಿಗಳ ಸಮೀಪಕ್ಕೆ ಹೋಗಲು ಅವರಿಗೆ ಸಾಧ್ಯವಾಗಲಿಕ್ಕಿಲ್ಲವಾದರೂ ಎಷ್ಟು ಸಾಧಿಸಲ್ಪಡುವುದೋ ಅದು ಇನ್ನೂ ಬರಲಿರುವ ಸಹಾಯದ ದ್ಯೋತಕವಾಗಬೇಕು. ಮಾತ್ರವಲ್ಲ ಈ ಕಾರ್ಯಕ್ಕೆ ಸಿಕ್ಕುವ ಧನಸಹಾಯವು ಸವರ್ಣ ಹಿಂದುಗಳ ಹೃದಯ ಬದಲಾವಣೆಯ ಅಳತೆಯನ್ನು ತೋರಿಸುವುದು.

ಈ ಕಾರ್ಯಕ್ರಮದಲ್ಲಿ ದೇವಸ್ಥಾನ ಪ್ರವೇಶದ ಕಾರ್ಯಕ್ರಮಕ್ಕೆ ಅತ್ಯಂತ ಮಹತ್ವದ ಸ್ಥಾನವಿರುತ್ತದೆ. ಸಾವಿರಾರು ಸಾರ್ವಜನಿಕ ದೇವಸ್ಥಾನಗಳನ್ನು ಅವರಿಗೆ ತೆರೆದು ಬಿಟ್ಟ ಕ್ಷಣದಲ್ಲೆ ಹೊಸ ಯುಗವು ಬಂದಿತೆಂದು ಅವರಿಗೆ ಕೂಡಲೆ ತಿಳಿಯುವಂತಾಗುತ್ತದೆ. ಒಮ್ಮೆ ಸಮಾಜದ ಬಹಿಷ್ಕೃತರಿದ್ದರೆಂಬುದನ್ನು ಅವರು ಮರೆತುಬಿಡುವರು. ದೇವಸ್ಥಾನಗಳಲ್ಲಿ ಇತರರೊಡನೆ ಬೆರೆಸುವುದರಿಂದ ಅವರ ಜೀವನದಲ್ಲಿ ಬದಲಾವಣೆಯಾಗುವುದು. ಅವರ ಆಕ್ಷೇಪಣೆಯ ಅಭ್ಯಾಸಗಳನ್ನು ಅವರು ಬಿಡುವರು. ಆದರೆ ನನ್ನ ಪತ್ರಲೇಖಕರಲ್ಲಿ ಕೆಲವರು ಕೇಳುತ್ತಾರೆ: ಈ ದೇವಸ್ಥಾನಗಳಿಗೆ ಬೆಲೆ ಏನಿದೆ? ಅಲ್ಲಿ ಈಗ ನಡೆಯದ ಅತ್ಯಾಚಾರವಿಲ್ಲ. ಒಂದಾನೊಂದು ದೊಡ್ಡ ದೇವಸ್ಥಾನದಲ್ಲಿ ನಡೆಯುವ ಅತ್ಯಾಚಾರದ ಒಂದು ಚಿತ್ರವನ್ನು ಒಬ್ಬ ಸ್ತ್ರೀಯು ಬರೆದುದು ನನ್ನೆದುರು ಇದೆ. ಇಂಥ ಕೆಲವು ದೊಡ್ಡ ದೊಡ್ಡ ದೇವಸ್ಥಾನಗಳ ಮೇಲೆ ತರುವ ಆರೋಪಗಳು ಎಷ್ಟರಮಟ್ಟಿಗೆ ನಿಜವೆಂದು ಹೇಳಲಾರೆನು. ದೇವಸ್ಥಾನ

ಗಳು ಸ್ಥಾಪಿಸುವಾಗ ಅವು ಇದ್ದಂತೆ ಈಗ ಇರುವುದಿಲ್ಲವೆಂಬುದನ್ನು ಒಪ್ಪಬೇಕು. ದೇವಸ್ಥಾನಗಳ ಸುಧಾರಣೆಯು ಪ್ರತ್ಯೇಕ ವಿಷಯವಿರುತ್ತದೆ. ಅವು ಈಗ ಕೆಟ್ಟ ಸ್ಥಿತಿಯಲ್ಲಿವೆಯೆಂಬುದು ಹರಿಜನರಿಗೆ ಪ್ರವೇಶ ಕೊಡದಿರಲಿಕ್ಕೆ ಕಾರಣವಾಗಬಾರದು. ಈ ದೇವಸ್ಥಾನಗಳಿಗೆ ಹೋಗುವ ಸಾವಿರಾರು ಬಡಜನರಲ್ಲಿ ಇನ್ನೂ ಶುದ್ಧಭಾವವಿದೆಯೆಂಬುದು ನನಗೆ ಗೊತ್ತಿದೆ. ದೊಡ್ಡ ದೇವಸ್ಥಾನಗಳ ವಿಷಯದಲ್ಲಿ ಆರೋಪಗಳು ನಿಜವಿರಬಹುದಾದರೂ ಗ್ರಾಮದೇವಸ್ಥಾನಗಳ ವಿಷಯದಲ್ಲಿ ಅವು ನಿಜವಲ್ಲವೆಂಬುದಕ್ಕೆ ಸಂಶಯವಿಲ್ಲ. ಗ್ರಾಮದ ಜನರಿಗೆ ಈ ಹಿಂದೆಯೂ ಈಗಲೂ ಈ ದೇವಸ್ಥಾನಗಳಿಂದ ರಕ್ಷಣೆ ದೊರೆಯುತ್ತದೆ. ದೇವಸ್ಥಾನವಿಲ್ಲದೆ ಹಳ್ಳಿಯ ಹಿಂದುಗಳ ಜೀವನವನ್ನು ಊಹಿಸಲಿಕ್ಕೆ ಸಾಧ್ಯವಿಲ್ಲ. ಜನನವಾಗಲಿ ಮರಣವಾಗಲಿ ಮದುವೆಯಾಗಲಿ ದೇವಸ್ಥಾನಕ್ಕೆ ಅದರಲ್ಲಿ ವಿಶೇಷ ಸಂಬಂಧವಿದ್ದೇ ಇದೆ. ಆದುದರಿಂದ ಈಗ ಇದ್ದಂತೆ ಹರಿಜನರಿಗೆ ಅಲ್ಲಿ ಪ್ರವೇಶ ದೊರೆಯಬೇಕು.

ಇನ್ನೊಬ್ಬ ಲೇಖಕನು ಬರೆಯುತ್ತಾನೆ:—'ಸ್ವಚ್ಛತೆ ಮೊದಲಾದ ಕೆಲವು ನಿಯಮಗಳನ್ನಾದರೂ ಹರಿಜನರು ಅನುಸರಿಸಬೇಕೆಂದು ಒತ್ತಾಯಮಾಡದಿದ್ದರೆ ದೇವಸ್ಥಾನಗಳ ಈಗಿದ್ದ ಗೌರವವು ಕೂಡಾ ಹಾಳಾಗುವುದು.' ಇಂಥ ಗಂಡಾಂತರ ಬರುವುದೆಂದು ನಾನು ಭಾವಿಸುವುದಿಲ್ಲ. ನಾನು ಹೇಳುವುದೇನೆಂದರೆ ಇತರ ಹಿಂದುಗಳಿಗೆ ಇಲ್ಲದ ಶರ್ತಗಳನ್ನು ಹರಿಜನರಿಗೆ ಪ್ರತ್ಯೇಕವಾಗಿ ಹಾಕುವುದು ಸರಿಯಲ್ಲ, ಡಾಕ್ಟರ್ ಭಗವಾನ್‌ದಾಸರು ಹೇಳುವಂತೆ ಅಸ್ಪೃಶ್ಯತೆಯನ್ನು ಅರ್ಥವಿಲ್ಲದೆ ಜಾತೀಯವಾಗಿ ಮಾಡುವುದಕ್ಕಿಂತ ಪ್ರತಿಯೊಬ್ಬನ ನಡತೆಯಿಂದ ಸ್ಪೃಶ್ಯಾಸ್ಪೃಶ್ಯತೆಯನ್ನು ನಿರ್ಧರಿಸುವುದು ಉತ್ತಮವಿರುತ್ತದೆ. ಆಂತರಿಕ ಸ್ವಚ್ಛತೆಯನ್ನು ಕ್ರಮಕ್ಕೊಳಪಡಿಸುವುದು ಸಾಧ್ಯವಿಲ್ಲ. ಹೊರಗಿನ ನಡತೆಯ ಬಗ್ಗೆ ಕ್ರಮಗಳನ್ನು ಮಾಡಬಹುದು. ಯಾರು ಶುಚಿಯಾಗದೆ, ಸ್ನಾನಮಾಡದೆ, ಕುಡಿದು ಇರುತ್ತಾರೊ ಅಂಥವರನ್ನು ಆ ಸ್ಥಿತಿಯಲ್ಲಿರುವಾಗ ಅಸ್ಪೃಶ್ಯರೆನ್ನಬಹುದು. ಅಶುಚಿಯಾದ ಮನುಷ್ಯನು ಯಾವ

ನಾಗರಿಕ ಸಮಾಜದಲ್ಲಿಯೂ ಅಸ್ಪೃಶ್ಯನೇ ಇರುವನು. ಶು
ನೆವನವನ್ನು ಕಟ್ಟಿಕೊಂಡು ಸವರ್ಣ ಹಿಂದುಗಳು ಹರಿಜನರಿಗೆ ಸ
ಬೇಕಾದ ಋಣದಿಂದ ಅವರನ್ನು ವಂಚಿಸಲಾಗದು. ಅವರು ಇ
ಅವರನ್ನು ಸ್ವೀಕರಿಸುವುದೇ ಮೊದಲನೆಯ ಮೆಟ್ಟಲು. ಈಗ ಇ
ಕ್ರಮಗಳಿಗೆ ಇವರು ಅನುಸರಿಸುವಂತೆ ಮಾತ್ರ ನೋಡಬೇಕು.
ಗಾಗಿ ಹೊಸ ಕ್ರಮಗಳನ್ನು ತರಲಾಗದು. ಹರಿಜನರಿಗೆ ನಿಜ
ಯಥಾರ್ಥ ಬುದ್ಧಿಯಿಂದ ಪ್ರವೇಶಕೊಟ್ಟ ಬಳಿಕ ಬೇಕಾದರೆ
ಕ್ರಮಗಳನ್ನು ಸರ್ವರಿಗಾಗಿ ಮಾಡಬಹುದು.

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.